# ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ|| ಕೆ. ಎಸ್. ಆಮೂರ
ಎಂ. ಎಸ್ಸಿ, ಪಿಎಚ್‌ಡಿ
ಶಿವಗಿರಿ, ಧಾರವಾಡ – 580 007.
Ph : 0836 - 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ|| ಗುರುಲಿಂಗ ಕಾಪಸೆ
ಡಾ|| ಪಾರ್ವತಿ ನಾರಾಯಣರಾವ್
ಡಾ|| ಸುಶೀಲಾ ಬಳುಂಡಗಿ

**ಡಿ.ಟಿ.ಪಿ. :**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.), ಜೆ. ಪಿ. ನಗರ, ಮೊದಲನೇ ಹಂತ, ಬೆಂಗಳೂರು – 560 078.

**ಅಫ್ ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ. ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.), ಜೆ. ಪಿ. ನಗರ, ಮೊದಲನೇ ಹಂತ, ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಎಸ್. ಸಬ್ನೀಸ್,
ಕಾರ್ಯದರ್ಶಿ, ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
ಶ್ರೀ ಅರವಿಂದ ಮಾರ್ಗ
ಜೆ. ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.), ಶ್ರೀ ಅರವಿಂದ ಮಾರ್ಗ, ಜೆ. ಪಿ. ನಗರ,
ಮೊದಲನೇ ಹಂತ,
ಬೆಂಗಳೂರು – 560 078.
Ph : 080 - 2244 9882

## ಪರಿವಿಡಿ

## ''ಜನ್ಮದಿನಗಳು''

**(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ನುಡಿಗಳು)**

| | ಪುಟ |
|---|---|
| **ಅನು : ಶ್ರೀ ಎಸ್.ಆರ್. ಮಳಗಿ** | |
| ಜನ್ಮದಿನಗಳ ಮಹತ್ವ | 02 |
| ಜನ್ಮದಿನಗಳಂದು ಇರುವ ಗ್ರಹಣ ಶಕ್ತಿ | 04 |
| ಪ್ರತಿಯೊಂದಕ್ಕೂ ಒಂದು ಲಯಬದ್ಧತೆ ಇದೆ | 06 |
| **ಅನು : ಡಾ. ಕೆ.ಎಸ್. ಆಮೂರ** | |
| ಆರ್ (R) ಳಿಗೆ ಅವಳ ಜನ್ಮದಿನದಂದು (ಕವಿತೆ) | 10 |
| **ಅನು : ಶ್ರೀ ಪುರುಷೋತ್ತಮ ಗಲಗಲಿ** | |
| ಭಗವಂತ ಸಂಕಲ್ಪಿಸಿದ ಗುರಿಯೊಂದರೆಡೆಗೆ ಸನಾತನ ಶಕ್ತಿ ನಮ್ಮನ್ನು ಕರೆದೊಯ್ಯುವುದು | 12 |
| ಕಪ್ತಾನನ ಧ್ವನಿಯಲ್ಲಿ ವಿಶ್ವಾಸವಿರಿಸುತ್ತ ಸಾಗರದ ದೂರದಾಚೆಯನ್ನು ಬೆಂಬತ್ತಿ ನಡೆ | 17 |
| ಸಂತಸದಿಂದಿರು, ಉಕ್ಕೇರುತ್ತಿರುವ ಅಲೆಗಳಿಗೆ ಅಂಜದಿರು, ಸದಾ ನಮ್ಮ ಕಪ್ತಾನ ಚುಕ್ಕಾಣಿಯನ್ನು ದೃಢವಾಗಿ ಹಿಡಿದಿರುವನು | 19 |
| ಭಗವಂತನ ಕೃಪೆಯಲ್ಲಿ ವಿಶ್ವಾಸವಿರಿಸುತ್ತ ಅವನ ಸಂಕಲ್ಪವನ್ನು ಎದುರು ನೋಡು, ಅವನೇ ಮುನ್ನಡೆಸಲಿ | 21 |
| ಹೊಡೆದೋಡಿಸುವ ಬಿರುಗಾಳಿ ಮಳೆಗಳಿಂದಾಚೆ ಮುಂಬರುವ ಪ್ರಕಾಶಮಯ ದಿನಗಳಿಗಾಗಿ ಕಾದು ನೋಡು | 23 |
| **ಅನು : ಶ್ರೀ ಎಸ್.ಜಿ. ಕರೂರ** | |
| ನೀನು ಜನ್ಮ ಪಡೆದುದನ್ನು ಸಾರ್ಥಕಗೊಳಿಸು | 25 |
| **ಅನು : ಡಾ. ಕೆ.ಎಸ್. ಆಮೂರ** | |
| ಸಾಧಕರಿಗೆ ಜನ್ಮದಿನದ ಸಂದೇಶಗಳು | 29 |
| ಮನುಷ್ಯ ತನ್ನ ಜೀವನದಲ್ಲಿ ಎಂದಿಗೂ ಮರೆಯಬಾರದ ವಿಷಯ ಯಾವುದು? | 31 |
| **ಅನು : ದಿ. ಶಂಕರ ಜೋಶಿ** | |
| ಗೀತಾ ಪ್ರಬಂಧಗಳು : ಅಧ್ಯಾಯ – 15 ಅವತಾರ ತಾಳುವಿಕೆಯ ಸಾಧ್ಯತೆ ಹಾಗೂ ಉದ್ದೇಶ | 32 |
| ವಾರ್ತಾ ಪತ್ರ | 49 |

★ ★ ★



## ಜನ್ಮದಿನಗಳ ಮಹತ್ವ

(ಶ್ರೀಮಾತೆಯವರೊಡನೆ ಮೋನಾ ಸರ್ಕಾರ ನಡೆಸಿದ ಮಾತುಕತೆಗಳ ಸಂಗ್ರಹದಿಂದ ಆಯ್ದುಕೊಂಡದ್ದು. Sweet Mother - Luminous notes.)

ಶ್ರೀಮಾತೆ : ನಾಳೆ ನಿನ್ನ ಜನ್ಮದಿನವಲ್ಲವೆ?

ಸಾಧಕ : *ಹೌದು, ಶ್ರೀಮಾತೆಯವರೆ.*

ಶ್ರೀಮಾತೆ : ನಿನ್ನ ವಯಸ್ಸೆಷ್ಟಾಗುವುದು?

ಸಾಧಕ : *ಇಪ್ಪತ್ತಾರು, ಶ್ರೀಮಾತೆಯವರೆ.*

ಶ್ರೀಮಾತೆ : ನಾಳೆ ನಿನ್ನನ್ನು ಕಾಣುವೆ ಮತ್ತು ನಿನಗೊಂದು ವಿಶಿಷ್ಟ ಕಾಣಿಕೆ ಕೊಡುವೆ. ನಿನಗೇ ತಿಳಿದುಬರುವ ಹಾಗೆ ಅದೊಂದು ಭೌತಿಕವಸ್ತುವಾಗಿರುವುದಿಲ್ಲ-ನಾನು ನಿನಗೆ ಜನ್ಮದಿನ ಕುರಿತು ಶುಭಾಶಯಗಳಿರುವ ಕಾರ್ಡು ಹಾಗೂ ಅದರೊಂದಿಗಿರುವುದೆಲ್ಲವನ್ನೂ ಕೊಡುವೆ-ಅದಲ್ಲದೆ ಬೇರೆ ವಿಷಯವೊಂದಿದೆ. ನಾಳೆ ನಿನಗೆ ತಿಳಿಯುವುದು, ಈಗ ಮನೆಗೆ ಹೋಗು, ಅಚಂಚಲನಾಗಿ ತಯಾರಿ ಮಾಡಿಕೋ, ಅದರಿಂದಾಗಿ ನಾನು ಕೊಡುವುದನ್ನು ಸ್ವೀಕರಿಸಲು ಸಿದ್ಧನಾಗುವೆ.

ಸಾಧಕ : *ಹಾಗೆ ಆಗಲಿ, ಶ್ರೀಮಾತೆಯವರೆ.*

ಶ್ರೀಮಾತೆ : ಬೋನ್ ಫೆತೆ (Bonne Fete) ಎಂದು ನಾವು ಶುಭಾಶಯ ಬಯಸುವುದರ ಮಹತ್ವ ನಿನಗೆ ತಿಳಿದಿದೆಯೆ?

ಸಾಧಕ : *ಆ ರೀತಿಯಾಗಿ ಅದರರ್ಥ ನನಗೆ ತಿಳಿದಿದೆ, ಶ್ರೀಮಾತೆಯವರೆ, ಆದರೆ ನೀವು ಹೇಳಬಯಸುವ ವಿಶಿಷ್ಟ ಮಹತ್ವವೇನು ಎಂಬುದು ತಿಳಿದಿಲ್ಲ.*

ಶ್ರೀಮಾತೆ : ಹೌದು, ಮನುಷ್ಯನ ಜೀವನದಲ್ಲಿ ಜನ್ಮದಿನ ನಿಜವಾಗಿಯೂ ವಿಶಿಷ್ಟ ದಿನ. ವರ್ಷವೊಂದರಲ್ಲಿ ಬರುವ ಮಹತ್ವದ ದಿನಗಳಲ್ಲೊಂದಾದ ಜನ್ಮದಿನದಂದು ಭಗವಂತ ನಮ್ಮೊಳಗೆ ಇಳಿದು ಬರುವನು, ಆ ದಿನ ನಿತ್ಯಾತ್ಮನನ್ನು ಮುಖಾಮುಖಿಯಾಗಿ ಭೇಟಿ ಮಾಡುತ್ತೇವೆ, ಮತ್ತು ಅದು ನಮ್ಮ ಆತ್ಮ ಅವನೊಂದಿಗೆ ಸಂಪರ್ಕದಲ್ಲಿ ಬರುವ ದಿನಗಳಲ್ಲೊಂದು. ಆಗ ನಾವು ಸ್ವಲ್ಪ ಜಾಗ್ರತರಾಗಿದ್ದರೆ ನಮ್ಮೊಳಗೆ ಅವನ ಸಾನ್ನಿಧ್ಯವಿರುವುದರ ಅನುಭವವಾಗುತ್ತದೆ. ಆ ದಿನದಂದು ನಾವು ಸ್ವಲ್ಪ ಪ್ರಯತ್ನಪಟ್ಟರೆ ಸಾಕು ಮಿಂಚು ಝಳಪಿಸಿದಂತೆ ಹಲವು ಜನ್ಮಗಳಲ್ಲಿ ಸಾಧಿಸಬಹುದಾದ

ಮಹತ್ಕಾರ್ಯವನ್ನು ಸಾಧಿಸುತ್ತೇವೆ! ಈ ಕಾರಣಕ್ಕಾಗಿಯೇ ಜನ್ಮದಿನಕ್ಕೆ ನಾನು ಇಷ್ಟೊಂದು ಮಹತ್ವ ಕೊಡುತ್ತಿರುವುದು. ಆ ದಿನದಂದು ಮನುಷ್ಯ ಗಳಿಸಬಹುದಾದದ್ದು ನಿಜವಾಗಿಯೂ ಅನುಪಮವಾದುದು. ಇದಕ್ಕಾಗಿಯೇ ನಾನೂ ಕೂಡ ಸಾಧಕನ ಚೇತನವು ಮೇಲಿನ ದಿವ್ಯತೆಯತ್ತ ತೆರೆದುಕೊಳ್ಳುವಂತೆ ಸ್ವಲ್ಪ ಯತ್ನಿಸುತ್ತೇನೆ, ಇದರಿಂದಾಗಿ ಅವನು ಸನಾತನನ ಸಮ್ಮುಖದಲ್ಲಿ ಬರಬಹುದಾಗಿದೆ. ಮಗುವೆ, ಜನ್ಮದಿನ ನಿಜವಾಗಿಯೂ ಒಂದು ಅತ್ಯುತ್ಕೃಷ್ಟವಾದ ವಿಶಿಷ್ಟದಿನ, ಏಕೆಂದರೆ ಅದು ನಿರ್ಧಾರ ಕೈಕೊಳ್ಳುವ ದಿನ, ಪರಮ ಪ್ರಜ್ಞೆಯೊಡನೆ ಏಕತೆ ಪಡೆಯಬಹುದಾದ ದಿನ. ಏಕೆಂದರೆ ಆ ದಿನದಂದು ಭಗವಂತ ನಮ್ಮನ್ನು ಸಾಧ್ಯವಿದ್ದ ಅತ್ಯುಚ್ಚ ಹಂತದವರೆಗೆ ಮೇಲಕ್ಕೆತ್ತುವನು. ಅದರಿಂದಾಗಿ ಶಾಶ್ವತ ಜ್ಯೋತಿಯ ಭಾಗವಾದ ನಮ್ಮ ಆತ್ಮವು ತನ್ನ ಮೂಲದೊಡನೆ ಗುರುತಿಸಿಕೊಂಡು ಅದರೊಡನೆ ಏಕತೆ ಪಡೆಯಬಹುದಾಗಿದೆ.

ಈ ದಿನ ನಿಜವಾಗಿಯೂ ಜೀವನದಲ್ಲಿ ಒಂದು ಸದವಕಾಶ. ಅಂದು ಮನುಷ್ಯ ತನ್ನನ್ನು ಎಷ್ಟರಮಟ್ಟಿಗೆ ತೆರೆದಿಟ್ಟುಕೊಳ್ಳುತ್ತಾನೆ ಹಾಗೂ ಗ್ರಹಿಸಬಲ್ಲವನಾಗಿರುತ್ತಾನೆ ಎಂದರೆ ಕೊಟ್ಟದ್ದನ್ನೆಲ್ಲ ಅವನು ಆತ್ಮಸಾತ್ ಮಾಡಿಕೊಳ್ಳಬಲ್ಲ. ಆ ಸಮಯದಲ್ಲಿ ನಾನು ಬಹಳಷ್ಟು ಕಾರ್ಯಗಳನ್ನು ಅವನಲ್ಲಿ ಕೈಕೊಳ್ಳಬಲ್ಲೆ. ಅದಕ್ಕಾಗಿಯೇ ಅದು ಮಹತ್ವದ್ದಾಗಿದೆ.

ಭಗವಂತನೆ ಸ್ವತಃ ದ್ವಾರಗಳನ್ನು ವಿಶಾಲವಾಗಿ ತೆರೆದಿಡುವ ದಿನಗಳಲ್ಲಿ ಜನ್ಮದಿನವೂ ಒಂದು. ಭಗವಂತನೇ ಸ್ವತಃ ನಮ್ಮ ಅಭೀಪ್ಸೆಯ ಜ್ವಾಲೆಯನ್ನು ಪುನಃ ಪ್ರಜ್ವಲಿಸುವಂತೆ ಮಾಡಲು ನಮ್ಮನ್ನು ಆಮಂತ್ರಿಸುತ್ತಾನೆಯೋ ಎನ್ನುವಂತಿರುತ್ತದೆ. ಅವನು ನಮಗಾಗಿ ಒದಗಿಸುವ ಮಹತ್ವದ ದಿನಗಳಲ್ಲಿ ಜನ್ಮದಿನವೂ ಒಂದು. ನಾವೂ ಕೂಡ ಸ್ವ-ಪ್ರಯತ್ನದಿಂದ ಈ ಸ್ಥಿತಿ ತಲುಪಬಹುದು, ಆದರೆ ಅದಕ್ಕೆ ದೀರ್ಘಸಮಯ ಬೇಕು, ಅದಕ್ಕಾಗಿ ಮಾಡಬೇಕಾದ ಪ್ರಯತ್ನ ಕಠಿಣವಾಗಿರುತ್ತದೆ, ಸುಲಭವಾಗಿರುವುದಿಲ್ಲ. ಮತ್ತು ಇದು-ಜೀವನದಲ್ಲಿ ನಿಜವಾದ ಒಂದು ಸದವಕಾಶ-ದೈವೀಕೃಪೆಯ ದಿನ.

(ಮತ್ತೊಂದು ಸಂದರ್ಭದಲ್ಲಿ ಶ್ರೀಮಾತೆಯವರು ಕೊಟ್ಟ ವಿವರಣೆ)

ನಮಗರಿವಿಲ್ಲದೆ ವರ್ಷದ ಈ ವಿಶಿಷ್ಟ ದಿನದಂದು ಅದು ತಪ್ಪದೆ ಸಂಭವಿಸುವ ಒಂದು ಗುಹ್ಯ ಪ್ರಸಂಗ. ಆತ್ಮವು ದೇಹವನ್ನು ಹಿಂದೆ ಬಿಟ್ಟು ಮೇಲೆ ಪ್ರಯಾಣ ಬೆಳೆಸಿ ತನ್ನ ಉಗಮಸ್ಥಳದಲ್ಲಿ ಒಂದಾಗಿ ಭಗವಂತನಿಂದ ಆ ದಿವ್ಯ ಸಾಮರ್ಥ್ಯ, ಪ್ರಕಾಶ ಹಾಗೂ ದಿವ್ಯಾನಂದಗಳನ್ನು ಹೀರಿಕೊಂಡು ಇಡೀ ವರ್ಷ ಅವು ಉಳಿಯುವಂತೆ ಪರಿಪುಷ್ಟವಾಗಿ



ಕೆಳಗೆ ಬರುತ್ತದೆ. ಹೀಗೆಯೇ ಮತ್ತೆ, ಮತ್ತೆ ಪ್ರತಿವರ್ಷ ಮುಂದುವರಿಯುತ್ತದೆ.

**ಶ್ರೀಮಾತೆಯವರು ಜನ್ಮದಿನದ ಸಂದರ್ಭದಲ್ಲಿ ಸಾಧಕನೊಬ್ಬನಿಗೆ ಕೊಟ್ಟ ಸಂದೇಶ ಹಾಗೂ ಪ್ರಾರ್ಥನೆ**

ಸಂದೇಶ : ''ಧಾನ್ಯದ ಕಾಳಿನ ಪ್ರಮಾಣದಷ್ಟು ಆಚರಣೆ ಪರ್ವತಪ್ರಾಯ ಶಾಸ್ತ್ರಗಳಿಗೆ ಸಮನಾಗಿದೆ.''

ಪ್ರಾರ್ಥನೆ : ''ಪ್ರಭು ನನ್ನ ಜನ್ಮದಿನಾಚರಣೆಯ ಈ ದಿನದಂದು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ನನ್ನನ್ನು ಸಮಗ್ರವಾಗಿ ಪರಿವರ್ತಿಸುವ ಸಾಮರ್ಥ್ಯವಾಗಿ ನನ್ನಲ್ಲಿ ಬದಲಾವಣೆ ಹೊಂದುವಂತೆ ಅನುಗ್ರಹಿಸು.''

★

(ಇನ್ನೊಂದು ಸಂದರ್ಭದಲ್ಲಿ ಶ್ರೀಮಾತೆಯವರು ವಿವರಿಸಿ ಹೇಳಿದ್ದು )

ಈ ಅನುಭವ ಸಾಮಾನ್ಯವಾಗಿ ಜನ್ಮದಿನದಂದು ಬರುತ್ತದೆ. ಆದರೆ ಮನುಷ್ಯ ಅದರ ಬಗ್ಗೆ ಸ್ವಲ್ಪವೂ ಅರಿವನ್ನು ಹೊಂದಿರುವುದಿಲ್ಲ. ಅದು ತಪ್ಪದೇ ಬರುತ್ತದೆ. ಎಲ್ಲ ಭೌತಿಕ ಹೊರೆಗಳನ್ನು ಹಿಂದಿರಿಸಿ ಆತ್ಮ ಮೇಲಕ್ಕೇರಿ ಹೋಗುತ್ತದೆ, ಸರ್ವೋಚ್ಚನಲ್ಲಿ ಮುಳುಗು ಹಾಕುತ್ತದೆ, ಅವನಿಂದ ಪರಿಪುಷ್ಟತೆ ಪಡೆಯುತ್ತದೆ ಮತ್ತು ಇಲ್ಲಿಗೆ ಮರಳಿ ಬಂದು ಅವನ ದಿವ್ಯಾನಂದದಲ್ಲಿ ಜೀವಿಸುತ್ತದೆ. ಮನುಷ್ಯನಲ್ಲಿ ಅದರ ಬಗ್ಗೆ ಅರಿವುಂಟಾಗದೆ ಇರುವುದರಿಂದ ಅವನು ಏನನ್ನೂ ಗ್ರಹಿಸಲಾರನು. **29-1-69**

★

## ಜನ್ಮದಿನಗಳಂದು ಇರುವ ಗ್ರಹಣಶಕ್ತಿ

**(16/413)** ಪ್ರಶ್ನೆ : *ಶ್ರೀಮಾತೆಯವರೆ, ಜನ್ಮದಿನದ ನಿಜವಾದ ಅರ್ಥವೇನು ಎಂಬುದನ್ನು ನಾನು ತಿಳಿಯ ಬಯಸುತ್ತೇನೆ.*

ಶ್ರೀಮಾತೆ : ಆಂತರಿಕ ಸ್ವಭಾವದ ದೃಷ್ಟಿಯಿಂದ ಹೇಳುವುದಾದರೆ ವ್ಯಕ್ತಿ ತನ್ನ ಜನ್ಮದಿನಗಳಂದು ವರ್ಷದಿಂದ ವರ್ಷಕ್ಕೆ ಹೆಚ್ಚು ಗ್ರಹಣಶೀಲನಾಗುತ್ತ ಹೋಗುತ್ತಾನೆ. ಮತ್ತು ಹೀಗೆ ಅವನು ಪ್ರತಿವರುಷ ಹೊಸ ಪ್ರಗತಿ ಸಾಧಿಸಲು ಸಹಾಯಮಾಡುವುದಕ್ಕೆ ಅದು ಒಂದು ಸದವಕಾಶವಾಗಿರುತ್ತದೆ.

ಪ್ರಶ್ನೆ : *ಮನುಷ್ಯ ತನ್ನ ಜನ್ಮದಿನವನ್ನು ಹೇಗೆ ಕಳೆಯಬೇಕು?*

ಶ್ರೀಮಾತೆ : ತನ್ನ ಜೀವನದ ಉದ್ದೇಶವೇನೆಂಬುದನ್ನು ಕಂಡುಕೊಳ್ಳುವುದಕ್ಕಾಗಿ ಬಳಸಬೇಕು.

**(17/172)** ಪ್ರಶ್ನೆ: *ಶ್ರೀಮಾತೆಯವರೆ, ಇಂದು ನನ್ನ ಜನ್ಮದಿನ, ಅದು ಹೆಚ್ಚಿನ ಆಧ್ಯಾತ್ಮಿಕ ಜೀವನದ ಪ್ರಾರಂಭದ ದಿನವಾಗಬೇಕೆಂದು ನನ್ನ ಇಚ್ಛೆ. ಆದ್ದರಿಂದ ನಾನು ಏನನ್ನಾದರೂ ಮಾಡಬೇಕಾಗಿದೆ. ದಯವಿಟ್ಟು ನಾನೇನು ಮಾಡಬೇಕೆಂಬುದನ್ನು ಹೇಳಿರಿ.*

ಶ್ರೀಮಾತೆ : ಏನು ಮಾಡಬೇಕೆಂಬುದನ್ನು ಮನಸ್ಸಿನಿಂದ ನಿಶ್ಚಯಿಸಕೂಡದು. ಅದು ನಿಷ್ಠೆಯಿಂದ ಕೂಡಿದ ಹಾಗೂ ಸತತ ಅಭೀಪ್ಸೆಯಿಂದ ಸ್ವಯಂಪ್ರೇರಿತವಾದ ಚಲನೆಯಾಗಿರಬೇಕು.

**(16/310)** ಪ್ರಶ್ನೆ : *ಶ್ರೀಮಾತೆಯವರೆ, ಜನ್ಮದಿನದ ನಿಜವಾದ ಅರ್ಥವೇನು ? ಪ್ರತಿವರ್ಷ ಜ್ಞಾಪಕಾರ್ಥವಾಗಿ ಆಚರಿಸುವ ದಿನವಲ್ಲದೆ ಅದರಲ್ಲಿ ಮತ್ತೇನಿದೆ? ಜನ್ಮದಿನದ ಈ ಸಂದರ್ಭವನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು?*

ಶ್ರೀಮಾತೆ : ವಿಶ್ವವ್ಯಾಪಿ ಶಕ್ತಿಗಳ ಲಯಬದ್ಧತೆಯಿಂದಾಗಿ ಮನುಷ್ಯ ಪ್ರತಿವರ್ಷ ತನ್ನ ಜನ್ಮದಿನದಂದು ವಿಶೇಷ ಗ್ರಹಣಶೀಲತೆಯನ್ನು ಹೊಂದಿರುತ್ತಾನೆಂದು ಹೇಳಲಾಗುತ್ತದೆ.

ಆದ್ದರಿಂದ ಅವನು ತನ್ನ ಸಮಗ್ರ ಅಭಿವೃದ್ಧಿಯ ಮಾರ್ಗದಲ್ಲಿ ಒಳ್ಳೆಯ ನಿರ್ಧಾರಗಳನ್ನು ಕೈಕೊಳ್ಳುತ್ತ ಮತ್ತು ಹೊಸ ಪ್ರಗತಿ ಸಾಧಿಸುತ್ತ ಈ ಗ್ರಹಣಶೀಲತೆಯ ಪ್ರಯೋಜನ ಪಡೆಯಬಲ್ಲ.

- ಶ್ರೀಮಾತೆ

(The Mother, p. 282)

ಪ್ರಶ್ನೆ : *ಸಾಧಕನ ಜನ್ಮದಿನದಂದು ಶ್ರೀಮಾತೆಯವರು ಅವನಿಗೆ ವಿಶೇಷ ಸಂದರ್ಶನ ಕೊಡುವುದರಲ್ಲಿ ವಿಶೇಷವೇನಾದರೂ ಇದೆಯೆ ?*

ಶ್ರೀ ಅ : ಸೂರ್ಯ ಹಾಗೂ ಗ್ರಹಗಳಿಗೆ ಸಂಬಂಧಪಟ್ಟ ವಿಶ್ವಶಕ್ತಿಗಳ ಲೀಲೆಯಲ್ಲಿ ಒಂದು ಲಯಬದ್ಧತೆ ಇದೆ. ಅದು ನವೀಕರಿಸಿಕೊಳ್ಳುವುದಕ್ಕೆ ಜನ್ಮದಿನ ಸಾಧ್ಯತೆಯನ್ನೊದಗಿಸುವಂತೆ ಮಾಡುತ್ತದೆ. ಅಂದು ವ್ಯಕ್ತಿ ಹೆಚ್ಚು ನಮನಶೀಲನಾಗಿರುವುದು ಸಾಧ್ಯ. ಈ ಕಾರಣದಿಂದಲೇ ಶ್ರೀಮಾತೆಯವರು ಜನರಿಗೆ ಅವರ ಜನ್ಮದಿನಗಳಂದು ಸಂದರ್ಶನವನ್ನೀಯುತ್ತಾರೆ.

ಪ್ರಶ್ನೆ : *ಜನ್ಮ ದಿನಗಳಂದು ಭೌತಿಕವು ಶ್ರೀಮಾತೆಯವರ ಪ್ರಭಾವಕ್ಕೆ ಹೆಚ್ಚು*



*ತೆರೆದುಕೊಂಡಿರುತ್ತದೆ ಎಂದು ನೀವು ಬರೆದಿದ್ದಿರಿ...*

ಶ್ರೀ ಅ : ಅದು ಭೌತಿಕದ ಇಲ್ಲವೆ ದೇಹದ ಜನ್ಮದಿನಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಆಂತರ್ಯದೊಳಗೆ ಬೆಳೆಯುತ್ತಿರುವ ಹೊಸಜನ್ಮದೊಂದಿಗೆ ಜೀವನದ ಹೊಸ ವರುಷವೊಂದಕ್ಕೆ ತೆರೆದುಕೊಳ್ಳುವ ಸದವಕಾಶವೆಂದು ಅದನ್ನು ಪರಿಗಣಿಸಲಾಗುತ್ತದೆ. ಈ ಅರ್ಥದಲ್ಲಿ ಜನ್ಮದಿನಗಳಿಗೆ ಶ್ರೀಮಾತೆಯವರು ಪ್ರಾಶಸ್ತ್ಯ ನೀಡಿದ್ದಾರೆ.

★

## ಪ್ರತಿಯೊಂದಕ್ಕೂ ಕಾಲದ ಲಯಬದ್ಧತೆ ಇದೆ

(ಶ್ರೀಮಾತೆಯವರು ಶ್ರೀ ಅರವಿಂದರ ''ಯೋಗ ಸಮನ್ವಯ (Synthesis of Yoga)'' ಗ್ರಂಥದಲ್ಲಿಯ 'ನಾಲ್ಕು ಸಾಧನಗಳು (Four Aids)' ಎಂಬ ಭಾಗವನ್ನು ಎತ್ತಿಕೊಂಡು ಓದುತ್ತಾರೆ. ಸಾಧಕನೊಬ್ಬ ಪ್ರಶ್ನೆ ಕೇಳುತ್ತಾನೆ.)

ಪ್ರಶ್ನೆ : *ಶ್ರೀಮಾತೆಯವರೆ, ದರ್ಶನದ ದಿನಗಳನ್ನು , ಡಿಸೆಂಬರ್ 5 ಮತ್ತು 9ನೆಯ ದಿನಗಳನ್ನು ಹಾಗೂ ನಮ್ಮ ಜನ್ಮದಿನಗಳನ್ನು ಹೇಗೆ ಕಳೆಯಬೇಕು?*

ಶ್ರೀಮಾತೆ : ದರ್ಶನ ದಿನಗಳನ್ನು ಸಾಮಾನ್ಯ ಜ್ಞಾನಕ್ಕಿಂತ ಹೆಚ್ಚು ಸತ್ಯವಾದ ಜ್ಞಾನವನ್ನು ಶೋಧಿಸುವುದಕ್ಕಾಗಿ.

ಡಿಸೆಂಬರ್ 5 ಮತ್ತು 9ನೆಯ ದಿನಗಳನ್ನು ಮೃತ್ಯು ಎಂದರೇನು ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ.

ಜನ್ಮದಿನಗಳನ್ನು ಜೀವನದ ಉದ್ದೇಶ ಏನಿರುತ್ತದೆ ಎಂಬುದನ್ನು ಶೋಧಿಸುವುದಕ್ಕಾಗಿ.

- ಶ್ರೀಮಾತೆ

**(7/336-38)** ಪ್ರಶ್ನೆ : *ಮಮತೆಯ ಮಾತೆಯವರೆ, ತಾವು ಓದಿದ್ದರಲ್ಲಿ ''ಕಾಲ ಉಪಕರಣವಾಗುವುದು ಕೊನೆಗೆ ಬರುತ್ತದೆ, ಏಕೆಂದರೆ ಎಲ್ಲದರಲ್ಲಿಯೂ ಅದರದರ ಕ್ರಿಯೆಯ ಚಕ್ರಗತಿ (cycle) ಇರುತ್ತದೆ ಮತ್ತು ದೈವೀ ಚಲನೆಯ ಅವಧಿಯೂ ಬಂದಿರುತ್ತದೆ'' ಎಂದಿದೆ. ಇಲ್ಲಿ ದೈವೀ ಚಲನೆಯ ಕಾಲವೆಂದರೆ ಯಾವುದು?*

ಶ್ರೀಮಾತೆ : ಪ್ರತಿಯೊಂದು ಸಂಗತಿಗೂ ಅದು ಭಿನ್ನ , ಭಿನ್ನವಾಗಿರುತ್ತದೆ.

ಪ್ರತಿಯೊಂದು ಕ್ರಿಯೆಗೂ, ಪ್ರತಿಯೊಂದು ಸಿದ್ಧಿಗೂ, ಪ್ರತಿಯೊಂದು ಚಲನೆಗೂ

ಪ್ರತ್ಯೇಕವಾದ ಕಾಲದ ನಿರ್ದಿಷ್ಟ ಅವಧಿಯೊಂದಿರುತ್ತದೆ, ಅದು ಭಿನ್ನವಾಗಿರುತ್ತದೆ. ಅಂತಹ ಕಾಲಾವಧಿಗಳು ಅಗಣಿತವಾಗಿದ್ದು ಒಂದು ಇನ್ನೊಂದರಲ್ಲಿ ತೊಡಗಿಕೊಂಡಿರುತ್ತದೆ. ಆದರೆ ಪ್ರತಿಯೊಂದು ಸಂಗತಿಯೂ ತನ್ನದೇ ಆದ ಒಂದು ಲಯಬದ್ಧತೆಯ ಕ್ರಮಕ್ಕೊಳ-ಪಟ್ಟಿರುತ್ತದೆ.

ನಿಮಗೆ ತಿಳಿದಿರುವ ಹಾಗೆ ಮಾನವರು ಬಾಹ್ಯಜೀವನದ ಸೌಕರ್ಯಕ್ಕಾಗಿ ವರ್ಷ, ತಿಂಗಳು, ದಿನ, ಗಂಟೆ, ಮಿನಿಟು, ಸೆಕೆಂಡು ಇತ್ಯಾದಿಗಳನ್ನು ಹೆಚ್ಚು , ಕಡಿಮೆ ಸ್ವೇಚ್ಛಾನುಸಾರವಾಗಿ ಕಾಲ ವಿಭಜನೆ ಮಾಡಲು ಉಪಯೋಗಿಸಿದ್ದಾರೆ... ಹೀಗೆ ವಿಭಜಿತ ಕಾಲಗತಿಯ ಲಯಬದ್ಧತೆ ಹೆಚ್ಚು , ಕಡಿಮೆ ಸ್ವೇಚ್ಛೆಯದಾಗಿರುತ್ತದೆ. ಏಕೆಂದರೆ ಅದು ಮಾನವ ನಿರ್ಮಿತ. ಆದರೆ ಅದರೊಳಗೇ ಒಂದು ನೈಜತೆಯಿದೆ, ಏಕೆಂದರೆ ಅದು ಶಕ್ಯವಿದ್ದ ಮಟ್ಟಿಗೆ ವಿಶ್ವಚಲನೆಯ ಲಯಬದ್ಧತೆಗಳಿಗೆ ಅನುಗುಣವಾಗಿರುತ್ತದೆ. ಹಾಗೆ ಹೇಳುವುದಾದರೆ ಉದಾಹರಣೆಗೆ ಅದೇ ಕಾರಣಕ್ಕಾಗಿ ನಾವು ಜನ್ಮದಿನದ ಸಮಾರಂಭವನ್ನು ಆಚರಿಸುತ್ತೇವೆ, ಏಕೆಂದರೆ ಪ್ರತಿಯೊಬ್ಬನ ಅಸ್ತಿತ್ವದಲ್ಲೂ ಒಂದು ಬಗೆಯ ಲಯಬದ್ಧತೆ ಇರುತ್ತದೆ, ಅದು ಅವನು ಹುಟ್ಟಿದ ಸಂದರ್ಭದಲ್ಲಿದ್ದ ಪರಿಸ್ಥಿತಿಗಳಿಗೆ ಸಮನಾದವುಗಳು ಮತ್ತೆ ಕ್ರಮಬದ್ಧವಾಗಿ ಬರುವುದರಿಂದ ಸ್ಥಾಪಿತವಾಗುತ್ತದೆ.

ಎಲ್ಲ ಚಲನೆಗಳು-ನೀವು ಅವನ್ನು ಅವಲೋಕಿಸಿದಾಗ ಅವುಗಳಿಗೆ ಒಂದು ಬಗೆಯ ಲಯಬದ್ಧತೆ ಇರುವುದರ ಅರಿವು ನಿಮಗಾಗುತ್ತದೆ-ಉದಾಹರಣೆಗೆ ತಿಳಿದುಕೊಳ್ಳುವ ದೃಷ್ಟಿಕೋನದಿಂದ ಮಾತ್ರವಷ್ಟೇ ಅಲ್ಲ, ಆದರೆ ವ್ಯಕ್ತಿಗತ ಪ್ರತಿಕ್ರಿಯೆಗಳ, ಪ್ರಗತಿಯಲ್ಲಾಗುವ ಏರಿಳಿತಗಳ ದೃಷ್ಟಿಕೋನದಿಂದ ಕಂಡುಕೊಳ್ಳಬಹುದಾದ ಆಂತರಿಕ ಚಲನೆಗಳು, ಮುಂದುವರಿಯುವ ಮತ್ತು ಹಿಂಜರಿತಕ್ಕೊಳಗಾಗುವ ಸಾಕಷ್ಟು ಕ್ರಮಬದ್ಧವಾಗಿ ಪುನರಾವರ್ತಿಸುವ ಚಲನೆಗಳು, ತೊಂದರೆಗಳ ಮತ್ತು ನೆರವಿನ ಚಲನೆಗಳು ಇತ್ಯಾದಿ. ಆದರೆ ಪ್ರತಿಯೊಬ್ಬ ವ್ಯಕ್ತಿ ಎಚ್ಚರಿಕೆಯಿಂದ ತನ್ನ ಜೀವನವನ್ನು ಪರಿಶೀಲಿಸಿದರೆ ತನ್ನ ಜೀವನದ ಲಯಬದ್ಧತೆ ತನಗೇ ವಿಶಿಷ್ಟವಾದುದು, ಅದು ನೆರೆಹೊರೆಯವನ ಲಯಬದ್ಧತೆಯಂತಹದಲ್ಲ ಎಂದು ಅವನಿಗೆ ಮನದಟ್ಟಾಗುತ್ತದೆ. ಋತುಮಾನಗಳು ಒಟ್ಟಿನಲ್ಲಿ ತಮ್ಮದೇ ಕ್ರಮಬದ್ಧ ಲಯಬದ್ಧತೆಯನ್ನು ಅನುಸರಿಸುತ್ತಿರುವಂತೆ ವ್ಯಕ್ತಿಯ ಜೀವನದಲ್ಲೂ ಋತುಮಾನಗಳಿರುತ್ತವೆ. ವ್ಯಕ್ತಿಯೊಬ್ಬನು ತನ್ನ ಜೀವನವನ್ನು ಲಕ್ಷ್ಯಗೊಟ್ಟು ಅಭ್ಯಸಿಸಿದಾಗ ವರ್ಷದ ಕೆಲವೊಂದು ನಿಯಮಿತ ಕಾಲಾವಧಿಗಳಲ್ಲಿ ಒಂದೇ ಬಗೆಯ



ಸನ್ನಿವೇಶಗಳು ಪುನರಾವೃತ್ತಿಗೊಳ್ಳುವುದನ್ನು ಕಾಣುತ್ತೇವೆ. ಬಹಳ ಸೂಕ್ಷ್ಮ ಪ್ರಕೃತಿಯ ಜನರಿಗಂತೂ ವಾರದ ಕೆಲವೊಂದು ನಿರ್ದಿಷ್ಟ ದಿನಗಳಂದು ತೊಂದರೆಗಳು ಕಾಣಿಸಿಕೊಳ್ಳುತ್ತವೆ, ಅದಕ್ಕೆ ತದ್ವಿರುದ್ಧವಾಗಿ ಕೆಲವರಿಗೆ ದಿನದ ಕೆಲವೊಂದು ನಿಮಿಷಗಳ ಅವಧಿಯಲ್ಲಿ ಹೆಚ್ಚಿನ ಸ್ಫೂರ್ತಿ ಸಿಗುತ್ತದೆ-ಆದರೆ ಪ್ರತಿಯೊಬ್ಬನೂ ಇದನ್ನು ತಾನೇ ಅವಲೋಕಿಸಿ ಕಂಡುಕೊಳ್ಳಬೇಕು, ಸ್ವಾಭಾವಿಕವಾಗಿ ಅದು (ಲಯಬದ್ಧತೆಯು) ಅಪ್ಪಟ ಸತ್ಯವಾದುದೇನಲ್ಲ , ಹೀಗೆಯೇ ನಡೆಯುವುದೆಂದೂ ಅಲ್ಲ. ಮತ್ತು ಇಂತಹ ಲಯಬದ್ಧತೆಯು ತೊಂದರೆದಾಯಕ ಎಂದು ಕಂಡುಬಂದರೆ ಅದನ್ನು ದೃಢಸಂಕಲ್ಪದಿಂದ ಕೂಡಿದ ಪ್ರಯತ್ನದ ಮೂಲಕ ನಿವಾರಿಸಬಹುದು. ಆದರೆ ಅದು ಸಹಾಯಕವಾಗಿದ್ದರೆ ಅದರ ಪ್ರಯೋಜನ ಪಡೆಯಬಹುದು.

ಇದೆಲ್ಲವೂ-ಪ್ರತಿಯೊಂದು ಸಂಗತಿ ತನ್ನದೇ ಆದ ಲಯಬದ್ಧತೆಯನ್ನು ಹೊಂದಿರುವುದಾದರೆ-ಸರಿ, ಆಗ ಲಯಬದ್ಧತೆಗಳ ಸಂದಣಿ ಗೊಂದಲಕ್ಕೀಡಾಗಿ ಒಂದು ಇನ್ನೊಂದನ್ನು ಭೇದಿಸಿಕೊಂಡು ಹೋಗುವಂತಿರುತ್ತವೆ, ಹಾಗಿರುವುದು ನಾವು ನೋಡುವುದರ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ, ಅದರಲ್ಲಿ ಯಾವುದೂ (ಯಾವ ಲಯಬದ್ಧತೆಯೂ) ಇರುವಂತೆ ಕಂಡುಬರುವುದಿಲ್ಲ-ಏಕೆಂದರೆ ಅದು ಬಹಳ ಗೊಂದಲದಿಂದ ಕೂಡಿರುತ್ತದೆ, ಸಂಕೀರ್ಣವಾಗಿರುತ್ತದೆ.

ಪ್ರಶ್ನೆ : *ಜೀವನದಲ್ಲಿಯ ಈ ಲಯಬದ್ಧತೆಯ ಪ್ರಯೋಜನವನ್ನು ಪಡೆಯುವುದು ಹೇಗೆ, ಶ್ರೀಮಾತೆಯವರೆ?*

ಶ್ರೀಮಾತೆ : ಸರಿ, ನಾವು ಯೋಗವನ್ನು ಕುರಿತು ಮಾತನಾಡುತ್ತಿದ್ದರೆ... ಉದಾಹರಣೆಗೆ ನೀವು ನಿಮ್ಮಲ್ಲಿಯೇ ಕೆಲವೊಂದು ಸ್ಥಿತಿಗಳು ಪುನರಾವೃತ್ತಿಸುವುದರ ಅವಲೋಕನ ಮಾಡಿದ್ದಿರಾದರೆ, ನಿರ್ದಿಷ್ಟ ಗಂಟೆಯೊಂದರ ಅವಧಿಯಲ್ಲಿ , ಕೆಲವೊಂದು ಸನ್ನಿವೇಶಗಳಿದ್ದಾಗ ನಿಮಗೆ ಏಕಾಗ್ರತೆ ಕೈಕೊಳ್ಳುವುದು, ಧ್ಯಾನ ಮಾಡುವುದು ಸುಲಭವಾಗುವುದೆಂದು ಕಂಡುಬಂದರೆ, ಆ ಸಮಯದಲ್ಲಿ ಅದನ್ನು ಕೈಕೊಳ್ಳುವ ಪ್ರಯೋಜನ ಪಡೆಯಬಹುದು.

ಇಂತಹ ಪದ್ಧತಿಗೇ ನೀವು ಗುಲಾಮರಾಗಕೂಡದು, ಅದನ್ನು ಉಪಯೋಗಿಸಿ-ಕೊಳ್ಳಬಹುದು. ಅದು ಒಂದು ಆವಶ್ಯಕತೆಯೆಂದಾಗಿ ಆ ಗಂಟೆ ಕಳೆದುಹೋದಾಗ ಧ್ಯಾನ ಮಾಡಲು ಸಾಧ್ಯವಾಗದಂತಿರಬಾರದು. ಅದು ಬಹಳ ಸಹಾಯಕವಾದದ್ದು ,

ಉಪಯೋಗಿಸಲು ಯೋಗ್ಯವಾದದ್ದು. ಅದೆಲ್ಲ ನಿರೀಕ್ಷಣೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ್ದು.

ನಿಮ್ಮ ಬಗ್ಗೆ ನೀವೇ ಅಧ್ಯಯನ ಕೈಕೊಂಡಾಗ ವರ್ಷದಲ್ಲಿ ಕೆಲವೊಂದು ಅವಧಿಗಳು ವೈಯಕ್ತಿಕ ಕಾರಣದಿಂದಷ್ಟೇ ಅಲ್ಲ, ಆದರೆ ಹೆಚ್ಚು ಸಾರ್ವತ್ರಿಕವಾದವು ಅಂದರೆ ಪ್ರಕೃತಿಯ ಪರಿಸ್ಥಿತಿಗಳಿಗನುಗುಣವಾಗಿ ಇರುವುದರ ಅರಿವು ನಿಮಗುಂಟಾಗುತ್ತದೆ. ಸಾಧನೆಯಲ್ಲಿ ಹೆಚ್ಚು ತೊಂದರೆಗಳು ಇರುವ ಕಾಲಾವಧಿಗಳು ಇರುತ್ತವೆ, ತದ್ವಿರುದ್ಧವಾಗಿ ಕೆಲವೊಂದು ಕಾಲಾವಧಿಗಳಲ್ಲಿ ನಿಮ್ಮ ಜ್ಞಾನದ ಹಾಗೂ ಅರಿವಿನ ಬೆಳವಣಿಗೆಗೆ ಹೆಚ್ಚಿನ ಸ್ಫೂರ್ತಿಯ ಒತ್ತಡದ ಅನುಭವ ಬರುತ್ತಿರುವಂತೆ ನಿಮಗೆ ಭಾಸವಾಗುತ್ತದೆ. ಇದರಿಂದ ಒಂದು ಬಗೆಯ ನೆರವೂ ನಿಮಗುಂಟಾಗುವುದು : ಒಂದು ನಿರ್ದಿಷ್ಟ ಕಾಲದಲ್ಲಿ ನೀವು ಯಾವುದೋ ತೊಂದರೆಯೊಂದರಲ್ಲಿ ಸಿಕ್ಕಿ ಹಾಕಿಕೊಂಡಾಗ ಇಲ್ಲವೆ ಕಾರಣಾಂತರದಿಂದ ನಿಮ್ಮ ಕಾರ್ಯವೊಂದು ಒಮ್ಮೆಲೆ ನಿಂತಂತಾದಾಗ ನೀವು ಗೋಳಾಡುತ್ತ ಕುಳಿತುಕೊಳ್ಳದೆ ''ಇದು ಹೀಗೆ ರೂಢಿ ಪ್ರಕಾರ ಬರುವ ಸಮಯ, ವರ್ಷದ ಈ ನಿರ್ದಿಷ್ಟ ಕಾಲದಲ್ಲಿ ಪ್ರತಿಸಲವೂ ಹೀಗಾಗುವುದುಂಟು'' ಎಂದು ನಿಮಗೇ ನೀವು ಹೇಳಿಕೊಂಡು ಸಮಾಧಾನ ಹೊಂದುತ್ತೀರಿ. ಮತ್ತು ಈ ಸಮಯ ಕಳೆಯುವವರೆಗೆ ನೀವು ಶಾಂತರೀತಿಯಿಂದ ಕಾಯ್ದುಕೊಂಡು ಕುಳಿತುಕೊಂಡಿರುತ್ತೀರಿ ಇಲ್ಲವೆ ಮತ್ತೇನನ್ನಾದರೂ ಮಾಡುತ್ತ ಆ ಕಾಲವನ್ನು ಹೋಗಗೊಡುವಿರಿ. ಆದರೆ 'ಅಯ್ಯೋ ಇಲ್ಲಿ ನೋಡಿ, ನನಗೆ ಕೆಲಸ ನೀಗದಾಗಿದೆ, ನನಗೆ ಪ್ರಗತಿ ಸಾಧಿಸದಂತಾಗಿದೆ ' ಎಂದು ನಿರುತ್ಸಾಹ ವ್ಯಕ್ತಪಡಿಸದೆ ಇರುವಿರಿ. ಅದು ನೀವು ವಿವೇಚನಾಯುಕ್ತರಾಗುವಂತೆ ಮಾಡುತ್ತದೆ.

ಸ್ವಾಭಾವಿಕವಾಗಿ ಮನುಷ್ಯ ಮತ್ತೊಂದು ಹೆಜ್ಜೆ ಮುಂದಿಡಬಲ್ಲ ಮತ್ತು ಈ ಬಾಹ್ಯ ಪ್ರಭಾವಗಳಿಂದ ಸ್ವತಂತ್ರನಾಗಿರಲು ಮುಂಜಾಗ್ರತೆ... ಅಂದರೆ ಆಂತರಿಕ ಮುಂಜಾಗ್ರತೆ ವಹಿಸಬಲ್ಲ. ಆದರೆ ಅದು ಬರಲು ಬಹಳ ವೇಳೆ ಹಿಡಿಯುತ್ತದೆ, ತನ್ನ ಸಾಧನೆಯ ಬಗ್ಗೆ ಪ್ರಜ್ಞಾಪೂರ್ಣ ಪ್ರಭುತ್ವ ಸಾಧಿಸಿದ ನಂತರ ಅದು ಬರುತ್ತದೆ, ಅದು ನಂತರ ಬರುವುದು.

**(15/213-14)** ನಿನ್ನ ಜನ್ಮದಿನವಾದ ಈ ದಿನ ನಿನ್ನನ್ನು ಭಗವಂತನಿಗೆ ಸ್ವಲ್ಪ ಹೆಚ್ಚಿನ ರೀತಿಯಲ್ಲಿ, ಸ್ವಲ್ಪ ಹೆಚ್ಚು ಒಳ್ಳೆಯದೆನಿಸುವಂತೆ ಕೊಟ್ಟುಕೊಳ್ಳುವ ಸುಸಂಧಿಯಾಗಲಿ. ನಿನ್ನ ಮುಡಿಪಾಗಿರಿಸುವಿಕೆ ಹೆಚ್ಚು ಇಡಿಯಾಗಿರಲಿ, ನಿನ್ನ ಭಕ್ತಿ ಹೆಚ್ಚು ಉತ್ಸಾಹದಿಂದ ಕೂಡಿರಲಿ, ನಿನ್ನ ಅಭೀಪ್ಸೆ ಗಾಢವಾಗಿರಲಿ.



ನಿನ್ನನ್ನು ಹೊಸ ದೈವೀಪ್ರಕಾಶಕ್ಕೆ ತೆರೆದುಕೋ ಮತ್ತು ಸಾಧನಾಮಾರ್ಗದಲ್ಲಿ ಸಂತೋಷದ ಹೆಜ್ಜೆಯಿರಿಸು.

ಈ ದಿನ ಹಾಗಿರಲಿ ಎಂದು ನಿರ್ಧಾರ ಮಾಡು ಮತ್ತು ಈ ದಿನ ವ್ಯರ್ಥವಾಗಿ ಕಳೆದು ಹೋಗದಿರಲಿ.

- ಶ್ರೀಮಾತೆ

★

**(23/1083)** ಭೌತಿಕ ಕಿವಿಗಳಿಗೆ ಕೇಳಿಸಿಕೊಳ್ಳಲಾಗದ ಏನೋ ಒಂದರಲ್ಲಿ ಒಂದು ಲಯಬದ್ಧತೆ ಇರುತ್ತದೆ. ಆ ಲಯಬದ್ಧತೆಯಿಂದ ವಸ್ತು-ವಿಷಯಗಳು ಅಸ್ತಿತ್ವದಲ್ಲಿರುತ್ತವೆ.

- ಶ್ರೀ ಅರವಿಂದರು

★

## ಆರ್ (R)ಳಿಗೆ ಅವಳ ಜನ್ಮದಿನದಂದು

(Collected Poems/75-76)

ನಿನ್ನ ವಿನೀತ ವರುಷಗಳ ಪುನರಾವರ್ತನೆ
ನಿನ್ನ ಜನುಮದಿನದ ಮುಂಜಾವ ಮರಳಿ ತರುತಿಹುದು
ಯೌವನದ ಶಿಖರದ ಮೇಲೆ ನಿನ್ನ ಜೀವನ
ತೋರಿಬರುವುದು-ಮೇಲೆದ್ದು ಅಲೆಯ ಅಂಚಿನಂತೆ.

ಸಾಗರದ ನೆಲದ ವಿಸ್ತಾರದಲಿ ಗುಂಪುಗೂಡಿದ
ನೂರಾರು ಸಂಗತಿಗಳ ಮಧ್ಯೆ ಅದರ ಸಂದಣಿಯಲೊಂದು ಅಲೆ
ಕ್ರಮಬದ್ಧ ಲಯದೊಡನೆ ದಡದತ್ತ ನೂಕಿ ಬರುತಿರುವಂತೆ
ಇರಬೇಕು ನಮ್ಮ ಜೀವನದ ಪರಿ.

ಅಜೇಯ, ಸನಾತನ ಸ್ವತಂತ್ರ ಸಾಗರದ ಶಕ್ತಿ
ಮಾಡುವುದು ಆ ಅಲೆ ಚಲಿಸುವ ಹಾಗೆ
ಆ ಪ್ರೇರಣೆಯ ಮೂಲಕವೆ ಅನಿವಾರ್ಯವಾಗಿ ಅದು
ತನ್ನ ಮಾರ್ಗವನು ಅನುಸರಿಸುತಿಹುದು.

ಹಾಗೆಯೇ ಸನಾತನ ಶಕ್ತಿ ನಮ್ಮನೂ ಕೊಂಡೊಯ್ಯುವುದು
ಭಗವಂತ ಸಂಕಲ್ಪಿಸಿದ ಗುರಿಯೊಂದರೆಡೆಗೆ
ಹಿಡಿದಿರುವನವನು ನಮ್ಮ ಚುಕ್ಕಾಣಿ, ತುಂಬುವನು ತನ್ನ ದೃಢ ಉಸಿರಿನಿಂದ
ತೆರೆದುಕೊಂಡು ತೇಲಿಸುವ ನಮ್ಮ ಉದಾರ ನೌಕಾಪಟವ.

ನಮ್ಮನು ಸುತ್ತುವರಿದಿರುವ ಪ್ರಭುವಿನ ದಯೆಯಲಿ,
ನಿರ್ದೇಶಕನ ವಾಣಿಯಲಿ ವಿಶ್ವಾಸವಿರಿಸುತ್ತ
ಯೌವನದ ಬೆಡಗಿನಲಿ, ಬಲದಲಿ ಸಂಭ್ರಮಿಸುತ್ತ
ಸಾಗರದ ದೂರದಾಚೆಯನರಸುತ್ತ ಬೆಂಬತ್ತಿ ನಡೆ.

ಉಕ್ಕುತಿರುವ ಅಲೆಗಳಿಗೆ ಗುಡುಗುವ ಬಿರುಗಾಳಿಗಳಿಗೆ
ಗೂಡಿಸುವ ಗಾಳಿಗಳಿಗೆ ಹೆದರದಿರು, ಸಂತಸದಿಂದಿರು
ಸದಾ ನಮ್ಮ ಕಪ್ತಾನ ಹಿಡಿದಿರುವ ಚುಕ್ಕಾಣಿ ದೃಢವಾಗಿ
ನಿದ್ರಿಸುವವನಲ್ಲ ಅವನು.

ಮಹಾಸಾಗರದ ಅಲೆಗಳೆರಡರ ನಡುವಿನ ತಗ್ಗಿನಲಿ
ತುಂತುರು ಹನಿಗಳಿಂದಾಗಿ ಆಕಾಶ ನಿನಗೆ ಕಾಣದಾದರೆ
ಭಯವೆಂದಿಗೂ ಇರದಿರಲಿ ಕಾರಣ ಅಹೋರಾತ್ರಿ ಅಲ್ಲಿರುವ
ನಮ್ಮ ದಿವ್ಯ ರವಿ.

ಗೆದ್ದು ಮುನ್ನಡೆವ ರಭಸದ ಪ್ರವಾಹದಲಿ ಮುಳುಗಿದವರೂ ಕೂಡ
ಮುಳುಗುವುದಾದರೂ ಎಲ್ಲಿ? ಅದು ಅವನ ಎದೆಯಲ್ಲಿಯೆ
ಕೆಲವರಿಗೆ ಜಯ, ಸಂತೋಷ ಸೌಭಾಗ್ಯ ಕೊಡುವವನೆ
ಕೆಲವರಿಗೆ ವಿಶ್ರಾಂತಿ ಕೊಡುವ.

ಹೊಡೆದೋಡಿಸುವ ಬಿರುಗಾಳಿ ಮಳೆಗಳಿಂದಾಚೆ ನೀನು
ಮುಂಬರುವ ಪ್ರಕಾಶಮಯ ದಿನಗಳಿಗಾಗಿ ಕಾದು ನೋಡು
ನಿನ್ನ ರೂಪ ಬೆಳಗುವ ಸಂತೋಷಕರ ದೈವ ದರ್ಶನವ
ಕಂಡಿರುವೆ ನಾನು.



ಅವನ ಕೃಪೆಯಲಿ ವಿಶ್ವಾಸವಿರಿಸುತ್ತ ಅವನ ಸಂಕಲ್ಪವನೆ ಎದುರುನೋಡು
ನೆಲೆ ಗುಪ್ತವಾಗಿದ್ದರೂ ಕೂಡ ಅವನೆ ಕರೆದೊಯ್ಯಲಿ ನಿನ್ನನು
ಆಗುವುದೆಲ್ಲದರಲಿ ಅವನನ್ನೆ ಕಾಣು, ಅದುವೆ ನೀನು
ಜನುಮ ತಾಳಿದುದನು ಸಾರ್ಥಕಪಡಿಸುವುದು.

– ಶ್ರೀ ಅರವಿಂದರು

**(4-4-1989ರಂದು ಕೊಟ್ಟ ಸಂದೇಶ ಕಾರ್ಡಿನಿಂದ ಆಯ್ದುಕೊಂಡದ್ದು)**

ಆ ಹೊಸ ಜನ್ಮವು ನಿನ್ನ ಹೃದಯದಲ್ಲಿ ಪ್ರಕಟವಾಗಲಿ ಮತ್ತು ಸ್ಥಿರತೆ, ಸಂತೋಷಗಳಲ್ಲಿ ಹೊರಸೂಸಲಿ ಹಾಗೂ ಅದೆಲ್ಲ ನಿನ್ನ ಸತ್ತೆಯ ಎಲ್ಲ ಅಂಗಗಳಿಗೆ ಅಂದರೆ ಮನಸ್ಸು ಮತ್ತು ದರ್ಶನ, ಸಂಕಲ್ಪ ಹಾಗೂ ಭಾವನೆ, ಪ್ರಾಣ ಹಾಗೂ ದೇಹ ಇವುಗಳನ್ನು ಕೈಗೆತ್ತಿಕೊಳ್ಳಲಿ. ನಿನ್ನ ಜೀವನದಲ್ಲಿಯ ಪ್ರತಿಯೊಂದು ದಿನಾಂಕ ನಿನ್ನದೆಲ್ಲವೂ ಶ್ರೀಮಾತೆಯವರದಾಗು- ವವರೆಗೆ ಆ ಹೊಸ ಜನ್ಮದ ಬೆಳವಣಿಗೆಯ ಮತ್ತು ಹೆಚ್ಚಿನ ಪೂರ್ಣತೆಯ ದಿನಾಂಕವಾಗಲಿ, ದಿವ್ಯಪ್ರಕಾಶ, ದಿವ್ಯಸಾಮರ್ಥ್ಯ ಹಾಗೂ ದೈವೀಸಾನ್ನಿಧ್ಯ ನಿನ್ನನ್ನು ಆವರಿಸಲಿ, ರಕ್ಷಣೆ ನೀಡಲಿ, ಪಾಲಿಸಲಿ ಮತ್ತು ಪೋಷಿಸಲಿ. ನಿನ್ನ ಆಂತರಿಕ ಹಾಗೂ ಬಾಹ್ಯ ಅಸ್ತಿತ್ವ ಒಂದೇ ಚಲನೆಯಾಗುವವರೆಗೆ ಹಾಗೂ ಅದು ಶಾಂತಿಯ, ಬಲದ ಮತ್ತು ಆನಂದದ ಅಭಿವ್ಯಕ್ತಿಯಾಗುವವರೆಗೆ ಆ ದಿವ್ಯತೆಗಳೆಲ್ಲ ಮುಂದುವರಿಯುತ್ತಿರಲಿ.

– ಶ್ರೀ ಅರವಿಂದರು

★

## ಭಗವಂತ ಸಂಕಲ್ಪಿಸಿದ ಗುರಿಯೊಂದರೆಡೆಗೆ ಸನಾತನ ಶಕ್ತಿ ನಮ್ಮನ್ನು ಕರೆದೊಯ್ಯುವುದು

ಸೂಚನೆ : ಈ ಲೇಖನದ ಹಾಗೂ ಇನ್ನು ಮುಂದೆ ಬರುವ ಐದು ಲೇಖನಗಳ ಶೀರ್ಷಿಕೆಗಳು ಈ ಲೇಖನದ ಹಿಂದೆ ಇರುವ ಕವಿತೆಯಲ್ಲಿರುವ ಪದಗುಚ್ಛಗಳಿಂದ ಕೂಡಿವೆ. ಈ ಆಯ್ಕೆ ಸಂಪಾದಕರದು.* ಆ ಶೀರ್ಷಿಕೆಗಳಿಗೆ ಅನುಗುಣವಾದ ಪರಿಚ್ಛೇದಗಳನ್ನು ಶ್ರೀ ಅರವಿಂದರ ಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ, ಅವು ಕವಿತೆಯನ್ನು ವಿವರಿಸಲಿಕ್ಕಲ್ಲವೆಂಬುದು

* 'All India Magazine' ಮಾಸ ಪತ್ರಿಕೆಯನ್ನು ಕನ್ನಡದಲ್ಲಿ 'ಅಖಿಲ ಭಾರತ ಪತ್ರಿಕೆ' ಎಂದು ಪ್ರಕಟಿಸಲಾಗುತ್ತಿದೆ. ಶೀರ್ಷಿಕೆಗಳ ಆಯ್ಕೆ 'AIM' ದ ಸಂಪಾದಕರಾದ ಕೆ.ಸಿ. ಆನಂದ ಅವರದು.

ಸ್ಪಷ್ಟವಿದೆ.

(Synthesis of Yoga p. **231** )

ನಮ್ಮ ಕಾರ್ಯಗಳ ಒಡೆಯ ಏಕೈಕನಾಗಿದ್ದಾನೆ, ಅವನು ವಿಶ್ವಂಭರ, ಸರ್ವೋಚ್ಚ, ಸನಾತನ ಹಾಗೂ ಅನಂತನಾಗಿದ್ದಾನೆ. ಅವನು ಅಗಮ್ಯ, ತಿಳಿವಿಗೆ ನಿಲುಕದ ಪೂರ್ಣನು, ಅನಿರ್ವಚನೀಯ, ಅವ್ಯಕ್ತ ಮತ್ತು ಅವರ್ಣನೀಯನಾಗಿ ನಮ್ಮ ಮೇಲಿರುವನು, ಆದರೆ ಎಲ್ಲ ಸತ್ತೆಗಳ ಆತ್ಮನಾಗಿರುವನು, ಎಲ್ಲ ಲೋಕಗಳ ಒಡೆಯನಾಗಿರುವನು, ಎಲ್ಲ ಲೋಕಗಳಾಚೆಗೂ ಇರುವನು. ಪ್ರಕಾಶಮಯನೂ, ಮಾರ್ಗದರ್ಶಿಯೂ ಆಗಿರುವನು. ಎಲ್ಲ ಸೌಂದರ್ಯ ಹಾಗೂ ದಿವ್ಯಾನಂದಗಳಿಂದ ಕೂಡಿರುವವನು, ಪ್ರೀತಿಯೋಗ್ಯನೂ, ಪ್ರೀತಿಸುವವನೂ ಆಗಿರುವನು. ಅವನು ವಿಶ್ವಾತ್ಮ ಹಾಗೂ ನಮ್ಮ ಸುತ್ತಲಿರುವ ಎಲ್ಲ ಸೃಜನಾತ್ಮಕ ಶಕ್ತಿ, ನಮ್ಮ ಅಂತರ್ಯಾಮಿ. ಏನೆಲ್ಲ ಇರುವುದೋ ಅದೆಲ್ಲ ಅವನೇ, ಇರುವುದೆಲ್ಲದಕ್ಕಿಂತಲೂ ಹೆಚ್ಚಿನವನು. ನಮಗೆ ಅರಿವಿಲ್ಲದೆಯೆ ನಾವು ಅವನ ಸತ್ತೆಯ ಸತ್ತೆಗಳು. ಅವನ ಮರ್ತ್ಯ ಅಸ್ತಿತ್ವವೂ ಕೂಡ ಅವನ ವಸ್ತುಸಾರದಿಂದಲೇ ತಯಾರಾಗಿದೆ. ಜ್ಯೋತಿ, ದಿವ್ಯಾನಂದಗಳ ಕಿಡಿಯಾದ ಅಮರತೆಯೊಂದು ನಮ್ಮೊಳಗಿದೆ.

ಕ್ರಿಯೆಗಳ ದೈವೀಪ್ರಭು ಸಾಧಕನಿಗೆ ಒಮ್ಮೆಲೆ ತನ್ನನ್ನು ತೆರೆದು ತೋರಿಸುವುದಿಲ್ಲ. ಯಾವಾಗಲೂ ಅವನ ದೈವೀ ಸಾಮರ್ಥ್ಯ ಪರದೆಯ ಹಿಂದಿನಿಂದ ಕಾರ್ಯ ಮಾಡುತ್ತದೆ. ಆದರೆ ನಾವು ಕಾರ್ಯಕರ್ತನ ಅಹಂಮನ್ಯತೆಯನ್ನು ತ್ಯಾಗ ಮಾಡಿದಾಗ ಮಾತ್ರ, ಅದು ಪ್ರಕಟವಾಗುತ್ತದೆ. ಮತ್ತು ತ್ಯಾಗ ಹೆಚ್ಚು ಪೂರ್ಣವಾದಾಗ, ಅದರ ನೇರ ಚಲನೆ, ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ದೈವೀಶಕ್ತಿಗೆ ನಮ್ಮ ಸಮರ್ಪಣೆ ಪರಿಪೂರ್ಣವಾದಾಗ, ಭಗವಂತನ ಪರಿಪೂರ್ಣ ಸಾನ್ನಿಧ್ಯದಲ್ಲಿ ಜೀವಿಸಲು ನಮಗೆ ಹಕ್ಕಿರುತ್ತದೆ.

★

(Synthesis of Yoga [ಯೋಗ ಸಮನ್ವಯ], p. **238**)

ಪ್ರತಿಯೊಬ್ಬ ಮಾನವ ತನಗೆ ತಿಳಿದೋ ಅಥವಾ ತಿಳಿಯದೆಯೋ ವಿಶ್ವಂಭರ ಸಾಮರ್ಥ್ಯದ ಉಪಕರಣವಾಗಿರುತ್ತಾನೆ. ಮತ್ತು ಆಂತರಿಕ ಸಾನ್ನಿಧ್ಯ ಹೊರತುಪಡಿಸಿ ಅವನು ಕೈಕೊಳ್ಳುವ ಒಂದು ಕ್ರಿಯೆಯಿಂದ ಇನ್ನೊಂದು ಕ್ರಿಯೆಯಲ್ಲಿ, ಒಂದು ಬಗೆಯ ಉಪಕರಣವಾಗುವಿಕೆಯ ಬದಲಾಗಿ ಇನ್ನೊಂದು ಬಗೆಯ ಉಪಕರಣವಾಗುವಿಕೆಯಲ್ಲಿ,



ತನ್ನ ಅಹಂಕಾರಿಕ ಅವಿವೇಕತೆಯ ಜಂಬವನ್ನು ದೃಢಪಡಿಸುವಷ್ಟರ ಮಟ್ಟಿಗೆ, ಸಾರಭೂತವಾದ ಅಂತರವಿರುವುದಿಲ್ಲ. ಜ್ಞಾನ ಮತ್ತು ಅಜ್ಞಾನಗಳ ನಡುವೆ ಅಂತರವಿರುವುದು ಭಗವಂತನ ಕೃಪೆಯಿಂದಾಗಿ. ದೈವೀ ಸಾಮರ್ಥ್ಯದ ಉಸಿರು ಇಂದು ತಾನು ಹೊರಳಿದತ್ತ ತುಂಬುತ್ತಿದ್ದರೆ, ನಾಳೆ ಅದು ಇನ್ನೊಂದನ್ನು ಶಬ್ದ ಹಾಗೂ ಪ್ರಾಬಲ್ಯಗಳಿಂದ ತುಂಬುವುದು. ಕುಂಬಾರನು ಒಂದು ಗಡಿಗೆಯನ್ನು ಇನ್ನೊಂದಕ್ಕಿಂತ ಹೆಚ್ಚು ಪರಿಪೂರ್ಣವಾಗಿ ಮಾಡಿದರೆ ಅದರ ಶ್ರೇಯಸ್ಸು ಸಲ್ಲುವುದು ಕುಂಬಾರನಿಗೆ, ಗಡಿಗೆಗಲ್ಲ. ''ಇದು ನನ್ನ ಬಲ'' ಇಲ್ಲವೆ ''ಭಗವಂತನ ಶಕ್ತಿ ನನ್ನಲ್ಲಿರುವುದನ್ನು ನೋಡಿರಿ'' ಎಂದು ಹೇಳುವ ಪ್ರವೃತ್ತಿ ನಮ್ಮ ಮನಸ್ಸಿನಲ್ಲಿರಬಾರದು, ಆದರೆ ಅದಕ್ಕೂ ಹೆಚ್ಚಿನದಾದ ರೀತಿಯಲ್ಲಿ ''ದೈವೀ ಸಾಮರ್ಥ್ಯ ಈ ಮನಸ್ಸಿನಲ್ಲಿ, ದೇಹದಲ್ಲಿ ಕಾರ್ಯಕೈಕೊಳ್ಳುತ್ತಿದೆ, ಆ ಸಾಮರ್ಥ್ಯವೇ ಎಲ್ಲ ಮನುಷ್ಯರಲ್ಲೂ, ಪ್ರಾಣಿಗಳಲ್ಲೂ, ಸಸ್ಯಗಳಲ್ಲೂ, ಲೋಹದಲ್ಲೂ, ಅದೇ ರೀತಿ ಪ್ರಜ್ಞೆಯುಳ್ಳವುಗಳಲ್ಲಿ, ಜೀವದಿಂದಿರುವವುಗಳಲ್ಲಿ, ಅಚೇತನ ಹಾಗೂ ನಿರ್ಜೀವ ಎಂದು ತೋರಿಬರುವವುಗಳಲ್ಲಿ ಕಾರ್ಯ ಮಾಡುತ್ತದೆ'' ಎಂದುಕೊಳ್ಳಬೇಕು. ಎಲ್ಲರಲ್ಲಿ ಕಾರ್ಯಮಾಡುವ ಏಕೈಕನಾದವನ ಬಗೆಗಿನ ಹಾಗೂ ದೈವೀಕ್ರಿಯೆ ಹಾಗೂ ಕ್ರಮೇಣ ಆಗುವ ಸ್ವ-ಅಭಿವ್ಯಕ್ತಿ ಇವುಗಳನ್ನು ಕುರಿತು ಇಡೀ ಜಗತ್ತು ಒಂದು ಸಮಾನ ಉಪಕರಣವಾಗಿದೆ ಎಂಬುದರ ಬಗೆಗಿನ ಈ ವಿಶಾಲ ದೃಷ್ಟಿ ನಮ್ಮ ಇಡೀ ಅನುಭವವಾಗುವುದಾದರೆ, ಎಲ್ಲ ರಾಜಸಿಕ ಅಹಂಕಾರವನ್ನು ತೊಡೆದು ಹಾಕಲು ಸಹಾಯಕವಾಗುವುದು, ಸಾತ್ವಿಕ ಅಹಂಕಾರವೂ ಕೂಡ ನಮ್ಮ ಸ್ವಭಾವದಿಂದ ಜಾರಿ ಹೋಗುವುದು.

**(23/59-60)** ಈ (ದೈವೀ) ಸಂಪರ್ಕ ತನ್ನನ್ನು ಸ್ಥಾಪಿಸಿಕೊಳ್ಳುತ್ತಿರುವ ಪ್ರಮಾಣಕ್ಕನು-ಗುಣವಾಗಿ ಸಾಧಕ ತನ್ನದೇ ಶಕ್ತಿಗಿಂತ ಭಿನ್ನವಾದ ಹಾಗೂ ತನ್ನ ಅಹಂಕಾರಪೂರಿತ ಪ್ರಯತ್ನ ಹಾಗೂ ಕ್ಷಮತೆಗಳಿಗೆ ಅತೀತವಾದ ಶಕ್ತಿ ತನ್ನಲ್ಲಿ ಕಾರ್ಯನಿರತವಾಗಿದೆ ಎಂಬ ಅರಿವನ್ನು ಪಡೆಯುತ್ತಾನೆ ಮತ್ತು ಈ ದೈವೀ ಸಾಮರ್ಥ್ಯಕ್ಕೆ ತನ್ನನ್ನು ಅಧೀನಗೊಳಿಸುವುದನ್ನು, ತನ್ನ ಯೋಗದ ಜವಾಬ್ದಾರಿಯನ್ನು ಅದಕ್ಕೆ ಒಪ್ಪಿಸಿಕೊಡುವುದನ್ನು ಕ್ರಮೇಣ ಕಲಿತುಕೊಳ್ಳುತ್ತಾನೆ...

ನಿಜವಾಗಿ ಯಾವಾಗಲೂ ದೈವೀ ಸಾಮರ್ಥ್ಯವೇ ಕಾರ್ಯ ಮಾಡುತ್ತದೆ. ದೈವೀಶಕ್ತಿಯ ಕಾರ್ಯಗತಿಗಳೊಡನೆ ಅಹಂಕಾರಿ ಮನಸ್ಸು ತಪ್ಪು ಹಾಗೂ ಅಪರಿಪೂರ್ಣ

ರೀತಿಯಲ್ಲಿ ತನ್ನನ್ನು ಗುರುತಿಸಿಕೊಳ್ಳುವ ಪ್ರಯತ್ನದಿಂದಾಗಿ ವೈಯಕ್ತಿಕ ಪ್ರಯತ್ನ ಹಾಗೂ ಅಭೀಪ್ಸೆ ಇವುಗಳಿರುವ ಭಾವನೆ ಬರುತ್ತದೆ. ಜಗತ್ತಿನಲ್ಲಿಯ ಸಾಮಾನ್ಯ ಬಗೆಯ ಅನುಭವಗಳಿಗೆ ಅನ್ವಯಿಸುವ ಷರತ್ತುಗಳನ್ನು ಅತಿಮಾನಸ ಸ್ತರದ ಮೇಲಿನ ಅನುಭವಗಳಿಗೆ ಅನ್ವಯಿಸಬೇಕೆಂದು ಅಹಂಕಾರಿ ಮನಸ್ಸು ಪಟ್ಟು ಹಿಡಿಯುತ್ತದೆ. ಜಗತ್ತಿನಲ್ಲಿ ನಾವು ಅಹಂಮನ್ಯತೆಯ ಭಾವನೆಯಿಂದ ಕಾರ್ಯಕ್ಕೈಕೊಳ್ಳುತ್ತೇವೆ, ನಮ್ಮಲ್ಲಿ ಕಾರ್ಯಮಾಡುವ ವಿಶ್ವಂಭರ ಶಕ್ತಿಗಳು ನಮ್ಮವೇ ಎಂದು ಹಕ್ಕು ಸಾಧಿಸುತ್ತೇವೆ. ಈ ಮನಸ್ಸು, ಪ್ರಾಣ ಹಾಗೂ ದೇಹಗಳ ಚೌಕಟ್ಟಿನಲ್ಲಿರುವ ವಿಶ್ವಾತೀತನ ವಿವೇಕ, ಶಕ್ತಿ, ಆಯ್ದುಕೊಳ್ಳುವ ಸದ್ಗುಣ, ರೂಪುಕೊಡುವ ಹಾಗೂ ಪ್ರಗತಿಪರ ಕ್ರಿಯೆ ಇವೆಲ್ಲ ನಮ್ಮ ಸಂಕಲ್ಪದ ಪರಿಣಾಮ ಸ್ವರೂಪದವೆಂದು ನಾವು ಹಕ್ಕು ಸಾಧಿಸುತ್ತೇವೆ. ಅಹಂಕಾರ ಕೇವಲ ಒಂದು ಉಪಕರಣ ಎಂಬ ಜ್ಞಾನವನ್ನು ನಮಗೆ ಜ್ಞಾನೋದಯ ತಂದುಕೊಡುತ್ತದೆ ಮತ್ತು ಈ ವಿಷಯಗಳು ನಮ್ಮವು ಎಂದರೆ ಅವು ನಮ್ಮ ಸರ್ವೋಚ್ಚ ಹಾಗೂ ಸಮಗ್ರ ದಿವ್ಯಾತ್ಮನಿಗೆ ಸೇರಿದವುಗಳು ಎಂಬ ಅರ್ಥದಲ್ಲಿ ಗ್ರಹಿಸಲು ಹಾಗೂ ಭಾವನೆ ತಂದುಕೊಳ್ಳಲು ಪ್ರಾರಂಭಿಸುತ್ತೇವೆ. ಕಾರ್ಯಗತಿಗೆ ನಮ್ಮ ಸೀಮಿತತೆಗಳು ಹಾಗೂ ವಿರೂಪಗೊಳಿಸುವಿಕೆಗಳು ನಮ್ಮ ಕೊಡುಗೆಗಳಾಗಿರುತ್ತವೆ, ಅದರಲ್ಲಿರುವ ನಿಜವಾದ ಸಾಮರ್ಥ್ಯ ಭಗವಂತನದಾಗಿರುತ್ತದೆ. ಮನುಷ್ಯನ ಅಹಂಕಾರ ತಾನು ಒಂದು ಸಲಕರಣೆ, ತನ್ನ ವಿವೇಕ ಒಂದು ಅಜ್ಞಾನ ಮತ್ತು ಬಾಲಿಶತನ, ತನ್ನ ಸಾಮರ್ಥ್ಯ ಮಗುವೊಂದು ತಡಕಾಡುತ್ತಿದ್ದಂತೆ, ತನ್ನ ಸದ್ಗುಣ ಡಾಂಭಿಕ ಅಶುದ್ಧತೆ ಎಂದು ಅರಿವಿಗೆ ತಂದುಕೊಂಡಾಗ, ತನಗೆ ಅತೀತವಾದುದಕ್ಕೆ ತನ್ನನ್ನು ನಂಬಿಕೆಯಿಂದ ಕೊಟ್ಟಾಗ ಅದು ಮುಕ್ತಿಗೆ ಸಾಧನವಾಗಿರುತ್ತದೆ. ತೋರಿಕೆಗೆ ಕಂಡುಬರುವ ನಮ್ಮ ವೈಯಕ್ತಿಕ ಸತ್ತೆಯ ಸ್ವಾತಂತ್ರ್ಯ ಮತ್ತು ಸ್ವ-ದೃಢೀಕರಣ ಇವುಗಳಿಗೆ ನಾವು ಗಾಢವಾಗಿ ಅಂಟಿಕೊಂಡಿರುತ್ತೇವೆ, ಅವು ಸಾವಿರಾರು ಸೂಚನೆಗಳಿಗೆ, ಪ್ರಚೋದನೆಗಳಿಗೆ, ಶಕ್ತಿಗಳಿಗೆ, ನಮ್ಮನ್ನು ಕರುಣಾಜನಕ ರೀತಿಯಲ್ಲಿ ಅಧೀನತೆಗೆ ಒಳಪಡಿಸಿರುತ್ತವೆ, ಅವುಗಳನ್ನು ನಾವು ನಮ್ಮ ಚಿಕ್ಕ ವ್ಯಕ್ತಿವಿಶೇಷತೆಗೆ ಬಾಹ್ಯದಲ್ಲಿರುವಂತೆ ಮಾಡಿರುತ್ತೇವೆ. ನಮ್ಮ ಅಹಂಕಾರವು ಸ್ವಾತಂತ್ರ್ಯದ ಜಂಬ ಕೊಚ್ಚಿಕೊಳ್ಳುತ್ತ ಪ್ರತಿಯೊಂದು ಕ್ಷಣ, ವಿಶ್ವಂಭರ ಪ್ರಕೃತಿಯಲ್ಲಿರುವ ಗುಲಾಮ, ಆಟದ ವಸ್ತು ಮತ್ತು ಹಲವಾರು ಸತ್ತೆಗಳ, ಸಾಮರ್ಥ್ಯಗಳ, ಶಕ್ತಿಗಳ ಪ್ರಭಾವಗಳ ಕೈಗೊಂಬೆಯಾಗಿರುತ್ತದೆ. ಭಗವಂತನಲ್ಲಿ ಅಹಂಕಾರದ ಪರಿತ್ಯಾಗ ಅದರ ನೆರವೇರಿಕೆ, ತನಗೆ ಅತೀತವಾದುದಕ್ಕೆ ಶರಣಾಗತಿ ಬಂಧನ ಹಾಗೂ ಸೀಮಿತತೆಗಳಿಂದ ಮುಕ್ತಿ ಮತ್ತು ಅದರ



ಪರಿಪೂರ್ಣ ಸ್ವಾತಂತ್ರ್ಯ.

ಆಂತರಿಕ ಪ್ರಯತ್ನ ಹಾಗೂ ಘರ್ಷಣೆಗಳ ಹೆಚ್ಚು ಕಡಿಮೆ ದೀರ್ಘವಾದ ಒಂದು ಅವಧಿ ಇರುತ್ತದೆ, ಅದರಲ್ಲಿ ವ್ಯಕ್ತಿಯ ಸಂಕಲ್ಪವು ನಿಮ್ನ ಸ್ವಭಾವದ ಅಂಧಕಾರ, ಹಾಗೂ ವಿರೂಪಗೊಳಿಸುವಿಕೆಗಳನ್ನು ತ್ಯಜಿಸಬೇಕು ಮತ್ತು ತನ್ನನ್ನು ದೃಢ ನಿಶ್ಚಯದಿಂದ, ಭಾವೋದ್ವೇಗದಿಂದ ದೈವೀಪ್ರಕಾಶದ ಪಕ್ಷದಲ್ಲಿರಿಸಬೇಕು. ಮಾನಸಿಕ ಚೈತನ್ಯಗಳು, ಹೃದಯದ ಭಾವನೆಗಳು, ಪ್ರಾಣಿಕ ಆಸೆಗಳು, ಭೌತಿಕ ಸತ್ತೆಯೇ ಸ್ವತಃ ಇವೆಲ್ಲವೂ ಸರಿಯಾದ ಮನೋಭಾವ ಹೊಂದುವಂತೆ ಒತ್ತಾಯಕ್ಕೊಳಗಾಗಬೇಕು, ಇಲ್ಲವೆ ಸರಿಯಾದ ಪ್ರಭಾವಗಳಿಗೆ ಸ್ಪಂದಿಸುವಂತೆ ತರಬೇತು ಪಡೆಯಬೇಕು. ಆಗ ಮಾತ್ರ, ಇದನ್ನು ಸರಿಯಾಗಿ ಮಾಡಿದಾಗ ಮಾತ್ರ, ನಿಮ್ನತರವಾದದ್ದು ಉಚ್ಚತರವಾದದ್ದಕ್ಕೆ ಮಾಡಿಕೊಳ್ಳುವ ಶರಣಾಗತಿ ಪರಿಣಾಮಕಾರಿ ಆಗುವುದು, ಏಕೆಂದರೆ ಆ ತ್ಯಾಗ ಸ್ವೀಕಾರ ಯೋಗ್ಯವಾಗಿರುತ್ತದೆ.

ಸಾಧಕನ ವೈಯಕ್ತಿಕ ಸಂಕಲ್ಪ ಮೊದಲು ಅಹಂಮನ್ಯತೆಯಿಂದ ಕೂಡಿದ ಚೈತನ್ಯಗಳನ್ನು ಹಿಡಿದುಕೊಳ್ಳಬೇಕು ಮತ್ತು ಅವುಗಳನ್ನು ಸರಿಯಾದ (ಧರ್ಮದ) ಪ್ರಕಾಶದತ್ತ ಹೊರಳಿಸಬೇಕು, ಒಮ್ಮೆ ಹೊರಳಿಸಿದ ನಂತರ ಅವುಗಳಿಗೆ ಸದಾ ಆ ಸಂಕಲ್ಪವನ್ನು ಗುರುತಿಸುವಂತೆ ಹಾಗೂ ಅನುಸರಿಸುವಂತೆ ತರಬೇತು ನೀಡಬೇಕು. ಅವನು ಪ್ರಗತಿಪಥದಲ್ಲಿ ಸಾಗುತ್ತ, ಇನ್ನೂ ವೈಯಕ್ತಿಕ ಸಂಕಲ್ಪ, ಪ್ರಯತ್ನ ಮತ್ತು ಚೈತನ್ಯಗಳನ್ನು ಉಪಯೋಗಿಸುವುದನ್ನು, ಅವುಗಳನ್ನು ಉಚ್ಚತರ ಸಾಮರ್ಥ್ಯಗಳ ಪ್ರತಿನಿಧಿಗಳೆಂದು ಸೇವೆಗೆ ಒಳಪಡಿಸುವುದನ್ನು ಉಚ್ಚತರ ದೈವೀ ಪ್ರಭಾವಕ್ಕೆ ಪ್ರಜ್ಞಾಪೂರ್ವಕ ವಿಧೇಯ-ನಾಗಿರುವುದನ್ನು ಕಲಿಯುತ್ತಾನೆ ಇನ್ನೂ ಹೆಚ್ಚು ದೂರ ಸಾಗುತ್ತಿದ್ದಂತೆ, ಅವನ ಸಂಕಲ್ಪ, ಪ್ರಯತ್ನ ಮತ್ತು ಚೈತನ್ಯಗಳು ಇನ್ನು ವೈಯಕ್ತಿಕವಾಗಿ, ಪ್ರತ್ಯೇಕವಾಗಿ ಉಳಿಯುವುದಿಲ್ಲ, ಆದರೆ ವ್ಯಕ್ತಿಯಲ್ಲಿ ಕಾರ್ಯನಿರತವಾಗಿರುವ ಆ ಉಚ್ಚತರ ದೈವೀ ಸಾಮರ್ಥ್ಯ ಹಾಗೂ ದೈವೀ ಪ್ರಭಾವಗಳ ಚಟುವಟಿಕೆಗಳಾಗುತ್ತವೆ. ಆದರೆ ಇನ್ನೂ ಅಲ್ಲಿ ಒಂದು ಬಗೆಯ ಅಗಾಧ ಅಂತರ ಇರುತ್ತದೆ, ಅದು ಸಾಗಿ ಹೋಗುವುದಕ್ಕಾಗಿ ಮಬ್ಬುರೀತಿಯ ವಿಧಾನವೊಂದು ಅವಶ್ಯವಾಗುವಂತೆ ಮಾಡುತ್ತದೆ, ಅದು ಯಾವಾಗಲೂ ನಿಖರವಾಗಿರುವುದಿಲ್ಲ, ದೈವೀಮೂಲ ಹಾಗೂ ಹೊರಹೊಮ್ಮುತ್ತಿರುವ ಮಾನವ ಪ್ರವಾಹ ಇವುಗಳ ನಡುವೆ ಕೆಲವೊಮ್ಮೆ ಬಹಳ ವಿರೂಪಗೊಳಿಸುವಂತಹದು ಆಗಿರುತ್ತದೆ. ಆ ವಿಧಾನದ ಕೊನೆಯಲ್ಲಿ ಅಹಂಕಾರ, ಅಶುದ್ಧತೆ ಹಾಗೂ ಅಜ್ಞಾನ ಕ್ರಮೇಣ ಮಾಯವಾಗುತ್ತಿದ್ದಂತೆ ಈ ಕೊನೆಯ

ಅಂತರದನ್ನು ತೆಗೆದು ಹಾಕಲಾಗುತ್ತದೆ, ವ್ಯಕ್ತಿಯಲ್ಲಿರುವ ಎಲ್ಲವೂ ದೈವೀ ಕಾರ್ಯಗತಿಯಾಗಿರುತ್ತದೆ.

– ಶ್ರೀ ಅರವಿಂದರು

## ಕಪ್ತಾನನ ಧ್ವನಿಯಲ್ಲಿ ವಿಶ್ವಾಸವಿರಿಸುತ್ತ ಸಾಗರದ ದೂರದಾಚೆಯನ್ನು ಬೆಂಬತ್ತಿ ನಡೆ

**(20/232-33)** ಒರಟಾದ ಮತ್ತು ಇಕ್ಕಟ್ಟಿನದಾದ ಯೋಗ ಮಾರ್ಗದಲ್ಲಿ ಈ ವಿಶ್ವಾಸವನ್ನು ಮತ್ತು ದೃಢತೆಯನ್ನು ಸಾಧಿಸುವುದಾಗಲಿ, ಇಲ್ಲವೆ ರೂಢಿಗತ ಮಾಡಿಕೊಳ್ಳುವುದಾಗಲಿ ಕಠಿಣವಾದದ್ದು , ಏಕೆಂದರೆ ಹೃದಯ ಮತ್ತು ಮನಗಳಿಗೆ ತಾಳ್ಮೆಯಿರುವುದಿಲ್ಲ ಮತ್ತು ನಮ್ಮ ರಾಜಸಿಕ ಸ್ವಭಾವದ ಆತುರದ ಹಾಗೂ ತಡವರಿಸುವ ಸಂಕಲ್ಪ ಇದಕ್ಕೆ ಕಾರಣ. ಮನುಷ್ಯನ ಪ್ರಾಣಿಕ ಸ್ವಭಾವವು ಯಾವಾಗಲೂ ತನ್ನ ಶ್ರಮದ ಪ್ರತಿಫಲಕ್ಕಾಗಿ ಹಾತೊರೆಯುತ್ತದೆ, ಪ್ರತಿಫಲವನ್ನು ನಿರಾಕರಿಸಲಾಗುತ್ತದೆ ಇಲ್ಲವೆ ಅದು ಬಹಳ ತಡವಾಗಿ ದೊರೆಯುತ್ತದೆ ಎಂದು ತೋರಿಬಂದರೆ ಅವನು ಆದರ್ಶದಲ್ಲಿಯ ಹಾಗೂ ಮಾರ್ಗದರ್ಶನದಲ್ಲಿಯ ಶ್ರದ್ಧೆಯನ್ನು ಕಳೆದುಕೊಳ್ಳುತ್ತಾನೆ. ಏಕೆಂದರೆ ಅವನ ಮನಸ್ಸು ಯಾವಾಗಲೂ ವಸ್ತು–ವಿಷಯಗಳ ತೋರಿಕೆಯ ಮೇಲಿಂದ ನಿರ್ಣಯ ಕೈಕೊಳ್ಳುತ್ತದೆ, ಹಾಗೆ ಮಾಡುವುದು ಬೌದ್ಧಿಕ ತರ್ಕದ ಆಳವಾಗಿ ಬೇರು ಬಿಟ್ಟ ಮೊದಲ ರೂಢಿಯಾಗಿರುತ್ತದೆ, ಅದನ್ನೇ ಅವನು ಅತಿಯಾಗಿ ನಂಬುತ್ತಾನೆ. ನಾವು ಬಹಳ ಕಾಲ ಕಷ್ಟಕ್ಕೀಡಾದಾಗ ಇಲ್ಲವೆ ಅಂಧಕಾರದಲ್ಲಿ ಮುಗ್ಗರಿಸಿದಾಗ ನಮ್ಮ ಹೃದಯದಲ್ಲಿ ಭಗವಂತನ ಮೇಲೆ ದೋಷಾರೋಪಣೆ ಮಾಡುವುದಕ್ಕಿಂತ ಅಥವಾ ನಮ್ಮ ಮುಂದೆ ಇರಿಸಿಕೊಂಡ ಆದರ್ಶವನ್ನು ತೊರೆದು ಬಿಡುವುದಕ್ಕಿಂತ ಹಗುರಾದ ಕೆಲಸ ಬೇರೊಂದಿಲ್ಲ. ಏಕೆಂದರೆ ನಾವು ಹೇಳುವುದು ಹೀಗೆ : ''ಅತ್ಯಂತ ಉಚ್ಚತಮವಾದದ್ದನ್ನು ನಂಬಿದ್ದೆನಾದರೂ ನೋವು, ಪಾಪ ಹಾಗೂ ದೋಷಗಳಿಗೀಡಾಗಬೇಕಾಗಿ ಬಂದಿರುವುದರಿಂದ ನನಗೆ ದ್ರೋಹವಾಗಿದೆ'' ಇಲ್ಲವೆ ''ನಾನು ಇಡೀ ಜೀವನವನ್ನು ಒಂದು ತತ್ವಕ್ಕಾಗಿ ಪಣಕ್ಕಿಟ್ಟಿದ್ದೆ, ಅದನ್ನು ಅನುಭವದ ಕಠೋರ ವಾಸ್ತವ ಸಂಗತಿಗಳು ವಿರೋಧಿಸುತ್ತವೆ, ಧೈರ್ಯಗೆಡಿಸುತ್ತವೆ. ತಮ್ಮ ಮಿತಿಗಳನ್ನು ಒಪ್ಪಿಕೊಂಡು ಸಾಮಾನ್ಯ ಅನುಭವದ ಗಟ್ಟಿ ನೆಲದ ಮೇಲೆ ನಡೆಯುವ ಉಳಿದ ಜನರಂತೆ ನಾನೂ ಆಗಿದ್ದರೆ ಒಳ್ಳೆಯದಾಗುತ್ತಿತ್ತು.'' ಇಂತಹ ಕ್ಷಣಗಳಲ್ಲಿ–ಕೆಲವೊಮ್ಮೆ ಇವು ಮೇಲಿಂದ ಮೇಲೆ ಬರುವಂತಹವು ಮತ್ತು ದೀರ್ಘಕಾಲ



ಉಳಿದುಕೊಳ್ಳುವಂತಹವು ಆಗಿರುತ್ತವೆ–ಎಲ್ಲ ಉಚ್ಚ ಅನುಭವ ಮರೆತು ಹೋಗುತ್ತದೆ ಮತ್ತು ಹೃದಯ ತನ್ನ ಕಹಿ ಅನುಭವದ ಮೇಲೆ ಏಕಾಗ್ರಗೊಳ್ಳುತ್ತದೆ. ಇಂತಹ ಕರಾಳ ಮಾರ್ಗಗಳಲ್ಲಿಯೇ ಮನುಷ್ಯ ಮತ್ತೆ ಮೇಲಕ್ಕೇಳದಂತೆ ಪತನ ಹೊಂದುವ ಇಲ್ಲವೆ ದೈವೀ ಕಾರ್ಯಕ್ಕಾಗಿ ಶ್ರಮಿಸುವುದರಿಂದ ವಿಮುಖನಾಗುವ ಸಾಧ್ಯತೆಯಿರುತ್ತದೆ.

ಸುದೀರ್ಘಕಾಲದವರೆಗೆ ಹಾಗೂ ದೃಢತೆಯಿಂದ ಮನುಷ್ಯ ಈ ಮಾರ್ಗದ ಮೇಲೆ ನಡೆದಿದ್ದರೆ ಭಯಂಕರ ಪ್ರತಿಕೂಲ ಒತ್ತಡವಿದ್ದಾಗ್ಯೂ ಅದು ಅಳಿಯದೆ ಕೆಳಗೆ ಉಳಿದಿರುತ್ತದೆ, ಅದು ಮರೆಯಲ್ಲಿರಲಿ ಇಲ್ಲವೆ ಸೋತಂತೆ ಕಂಡು ಬರಲಿ ಮತ್ತೆ ಹೊರಬರಲು ಸಿಗುವ ಪ್ರಥಮ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತದೆ. ಅತಿ ಕೆಟ್ಟದಾದ ಮುಗ್ಗರಿಸುವಿಕೆಯಿದ್ದಾಗಲೂ, ದೀರ್ಘಕಾಲದವರೆಗೆ ಅಪಯಶಸ್ಸನ್ನೇ ಕಂಡಿದ್ದರೂ ಹೃದಯ ಹಾಗೂ ಬುದ್ಧಿಗಳಿಗಿಂತ ಹೆಚ್ಚಿನದಾದ ಏನೋ ಒಂದು ಆ ವಿಶ್ವಾಸವನ್ನು ಮತ್ತೆ ಎತ್ತಿ ಹಿಡಿಯುತ್ತದೆ. ಆದರೆ ಅನುಭವಿಯಾದ ಸಾಧಕನಿಗೂ ಕೂಡ ತಡವರಿಕೆಗಳು ಇಲ್ಲವೆ ನಿರಾಶಾಜನಕ ಪರಿಸ್ಥಿತಿಗಳು ಅವನ ಪ್ರಗತಿಯಲ್ಲಿ ವಿಳಂಬವನ್ನುಂಟು ಮಾಡುತ್ತವೆ ಮತ್ತು ಅವು ಅನನುಭವಿಯಾದವನಿಗೆ ಬಹಳ ಅಪಾಯಕಾರಿಯಾಗಿರುತ್ತವೆ. ಆದ್ದರಿಂದ ಆರಂಭದಿಂದಲೇ ಈ ಮಾರ್ಗದಲ್ಲಿರುವ ಕಷ್ಟಕರ ತೊಂದರೆಗಳ ಬಗ್ಗೆ ತಿಳಿದುಕೊಂಡು ಅವನ್ನು ಒಪ್ಪಿಕೊಳ್ಳುವುದು ಅವಶ್ಯವಾಗಿರುತ್ತದೆ ಮತ್ತು ಬುದ್ಧಿವಂತರಿಗೆ ಕುರುಡು ನಂಬಿಗೆ ಎನಿಸಬಹುದಾದ ಆದರೂ ತಾರ್ಕಿಕ ಬುದ್ಧಿಗಿಂತ ಹೆಚ್ಚು ಜಾಣತನದಿಂದ ಕೂಡಿರುವ ವಿಶ್ವಾಸದ ಆವಶ್ಯಕತೆಯ ಬಗ್ಗೆ ಸರಿಯಾದ ಭಾವನೆ ತಂದುಕೊಳ್ಳಬೇಕು. ಏಕೆಂದರೆ ವಿಶ್ವಾಸವೆಂಬುದು ಮೇಲಿನಿಂದ ಬಂದ ಆಧಾರವಾಗಿದೆ, ಬುದ್ಧಿಯನ್ನೂ ಅದರ ಮಾಹಿತಿಯನ್ನೂ ಮೀರುವ ಒಂದು ರಹಸ್ಯ ಬೆಳಕು ಚೆಲ್ಲುವ ಕಾಂತಿಯುಕ್ತ ಛಾಯೆಯಾಗಿರುತ್ತದೆ. ಅದು ಗುಪ್ತಜ್ಞಾನದ ಹೃದಯವಾಗಿದ್ದು ಕೂಡಲೆ ಕಂಡುಬರುವ ತೋರಿಕೆಗಳ ಅಧೀನದಲ್ಲಿರುವುದಿಲ್ಲ. ಸತತ ಪ್ರಯತ್ನಶೀಲವಾದ ವಿಶ್ವಾಸವು ತನ್ನ ಕಾರ್ಯಗಳಲ್ಲಿ ಸಮರ್ಥನೆ ಕಂಡುಕೊಳ್ಳುತ್ತದೆ ಮತ್ತು ಕೊನೆಗೆ ದೈವೀ ಜ್ಞಾನದ ಆತ್ಮದರ್ಶನದಲ್ಲಿ ಮೇಲಕ್ಕೆತ್ತಲ್ಪಡುತ್ತದೆ ಹಾಗೂ ಪರಿವರ್ತನೆಗೊಳಗಾಗುತ್ತದೆ. ಗೀತೆಯಲ್ಲಿ ಹೇಳಿದ ''ನಿರಾಶೆಯಲ್ಲಿ ಮುಳುಗಿ ಹೋಗುತ್ತಿರುವ ಭಾವನೆಯನ್ನು ತ್ಯಜಿಸಿದ ಹೃದಯದಿಂದ ಯೋಗವನ್ನು ಸತತ ಆಚರಿಸುತ್ತಿರಬೇಕು''ಎಂಬ ಆದೇಶಕ್ಕೆ ಅಂಟಿಕೊಂಡಿರಬೇಕು. ಸಂಶಯಪಡುವ ಬುದ್ಧಿಯನ್ನು ಕುರಿತು ''ನಾನು ನಿನ್ನನ್ನು ಎಲ್ಲ

ಪಾಪಗಳಿಂದ ಹಾಗೂ ಕೆಡುಕಿನಿಂದ ಮುಕ್ತನನ್ನಾಗಿ ಮಾಡುತ್ತೇನೆ ದುಃಖಿಸದಿರು'' ಎಂಬ ಪ್ರಭುವಿನ ವಚನವನ್ನು ನಾವು ಯಾವಾಗಲೂ ಪುನಃ ಪುನಃ ಹೇಳುತ್ತಿರಬೇಕು. ಕೊನೆಗೆ ವಿಶ್ವಾಸದ ಹೊಯ್ದಾಟವು ನಿಂತು ಹೋಗುತ್ತದೆ, ಏಕೆಂದರೆ ನಾವು ಪ್ರಭುವಿನ ಮುಖವನ್ನು ಕಾಣುತ್ತೇವೆ ಹಾಗೂ ದೈವೀ ಸಾನ್ನಿಧ್ಯ ಸದಾ ನಮ್ಮೊಡನಿರುವ ಭಾವನೆಯನ್ನು ಅನುಭವಕ್ಕೆ ತಂದುಕೊಳ್ಳುತ್ತೇವೆ.

– ಶ್ರೀ ಅರವಿಂದರು

(The Mother [ಶ್ರೀಮಾತೆ] p. **9**)

ಜೀವನದ ಪಥದಲ್ಲಿ ಎಲ್ಲ ಬಗೆಯ ಭಯ, ಸಂಕಟ, ದುರ್ಘಟನೆಗಳನ್ನು ಎದುರಿಸಲು ಯುದ್ಧಸಜ್ಜಿತನಾಗಿ ನೀನು ಹೆಜ್ಜೆ ಹಾಕಬೇಕೆಂದಿದ್ದರೆ ಕೇವಲ ಎರಡು ಸಂಗತಿಗಳ ಆವಶ್ಯಕತೆಯುಂಟು. ಇವೆರಡೂ ಸದಾ ಏಕತ್ರವಾಗಿರುವವು. ಒಂದು ಪರಮಾತೆಯ ಕರುಣೆ ಇನ್ನೊಂದು ಶ್ರದ್ಧೆ-ನಿಷ್ಠೆ-ಸಮರ್ಪಣೆಗಳಿಂದ ಹುರಿಗೊಂಡ ನಿನ್ನ ಅಂತಃಸ್ಥಿತಿ.

– ಶ್ರೀ ಅರವಿಂದರು

★

## ಸಂತಸದಿಂದಿರು, ಉಕ್ಕೇರುತ್ತಿರುವ ಅಲೆಗಳಿಗೆ ಅಂಜದಿರು, ಸದಾ ನಮ್ಮ ಕಪ್ತಾನ ಚುಕ್ಕಾಣಿಯನ್ನು ದೃಢವಾಗಿ ಹಿಡಿದಿರುವನು

(Synthesis of Yoga [ಯೋಗ ಸಮನ್ವಯ], p. **234-35**)

ನಮ್ಮ ಕಾರ್ಯಗಳ ಒಡೆಯನು ನಮ್ಮ ಸ್ವಭಾವವನ್ನು ಪರಿವರ್ತನೆಗೊಳ-ಪಡಿಸುತ್ತಿರುವಾಗಲೂ ಅದನ್ನು ಗೌರವಿಸುತ್ತಾನೆ, ಅವನು ಸದಾ ನಮ್ಮ ಸ್ವಭಾವದ ಮೂಲಕವೇ ಕಾರ್ಯಮಾಡುತ್ತಾನಲ್ಲದೆ ಚಪಲಚಿತ್ತನಾಗಿ ಕೈಕೊಳ್ಳುವುದಿಲ್ಲ. ನಮ್ಮ ಅಪರಿಪೂರ್ಣ ಸ್ವಭಾವದಲ್ಲಿ ಪರಿಪೂರ್ಣತೆಗೆ ಬೇಕಾದ ಸಾಮಗ್ರಿಗಳಿರುತ್ತವೆ, ಆದರೆ ಅವು ಅನಿರ್ದಿಷ್ಟ, ವಿಕಾರ ಹೊಂದಿದ, ಸರಿಯಾದ ಸ್ಥಾನದಲ್ಲಿರದ, ಅವ್ಯವಸ್ಥೆಗೊಳಗಾದ, ಅಲ್ಲಲ್ಲಿ ಚೆಲ್ಲಿಕೊಂಡ ಹಾಗೆ ಇಲ್ಲವೆ ಅಪರಿಪೂರ್ಣ ಕ್ರಮದಲ್ಲಿ ಇರುತ್ತವೆ. ಈ ಎಲ್ಲ ಸಾಮಗ್ರಿಯನ್ನು ತಾಳ್ಮೆಯಿಂದ ಪರಿಪೂರ್ಣಗೊಳಿಸಬೇಕು, ಶುದ್ಧೀಕರಿಸಬೇಕು, ಮರುಸಂಘಟನೆ ಮಾಡಬೇಕು, ಹೊಸ ಎರಕದಲ್ಲಿ ಹಾಕಿ ಪರಿವರ್ತಿಸಬೇಕು, ಅದನ್ನು ತುಂಡು, ತುಂಡು ಮಾಡದೆ, ಛೇದಿಸದೆ, ಕೊಲ್ಲದೆ, ವಿಕಲಾಂಗ ಮಾಡದೆ, ಒತ್ತಾಯ ಮತ್ತು ನಿರಾಶೆಗಳಿಂದ



ನಿರ್ನಾಮಗೊಳಿಸದೆ ಪರಿವರ್ತಿಸಬೇಕಾಗಿದೆ. ಈ ಜಗತ್ತು ಹಾಗೂ ಅದರಲ್ಲಿ ವಾಸಿಸುವ ನಾವು ಭಗವಂತನ ಸೃಷ್ಟಿ ಹಾಗೂ ಅವನ ಪ್ರಕಟಣೆ. ನಮ್ಮ ಸಂಕುಚಿತ ಅಜ್ಞಾನಿ ಮನಸ್ಸು ನಿಶ್ಚಲನೀರವತೆಯಲ್ಲಿದ್ದಾಗ ಮತ್ತು ದೈವೀಜ್ಞಾನಕ್ಕೆ ತೆರೆದುಕೊಂಡಾಗ ಮಾತ್ರ ಅವನು ನಮ್ಮೊಡನೆ ಹಾಗೂ ಜಗತ್ತಿನೊಡನೆ ನಡೆಸುತ್ತಿರುವ ವ್ಯವಹಾರ ತಿಳಿದುಬರುವುದು. ನಮ್ಮ ದೋಷಗಳಲ್ಲಿ ಸತ್ಯದ ಸಾರವೊಂದಿದೆ, ಅದು ತನ್ನ ಅರ್ಥವನ್ನು ನಮ್ಮ ತಡಕಾಡುವ ಬುದ್ಧಿಗೆ ತಿಳಿಸಿಕೊಡಲು ಶ್ರಮಿಸುತ್ತದೆ. ಮನುಷ್ಯನ ಬುದ್ಧಿಶಕ್ತಿ ದೋಷವನ್ನು ಕತ್ತರಿಸುತ್ತಿದ್ದಂತೆಯೆ ಸತ್ಯವನ್ನೂ ಅದರೊಂದಿಗೆ ಕತ್ತರಿಸಿ ಅವುಗಳ ಸ್ಥಾನದಲ್ಲಿ ಅರ್ಧಸತ್ಯ, ಅರ್ಧದೋಷಗಳನ್ನಿರಿಸುತ್ತದೆ, ಆದರೆ ದೈವೀ ವಿವೇಕವು ನಮ್ಮ ದೋಷಗಳನ್ನು ಸಹಿಸುತ್ತದೆ ಹಾಗೂ ಮಿಥ್ಯೆಯ ಪ್ರತಿಯೊಂದು ಮುಸುಕಿನಲ್ಲಿ ಅವಿತುಕೊಂಡ ಹಾಗೂ ರಕ್ಷಣೆಗೊಳಗಾದ ಸತ್ಯವನ್ನು ನಾವು ತಲುಪುವವರೆಗೆ ಹೀಗೆ ನಮ್ಮ ದೋಷಗಳನ್ನು ಸಹಿಸುವುದನ್ನು ಮುಂದುವರಿಸಿಕೊಂಡು ಹೋಗುತ್ತದೆ. ನಮ್ಮ ಪಾಪಗಳು, ಅರಸುತ್ತಿರುವ ನಮ್ಮ ಸಾಮರ್ಥ್ಯ ತಪ್ಪು ದಾರಿಯಲ್ಲಿ ಇಟ್ಟ ಹೆಜ್ಜೆಗಳು. ಆ ಸಾಮರ್ಥ್ಯ ಪಾಪವನ್ನು ತನ್ನ ಗುರಿಯಾಗಿರಿಸಿಕೊಂಡಿಲ್ಲ, ಆದರೆ ಪರಿಪೂರ್ಣತೆಯನ್ನು, ನಾವು ದೈವೀ ಸದ್ಗುಣವೆಂದು ಕರೆಯಬಹುದಾದದ್ದನ್ನು ತನ್ನ ಧ್ಯೇಯವಾಗಿರಿಸಿಕೊಂಡಿದೆ. ಬಹಳಷ್ಟು ಸಲ ಆ ಪಾಪಗಳು ಪರಿವರ್ತನೆ ಹೊಂದಬೇಕಾದ ಮತ್ತು ಈ ಕುರೂಪಿ ವೇಷದಿಂದ ಬಿಡುಗಡೆ ಹೊಂದಬೇಕಾದ ಗುಣವೊಂದರ ಪರದೆಗಳಾಗಿರುತ್ತವೆ, ಹಾಗಿಲ್ಲದಿದ್ದರೆ, ವಸ್ತು-ವಿಷಯಗಳ ಪರಿಪೂರ್ಣ ಮುನ್ನೆಚ್ಚರಿಕೆಯಲ್ಲಿ ಆ ಪಾಪಗಳ ಅಸ್ತಿತ್ವವನ್ನು, ಅವು ಮುಂದುವರಿದು ಹೋಗುವುದನ್ನು ಸಹಿಸಿಕೊಳ್ಳಲಾಗುತ್ತಿರಲಿಲ್ಲ. ನಮ್ಮ ಕಾರ್ಯಗಳ ಒಡೆಯನು ದೊಡ್ಡ ತಪ್ಪುಗಳನ್ನು ಮಾಡುವುದರಲ್ಲಿ ತೊಡಗಿರುವುದಿಲ್ಲ, ಅವುಗಳಿಗೆ ತಟಸ್ಥ ಸಾಕ್ಷಿಯಾಗಲಿ ಅಲ್ಲ, ಅವನು ನಮ್ಮ ತರ್ಕಕ್ಕಿಂತ ಜಾಣನು, ನಮ್ಮ ಸದ್ಗುಣಕ್ಕಿಂತ ವಿವೇಕಿಯೂ ಆಗಿದ್ದಾನೆ.

– ಶ್ರೀ ಅರವಿಂದರು

(Letters on Yoga, p. **1417**)

ಪರಾಪ್ರಕೃತಿಯಲ್ಲಿ ಭಯವೆಂಬುದಿಲ್ಲ. ಭಯ ಪ್ರಾಣಿಕ ಸ್ತರದ ಸೃಷ್ಟಿ, ಅದು ಅಜ್ಞಾನದ ಹುಟ್ಟುಗುಣ...

– ಶ್ರೀ ಅರವಿಂದರು

★

## ಭಗವಂತನ ಕೃಪೆಯಲ್ಲಿ ವಿಶ್ವಾಸವಿರಿಸುತ್ತ ಅವನ ಸಂಕಲ್ಪವನ್ನು ಎದುರು ನೋಡು, ಅವನೇ ಮುನ್ನಡೆಸಲಿ

(Synthesis of Yoga [ಯೋಗ ಸಮನ್ವಯ], p. **234–35**)

ನಮ್ಮ ಸ್ವಭಾವವು ತಪ್ಪುಗ್ರಹಿಕೆಯದು ಹಾಗೂ ಜ್ಞಾನದ ಕೊರತೆಯುಳ್ಳದ್ದು ಆಗಿದೆಯಷ್ಟೇ ಅಲ್ಲ, ಅದರ ಸಾಮರ್ಥ್ಯದಲ್ಲೂ ದುರ್ಬಲವಾಗಿದೆ. ಆದರೆ ದೈವೀಶಕ್ತಿಯಲ್ಲಿ ನಮ್ಮ ನಂಬಿಕೆಯಿರಿಸಿದರೆ ಅದು ನಮ್ಮನ್ನು ಕೈಹಿಡಿದು ನಡೆಸುತ್ತದೆ ಮತ್ತು ನಮ್ಮ ನ್ಯೂನತೆಗಳನ್ನು ಹಾಗೂ ಶಕ್ತಿಗಳನ್ನು ದೈವೀ ಉದ್ದೇಶಕ್ಕಾಗಿ ಉಪಯೋಗಿಸುತ್ತದೆ. ನಮಗೆ ಹತ್ತಿರದ್ದೆನಿಸುವ ಧ್ಯೇಯದಲ್ಲೇ ನಾವು ವಿಫಲರಾದರೆ, ದುಷ್ಪರಿಣಾಮ ಕಂಡುಕೊಂಡರೆ ಅದಕ್ಕೆ ಕಾರಣವಿಷ್ಟೆ : ಭಗವಂತನ ಉದ್ದೇಶ ಆ ರೀತಿಯದಾಗಿರುತ್ತದೆ. ಬಹಳಷ್ಟು ಸಲ ಕೂಡಲೇ ಹಾಗೂ ಪೂರ್ಣವಾಗಿ ದೊರಕುವ ಯಶಸ್ಸಿಗಿಂತ ವಿಫಲತೆ ಇಲ್ಲವೆ ದುಷ್ಪರಿಣಾಮ ಹೆಚ್ಚು ನೈಜವಾದ ಪರಿಣಾಮಕ್ಕೆ ಸರಿಯಾದ ದಾರಿ ಮಾಡಿಕೊಡುತ್ತದೆ. ನಾವು ನೋವನ್ನನುಭವಿಸಬೇಕಾಗಿ ಬಂದರೆ ಅದು ಅಪೂರ್ವವಾದ ಆನಂದದ ಸಾಧ್ಯತೆಗಾಗಿ ನಮ್ಮನ್ನು ಅಣಿಗೊಳಿಸುತ್ತದೆ, ನಾವು ಮುಗ್ಗರಿಸಿದೆವಾದರೆ ಅದು ಕೊನೆಗೆ ಪರಿಪೂರ್ಣ ರೀತಿಯಲ್ಲಿ ನಾವು ನಡೆಯುವುದನ್ನು ಕಲಿತುಕೊಳ್ಳುವುದಕ್ಕಾಗಿರುತ್ತದೆ. ಶಾಂತಿ, ಪರಿಶುದ್ಧತೆ ಮತ್ತು ಪರಿಪೂರ್ಣತೆಗಳನ್ನು ದೊರಕಿಸಲು ಕೂಡ ಅತಿಯಾದ ಆವೇಶಪೂರ್ಣ ಆತುರವಿರಬಾರದು. ಶಾಂತಿ ನಮ್ಮದಾಗಿರಬೇಕು, ಆದರೆ ಅದು ನಿರ್ನಾಮಗೊಳಿಸಿದ ಇಲ್ಲವೆ ಊನಗೊಳಿಸಿದ ಸಾಮರ್ಥ್ಯಗಳ, ಬರಿದಾದ ಇಲ್ಲವೆ ಹಾಳುಗೆಡವಲಾದ ಸ್ವಭಾವದ ಶಾಂತಿಯಾಗಿರಬಾರದು. ಈ ಬಗೆಯ ಶಾಂತಿ, ತಳಮಳವನ್ನು ತಾಳಿಕೊಳ್ಳುವ ಸಾಮರ್ಥ್ಯ ಹೊಂದಿರುವುದಿಲ್ಲ, ಏಕೆಂದರೆ ನಾವು ಅದರ ಸಾಮರ್ಥ್ಯಗಳಲ್ಲಿ ಗಾಢತೆ, ತೀವ್ರತೆ ಹಾಗೂ ಶಕ್ತಿಗಳಿಲ್ಲದಂತೆ ಮಾಡಿರುತ್ತೇವೆ. ಪರಿಶುದ್ಧತೆಯು ನಮ್ಮ ಗುರಿಯಾಗಿರಬೇಕು, ಆದರೆ ಅದು ಶೂನ್ಯವಾದದ್ದು , ಬಣ್ಣಗೆಟ್ಟದ್ದು ಹಾಗೂ ಕಠೋರ ನಿರಾಸಕ್ತಿಯದೂ ಆಗಿರಬಾರದು.



ನಮ್ಮಿಂದ ಪರಿಪೂರ್ಣತೆಯನ್ನು ಅಪೇಕ್ಷಿಸಲಾಗಿದೆ, ಆದರೆ ಸಂಕುಚಿತ ಇತಿಮಿತಿಗಳಿಗೆ ಒಳಗಾದ ವ್ಯಾಪ್ತಿಯ ಪರಿಪೂರ್ಣತೆಯನ್ನಲ್ಲ ಇಲ್ಲವೆ ಸದಾಕಾಲ ಸ್ವತಂತ್ರವಾಗಿ ಸ್ವ-ವಿಸ್ತರಣೆ ಹೊಂದುತ್ತಿರುವ ಅನಂತದ ಸುರುಳಿಗೆ ಪೂರ್ಣವಿರಾಮವನ್ನು ಸ್ವೇಚ್ಛೆಯಿಂದ ಇರಿಸಬಹುದಾದ ಪರಿಪೂರ್ಣತೆಯನ್ನಲ್ಲ. ನಮ್ಮ ಸ್ವಭಾವವನ್ನು ದೈವೀಸ್ವಭಾವವನ್ನಾಗಿ ಪರಿವರ್ತಿಸುವುದೇ ನಮ್ಮ ಉದ್ದೇಶ. ಆದರೆ ದೈವೀ ಸ್ವಭಾವವು ಮಾನಸಿಕ ಇಲ್ಲವೆ ನೈತಿಕವಾದದ್ದಲ್ಲ, ಅದು ಒಂದು ಬಗೆಯ ಆಧ್ಯಾತ್ಮಿಕ ಸ್ಥಿತಿ, ದೊರಕಿಸಲು ಕಠಿಣವಾದದ್ದು, ನಮ್ಮ ಬುದ್ಧಿಯಿಂದ ಕಲ್ಪಿಸಿಕೊಳ್ಳಲೂ ಕೂಡ ಕಠಿಣವಾದದ್ದು. ನಮ್ಮ ಕರ್ಮದ ಹಾಗೂ ಯೋಗದ ಪ್ರಭುವಿಗೆ ಕೈಕೊಳ್ಳಬೇಕಾದದ್ದೇನು ಎಂಬುದು ತಿಳಿದಿದೆ ಮತ್ತು ಅವನದೇ ಆದ ಸಾಧನಗಳಿಂದ, ವಿಧಾನದಿಂದ ಅವನು ನಮ್ಮಲ್ಲಿ ಆ ಕಾರ್ಯ ಕೈಕೊಳ್ಳಲು ನಾವು ಅನುವು ಮಾಡಿಕೊಡಬೇಕು.

ಅವಿದ್ಯೆಯ ಚಲನೆಯು ಅದರ ಮೂಲದಲ್ಲಿಯೇ ಅಹಂಕಾರದಿಂದ ಕೂಡಿರುತ್ತದೆ. ಅಹಂಕಾರವನ್ನು ತೊಡೆದು ಹಾಕುವುದಕ್ಕಿಂತ ಕಷ್ಟದ ಕೆಲಸ ಬೇರೊಂದಿಲ್ಲ , ಆದಾಗ್ಯೂ ನಾವು ವ್ಯಕ್ತಿತ್ವವನ್ನು ಒಪ್ಪಿಕೊಳ್ಳುತ್ತೇವೆ ಮತ್ತು ನಮ್ಮ ಅಪರಿಷ್ಕೃತ ಸ್ವಭಾವದ ಅರ್ಧ ಪ್ರಕಾಶ ಹಾಗೂ ಅರ್ಧ ಶಕ್ತಿಯಿಂದ ಕಾರ್ಯದಲ್ಲಿ ತೊಡಗುತ್ತೇವೆ. ಕಾರ್ಯ ಕೈಕೊಳ್ಳುವ ಪ್ರೇರಣೆಯನ್ನು ನಿರಾಕರಿಸುವುದರ ಮೂಲಕ ಅಹಂಕಾರ ಸೊರಗುವಂತೆ ಮಾಡಬಹುದು ಇಲ್ಲವೆ ವ್ಯಕ್ತಿತ್ವದ ಎಲ್ಲ ಚಲನೆಗಳನ್ನು ನಮ್ಮಿಂದ ಕತ್ತರಿಸಿ ಹಾಕಿ ಅಹಂಕಾರವನ್ನು ಪೂರ್ತಿ ನಾಶಗೊಳಿಸಬಹುದು. ಸ್ವ-ಮರೆವಿನ ಶಾಂತಿಯ ಸಮಾಧಿ ಸ್ಥಿತಿಯಲ್ಲಿ ಇಲ್ಲವೆ ದೈವೀ ಪ್ರೇಮದ ಆನಂದದಲ್ಲಿ ಅಹಂಕಾರವನ್ನು ಘನತೆಗೇರಿಸುವುದು ಸುಲಭವಾದದ್ದು. ಆದರೆ ನಮ್ಮಲ್ಲಿಯ ನಿಜವಾದ 'ಪುರುಷ'ನನ್ನು ಮುಕ್ತಗೊಳಿಸುವುದು ಮತ್ತು ದೈವೀಶಕ್ತಿಯ ಪರಿಶುದ್ಧ ಪಾತ್ರೆಯಾಗುವುದು ಹಾಗೂ ದೈವೀಕಾರ್ಯದ ಪರಿಪೂರ್ಣ ಉಪಕರಣವಾಗಬಲ್ಲ ದೇವಮಾನವತೆಯನ್ನು ಸಿದ್ಧಿಸಿಕೊಳ್ಳುವುದು ನಮ್ಮ ಅತ್ಯಂತ ಕಠಿಣ ಸಮಸ್ಯೆ. ಸ್ಥಿರತೆಯಿಂದ ಒಂದು ಹೆಜ್ಜೆಯ ನಂತರ ಇನ್ನೊಂದು ಹೆಜ್ಜೆ ಮುಂದಿರಿಸಬೇಕು, ಒಂದು ತೊಂದರೆಯ ನಂತರ ಇನ್ನೊಂದನ್ನು ಸಂಪೂರ್ಣವಾಗಿ ಅನುಭವಿಸಿ ಅದರ ಮೇಲೆ ಪ್ರಭುತ್ವ ಪಡೆಯಬೇಕು. ಕೇವಲ ದೈವೀ ವಿವೇಕ ಮತ್ತು ಶಕ್ತಿ ನಮಗಾಗಿ ಇದನ್ನು ಮಾಡಬಲ್ಲುದು. ಆದರೆ ಅದಕ್ಕಾಗಿ ಅಚಲ ಧೈರ್ಯ ಮತ್ತು ತಾಳ್ಮೆಯಿಂದ ಅದರ ಕಾರ್ಯಕ್ಕೆ ನಾವು ಒಪ್ಪಿ ಅದರಂತೆ ನಡೆಯಬೇಕು ಮತ್ತು ಸಂಪೂರ್ಣ ಶ್ರದ್ಧೆಯಿಂದ ಅದಕ್ಕೆ ಶರಣಾಗಬೇಕು.

ಈ ಸುದೀರ್ಘ ದಾರಿಯ ಮೇಲೆ ನಾವು ಇರಿಸಬೇಕಾದ ಮೊದಲ ಹೆಜ್ಜೆಯೆಂದರೆ ನಮ್ಮೆಲ್ಲ ಕರ್ಮಗಳನ್ನು ನಮ್ಮೊಳಗಿರುವ ಭಗವಂತನಿಗೆ ಯಜ್ಞರೂಪದಲ್ಲಿ ಮುಡಿಪಾಗಿರಿಸುವುದು, ಇದು ಮನಸ್ಸಿನ ಹಾಗೂ ಹೃದಯದ ಪ್ರವೃತ್ತಿ, ಪ್ರಾರಂಭಿಸುವುದಕ್ಕೆ ಕಷ್ಟಕರವಾದದ್ದೇನಲ್ಲ , ಆದರೆ ಅದನ್ನು ಪರಿಪೂರ್ಣ ನಿಷ್ಠೆಯಿಂದ ಕೂಡಿರುವಂತೆ, ಸರ್ವವ್ಯಾಪಿಯಾಗಿರುವಂತೆ ಮಾಡುವುದು ಹೆಚ್ಚು ಕಷ್ಟಕರವಾದದ್ದು. ನಮ್ಮ ಕರ್ಮಗಳ ಫಲಗಳಿಗಾಗಿ ಇರುವ ಆಸಕ್ತಿಯನ್ನು ತ್ಯಜಿಸುವುದು ಎರಡನೆಯ ಹೆಜ್ಜೆ , ಏಕೆಂದರೆ ಕೇವಲ ನಿಜವಾದ, ಅನಿವಾರ್ಯವಾದ, ಅತ್ಯಂತ ವಾಂಛನೀಯವಾದ ತ್ಯಾಗದ ಫಲವೆಂದರೆ- ಅದು ಅವಶ್ಯವಾದ ಒಂದು ಸಂಗತಿ-ಭಗವಂತನ ಸಾನ್ನಿಧ್ಯ, ಅವನ ಪ್ರಜ್ಞೆ ಹಾಗೂ ಶಕ್ತಿ ದೊರಕಿಸುವುದು ಮತ್ತು ಅದನ್ನು ದೊರಕಿಸಿದ್ದೇ ಆದರೆ ಉಳಿದುದೆಲ್ಲ ತಾನೇ ಕೂಡಿಕೊಳ್ಳುತ್ತದೆ. ಇದು ನಮ್ಮ ಪ್ರಾಣಿಕ ಸತ್ತೆಯ, ಆಸೆಯ ಆತ್ಮದ, ಆಸೆಯ ಸ್ವಭಾವದ ಅಹಂಕಾರೀ ಸಂಕಲ್ಪದ ಪರಿವರ್ತನೆ, ಇದು ಈ ಮೊದಲಿನದಕ್ಕಿಂತ ಕಠಿಣವಾದದ್ದು. ಮನುಷ್ಯ ತನ್ನ ಕೇಂದ್ರ ಅಹಂಕಾರದಿಂದ, ಕಾರ್ಯ ಕೈಕೊಳ್ಳುತ್ತಿದ್ದೇನೆ ಎಂಬ ಅಹಂಕಾರಿಕ ಭಾವನೆಯಿಂದ ಬಿಡುಗಡೆ ಹೊಂದುವುದು ಮೂರನೆಯ ಹೆಜ್ಜೆ. ಅದು ಎಲ್ಲದಕ್ಕಿಂತ ಅತ್ಯಂತ ಕಠಿಣವಾದ ಪರಿವರ್ತನೆ ಮತ್ತು ಮೊದಲನಯವೆರಡು ಹೆಜ್ಜೆಗಳೂ ಕೂಡ ಮೂರನೆಯ ಹೆಜ್ಜೆ ಕಿರೀಟಪ್ರಾಯವಾಗಿ ಬಂದು ಅಹಂಕಾರವನ್ನು ನಂದಿಸಿ, ಆಸೆಯ ಮೂಲವನ್ನೇ ನಾಶಮಾಡದ ಹೊರತು, ಪೂರ್ಣಗೊಳ್ಳಲಾರವು. ತನ್ನ ಸ್ವಭಾವದಲ್ಲಿಯ ಕ್ಷುದ್ರ ಅಹಂಕಾರಿಕ ಭಾವನೆಯನ್ನು ಮೂಲಸಹಿತ ಕಿತ್ತು ಹಾಕಿದಾಗಲೇ ಅನ್ವೇಷಕನು ಭಗವಂತನ ಅಂಶ ಹಾಗೂ ಸಾಮರ್ಥ್ಯವಾಗಿ ಮೇಲ್ಗಡೆಗಿರುವ ತನ್ನ ನಿಜವಾದ ಪುರುಷನನ್ನು ಅರಿತುಕೊಳ್ಳಬಲ್ಲನು ಮತ್ತು ಆಗ ಭಗವಂತನ ಶಕ್ತಿಯ ಸಂಕಲ್ಪದಿಂದ ಬರುವ ಪ್ರೇರಣೆಗಳ ಹೊರತಾಗಿ ಉಳಿದವುಗಳನ್ನೆಲ್ಲ ನಿರಾಕರಿಸುವನು.

– ಶ್ರೀ ಅರವಿಂದರು

★

## ಹೊಡೆದೋಡಿಸುವ ಬಿರುಗಾಳಿ ಮಳೆಗಳಿಂದಾಚೆ
## ಮುಂಬರುವ ಪ್ರಕಾಶಮಯ ದಿನಗಳಿಗಾಗಿ ಕಾದು ನೋಡು

ಪೃಥ್ವಿಯ ಮೇಲಿನ ದೈವೀ ಜೀವನವು ಐಹಿಕ ಜೀವನದ ಅಸ್ತಿತ್ವದಿಂದ ಭಿನ್ನ ಹಾಗೂ ಪ್ರತ್ಯೇಕವಾದಂತಹದೇನೋ ಆಗಿರಬೇಕಿಲ್ಲ , ಅದು ಮಾನವನನ್ನು ಹಾಗೂ ಮಾನವ



ಜೀವನವನ್ನು ಕೈಗೆತ್ತಿಕೊಂಡು ಪರಿವರ್ತಿಸಬೇಕಾದುದನ್ನು ಪರಿವರ್ತಿಸುತ್ತದೆ, ಆಧ್ಯಾತ್ಮೀಕರಣಗೊಳಿಸಬೇಕಾದುದನ್ನು ಆಧ್ಯಾತ್ಮೀಕರಣಗೊಳಿಸುತ್ತದೆ. ತನ್ನ ಪ್ರಭಾವವನ್ನು ಉಳಿದದ್ದರ ಮೇಲೆ ಬೀರಿ ಆಮೂಲಾಗ್ರವಾದ ಇಲ್ಲವೆ ಮೇಲಕ್ಕೆತ್ತುವ ಬದಲಾವಣೆಯನ್ನು ತರಲು ಪರಿಣಾಮಕಾರಿಯಾಗುತ್ತದೆ, ವಿಶ್ವಂಭರ ಮತ್ತು ವ್ಯಕ್ತಿಗತವಾದವುಗಳ ನಡುವೆ ಸಂಯೋಗವನ್ನೊದಗಿಸುತ್ತದೆ, ಆಧ್ಯಾತ್ಮಿಕ ಸತ್ಯದ ಪ್ರಕಾಶಮಯ ಛಾಯೆಯಾದ ಆದರ್ಶದ ಮೇಲೆ ಆಕ್ರಮಣ ಮಾಡಿ ಅದನ್ನು ಇನ್ನೂ ಶ್ರೇಷ್ಠತರ ಹಾಗೂ ಉನ್ನತತರ ಅಸ್ತಿತ್ವದಲ್ಲಿ ಮೇಲಕ್ಕೆತ್ತುತ್ತದೆ. ಮನಸ್ಸನ್ನು ಅದು ಯೋಚನೆಯ ದಿವ್ಯಪ್ರಕಾಶ ಹಾಗೂ ಸಂಕಲ್ಪದಲ್ಲಿ ಮೇಲಕ್ಕೆತ್ತುತ್ತದೆ, ಪ್ರಾಣವನ್ನು ಆಳಾತಿಆಳದ, ನೈಜವಾದ ಭಾವನೆ, ಕ್ರಿಯೆಗಳೆಡೆಗೆ ಏಳ್ಗೆ ಹೊಂದುವಂತೆ ಮಾಡುತ್ತದೆ, ತನ್ನ ಸತ್ತೆಯ ಸತ್ಯದತ್ತ ಇನ್ನೂ ಮೇಲಕ್ಕೇರಲು ಸಾಧ್ಯವಾಗದಂತಹದೆಲ್ಲವನ್ನು , ಅದರ ಪೂರ್ಣತೆಯ ಹತ್ತಿರ ತರುತ್ತದೆ. ಆ ಬದಲಾವಣೆಗೆ ಸಿದ್ಧವಾಗಿರದಂತಹದೆಲ್ಲವನ್ನೂ ಅದರ ಇನ್ನೂ ಅಪರಿಪೂರ್ಣ ಉತ್ಕ್ರಾಂತಿ ಸ್ವ-ಸಫಲತೆಗೆ ಅಣಿಗೊಳಿಸಿದಾಗೆಲ್ಲ , ಅದು ಇನ್ನೂ ತನಗೆ ಸಾಧ್ಯತೆ ತೆರೆದಿರುವುದನ್ನು ಕಂಡುಕೊಳ್ಳುತ್ತದೆ.

ಸದ್ಯ ಮಾನವ ಮನಸ್ಸು ಸೀಮಿತ, ಅಪರಿಪೂರ್ಣ, ಸತ್ಯದ ಮಾರ್ಗದಿಂದ ಬೇರೆ ದಿಕ್ಕಿನತ್ತ ಸಾಗುವಂತಹದು, ಅಥವಾ ಸತ್ಯದ ಮಾರ್ಗದಿಂದ ತಪ್ಪಿಸಿಕೊಳ್ಳುವಂತಹದು, ಎಲ್ಲ ಬಗೆಯ ದೋಷಗಳಿಗೆ ಒಳಗಾಗುವಂತಹದು, ಸಂಪೂರ್ಣ ಮಿಥ್ಯೆ ಹಾಗೂ ಸ್ವಭಾವದ ವಿಕೃತಿಗಳಿಂದ ಮನವೊಲಿಕೆಗೊಳಗಾಗುವುದಕ್ಕೂ ಕೂಡ ತೆರೆದಿಟ್ಟುಕೊಳ್ಳುವಂತಹದು ಆಗಿದೆ. ಆ ಮನಸ್ಸು ಕುರುಡಾಗಿದೆ, ಅಚೇತನ ಅಜ್ಞಾನಗಳತ್ತ ಎಳೆಯಲ್ಪಡುತ್ತದೆ, ಜ್ಞಾನದತ್ತ ಕ್ವಚಿತ್ತಾಗಿ ತಲುಪುತ್ತದೆ, ಅದರ ಬುದ್ಧಿ ಉಚ್ಚತರ ಜ್ಞಾನವನ್ನು ಅಮೂರ್ತ ರೂಪಗಳಲ್ಲಿ , ನೇರವಾಗಿರದ ಆಕಾರಗಳಲ್ಲಿ ಹಿಡಿದುಕೊಂಡು ಉಚ್ಚತರ ಅಂತರ್ಬೋಧೆಯ ಸಂದೇಶಗಳನ್ನೂ ಕೂಡ ನಿಶ್ಚಿತವಲ್ಲದ ಹಾಗೂ ವಾದಗ್ರಸ್ತ ರೀತಿಯಲ್ಲಿ ಗ್ರಹಿಸುತ್ತದೆ. ಇಂತಹದರ ಸ್ಥಾನದಲ್ಲಿ ಮುಕ್ತವಾದ, ಸ್ವತಂತ್ರ ಹಾಗೂ ತನ್ನಲ್ಲಿ , ತನ್ನ ಉಪಕರಣಗಳಲ್ಲಿ ಅತ್ಯಂತ ಪರಿಪೂರ್ಣತೆ ಹೊಂದಿದ ನಿಜವಾದ ಮನಸ್ಸು , ಸ್ವತಂತ್ರ ಹಾಗೂ ಪ್ರಕಾಶಪೂರ್ಣ ಮನಸ್ಸಿನ ಪ್ರಭುತ್ವಕ್ಕೊಳಗಾದ ಪ್ರಾಣ ಮತ್ತು ಸ್ವತಂತ್ರ ಮನಸ್ಸು ಹಾಗೂ ಸಂಕಲ್ಪ

ಬಯಸಬಹುದಾದ ಎಲ್ಲವನ್ನು ಕಾರ್ಯಗತಗೊಳಿಸಲು ಪ್ರತಿಸ್ಪಂದಿಸುವ ದೇಹ ಹೊರಹೊಮ್ಮಬಲ್ಲವು.

– ಶ್ರೀ ಅರವಿಂದರು

★

## ನೀನು ಜನ್ಮ ಪಡೆದುದನ್ನು ಸಾರ್ಥಕಗೊಳಿಸು

(The Hour of God pp. 74-75)

ದೈವೀ ಅತಿಮಾನವನಾಗುವುದು, ದೇವನಿಗಾಗಿ ಪರಿಪೂರ್ಣ ಪಾತ್ರೆಯಂತಾಗುವುದು-ಇದೇ ನಿನ್ನ ಕಾರ್ಯ ಹಾಗೂ ನಿನ್ನ ಸತ್ತೆಯ ಉದ್ದೇಶ. ನೀನಿಲ್ಲಿರುವುದು ಇದಕ್ಕಾಗಿ ನೀನು ಅದಕ್ಕಾಗಿ, ಮಾಡಬೇಕಾದುದು ಇಷ್ಟೆ : ನಿನ್ನನ್ನು ಅಣಿಗೊಳಿಸುವುದು ಇಲ್ಲವೆ ಪ್ರಾಸಂಗಿಕವಾಗಿ ನೀನು ಆನಂದರೂಪವಾಗುವುದು ಇಲ್ಲವೆ ಉದ್ದೇಶದಿಂದ ವಿಮುಖನಾಗಿ ಪತನ ಹೊಂದುವುದು. ಆದರೆ ನಿನ್ನ ಧ್ಯೇಯ ಮತ್ತು ಉದ್ದೇಶವೆಂದಾಗಿ ಇರುವುದು ಇದೇ, ಧ್ಯೇಯದ ಆನಂದದಲ್ಲಿ ನಿನ್ನ ಸತ್ತೆಯ ಮಹತಿ ಮತ್ತು ಅತ್ಯಾನಂದ ಇವೆ, ಆದರೆ ಮಾರ್ಗದಲ್ಲಿ ಕಂಡುಕೊಳ್ಳುವ ಸಾಮರ್ಥ್ಯದಲ್ಲಾಗಲಿ, ಸಂತೋಷದಲ್ಲಾಗಲಿ ಇಲ್ಲ. ನಿನ್ನನ್ನು ಸೆಳೆಯುತ್ತಿರುವುದು ನಿನ್ನೊಡನೆ ಮಾರ್ಗದಲ್ಲಿರುವುದರಿಂದ ಮಾರ್ಗದಲ್ಲಿ ನಿನಗೆ ಸುಖವಿದೆ, ನಿನ್ನದೇ ಉನ್ನತ ಶಿಖರಗಳಿಗೆ ನೀನು ಏರಿ ಹೋಗುವುದು ಸಾಧ್ಯವಾಗಲೆಂದು ಮಾರ್ಗದಲ್ಲಿ ನಿನಗೆ ಏರುವ ಸಾಮರ್ಥ್ಯವನ್ನೀಯಲಾಗಿತ್ತು.

ನಿನ್ನ ಕರ್ತವ್ಯವೊಂದಿದ್ದರೆ ಇದೇ ಆ ಕರ್ತವ್ಯ. 'ನನ್ನ ಗುರಿ ಏನಾಗಿರಬೇಕು' ಎಂದು ನೀನು ಕೇಳುವುದಾದರೆ ಇದೇ ನಿನ್ನ ಗುರಿಯಾಗಲಿ, ನಿನಗೆ ಸುಖಬೇಕಾಗಿದ್ದರೆ ಇದಕ್ಕಿಂತ ಹೆಚ್ಚಿನ ಸಂತೋಷವೆಂಬುದಿಲ್ಲ , ಏಕೆಂದರೆ ಕನಸೊಂದರ ಸಂತೋಷ, ನಿದ್ರೆಯಲ್ಲಿ ಕಂಡುಕೊಳ್ಳುವ ಸುಖ, ಮೈಮರೆತಿರುವಾಗಿನ ಸುಖ ಇಂತಹ ಉಳಿದೆಲ್ಲ ಸಂತೋಷ ವಿಚ್ಛಿನ್ನ ಇಲ್ಲವೆ ಸೀಮಿತವಾಗಿರುತ್ತವೆ. ಆದರೆ ಇದು ನಿನ್ನ ಇಡೀ ಸತ್ತೆಯ ಸಂತೋಷ, ಏಕೆಂದರೆ ''ನನ್ನ ಸತ್ತೆ ಯಾವುದು?'' ಎಂದು ನೀನು ಪ್ರಶ್ನಿಸಿದರೆ ಭಗವಂತನೇ ನಿನ್ನ ಸತ್ತೆ ಎನ್ನಬೇಕಾಗುತ್ತದೆ, ಉಳಿದೆಲ್ಲವೂ ಅದರ ವಿಚ್ಛಿನ್ನ ಇಲ್ಲವೆ ವಿಕೃತ ತೋರಿಕೆ ಮಾತ್ರ. ನೀನು ಸತ್ಯವನ್ನು ಅರಸುತ್ತಿದ್ದರೆ ಇದೇ ಆ ಸತ್ಯವೆಂದು ತಿಳಿ. ಅದನ್ನು ನಿನ್ನ ಮುಂದೆ ಹಾಗೂ ಎಲ್ಲ ವಸ್ತು ವಿಷಯಗಳಲ್ಲಿ ಇರಿಸಿಕೋ ಮತ್ತು ಅದಕ್ಕೆ ನಿಷ್ಠನಾಗಿರು.



ಪರದೆಯ ಮುಖಾಂತರ ಮುಖವನ್ನು ನೋಡಿ ಪರದೆಯನ್ನೇ ಮುಖವೆಂದು ತಪ್ಪಾಗಿ ತಿಳಿದವರೊಬ್ಬರು 'ನೀನು ನೀನಾಗುವುದೇ ನಿನ್ನ ಗುರಿ' ಎಂದು ಚೆನ್ನಾಗಿಯೇ ಹೇಳಿದ್ದಾರೆ. ಅವರು ಮತ್ತೆ ಹೇಳಿದ್ದೂ ಚೆನ್ನಾಗಿದೆ : ಮನುಷ್ಯನ ಸ್ವಭಾವ ತನ್ನನ್ನು ಮೀರಿ ಹೋಗುವುದೇ ಆಗಿದೆ, ಇದುವೇ ನಿಜವಾಗಿ ಆತನ ಸ್ವಭಾವವಾಗಿದೆಯಲ್ಲದೆ ಅದೇ ತನ್ನನ್ನು ಮೀರಿ ಹೋಗುವ ದೈವೀ ಗುರಿಯಾಗಿದೆ.

ನೀನು ಮೀರಿಹೋಗಬೇಕಾದ ಆ ಆತ್ಮ ಯಾವುದು? ಮತ್ತು ನೀನು ಆಗಬೇಕಾದ ಆತ್ಮ ಯಾವುದು? ಏಕೆಂದರೆ ಈ ವಿಷಯದಲ್ಲಿ ನೀನು ತಪ್ಪು ಮಾಡಕೂಡದು. ತನ್ನನ್ನು ಅರಿತುಕೊಳ್ಳದಿರುವುದೇ ಎಲ್ಲ ದುಃಖಗಳ ಮೂಲ, ಎಲ್ಲ ಮುಗ್ಗರಿಸುವಿಕೆಗೆ ಕಾರಣ.

ನಿನಗೆ ನೀನೆಂದು ತೋರಿಬರುವ ಆತ್ಮವನ್ನು ಮೀರಿ ಹೋಗಬೇಕಾಗಿದೆ, ಆ ಆತ್ಮವೇ ನೀನೆಂದು ತಿಳಿದಿರುವ ಮನುಷ್ಯ, ತೋರಿಕೆಯ ಪುರುಷ. ಈ ಮನುಷ್ಯನಾರು? ಅವನು ಪ್ರಾಣಕ್ಕೆ, ಭೌತದ್ರವ್ಯಕ್ಕೆ ದಾಸನಾಗಿರುವ ಮಾನಸಿಕ ಸತ್ತೆ. ಪ್ರಾಣ ಮತ್ತು ಭೌತದ್ರವ್ಯಗಳಿಂದ ಬಂಧನಕ್ಕೊಳಗಾಗದೆಡೆಗಳಲ್ಲಿ ಅವನು ಮನಸ್ಸಿನ ಗುಲಾಮನಾಗಿರುತ್ತಾನೆ, ಆದರೆ ಇದು ಬಹಳ ದೊಡ್ಡ ಪರಾಧೀನತೆ, ಏಕೆಂದರೆ ಮನಸ್ಸಿನ ದಾಸನಾಗುವುದೆಂದರೆ ಮಿಥ್ಯೆಯ, ಸೀಮಿತತೆಯ ಹಾಗೂ ತೋರಿಕೆಯ ದಾಸನಾದಂತೆ.

ನೀನಾಗ ಬೇಕಾಗಿರುವ ಆತ್ಮ ಮನಸ್ಸು , ಪ್ರಾಣ ಮತ್ತು ಭೌತದ್ರವ್ಯಗಳ ಪರದೆ ಹಿಂದೆ ಮರೆಯಾಗಿರುವ ಆತ್ಮ , ಆಧ್ಯಾತ್ಮಿಕ, ದೈವಿಕ ಅತಿಮಾನಸ, ನಿಜವಾದ ಪುರುಷ, ಏಕೆಂದರೆ ಮಾನಸಿಕ ಸತ್ತೆಯ ಮೇಲಿರುವುದು ಅತಿಮಾನಸಿಕ ಸತ್ತೆ. ಅತಿಮಾನವನಾಗುವುದು ಎಂದರೆ: ಮನಸ್ಸು , ಪ್ರಾಣ, ದೇಹಗಳ ಒಡೆಯನಾಗುವುದು, ನೀನು ಈಗ ಯಾವುದರ ಸಾಧನವಾಗಿರುವೆಯೋ, ಯಾವುದು ನಿನ್ನನ್ನು ತನ್ನಡಿಯಲ್ಲಿರಿಸಿದೆಯೋ ಆ ಪ್ರಕೃತಿಯ ಪ್ರಭುವಾಗುವುದು, ಸ್ವತಂತ್ರನಾಗಿರುವುದು, ಗುಲಾಮನಾಗಿಯಲ್ಲ, ಬೇರೆ ಬೇರೆಯಾಗಿರದೆ ಒಂದಾಗಿರುವುದು, ಮರಣದಿಂದ ಮಸುಕಾಗದೆ ಅಮರನಾಗಿರುವುದು, ಕತ್ತಲೆಯಿಂದಲ್ಲ ಬೆಳಕಿನಿಂದ ತುಂಬಿ ತುಳುಕುವುದು, ದುಃಖ-ನೋವುಗಳ ಲೀಲೆಯಿಂದ ಮುಕ್ತನಾಗಿ ಆನಂದಭರಿತನಾಗಿರುವುದು, ದುರ್ಬಲನಾಗಿ ಕೆಳಕ್ಕೊತ್ತಲ್ಪಡದೆ ಬಲಶಾಲಿಯಾಗಿ ಮೇಲಕ್ಕೇರುವುದು, ಅನಂತದಲ್ಲಿ ಜೀವಿಸಿದ್ದು ಸಾಂತವನ್ನು ವಶಪಡಿಸಿಕೊಳ್ಳುವುದು, ಭಗವಂತನಲ್ಲಿದ್ದುಕೊಂಡು ಆತನ ಸತ್ತೆಯಲ್ಲಿ ಒಂದಾಗುವುದು, ನೀನು ನೀನೇ ಆಗುವುದೆಂದರೆ ಇದೇ ಆಗುವುದು ಮತ್ತು ಇದರಿಂದ ಪ್ರವಹಿಸುವುದೆಲ್ಲವೂ ಆಗುವುದು.

ನಿನ್ನೊಳಗೆ ನೀನು ಮುಕ್ತನಾಗಿರು, ಅದರಿಂದಾಗಿ ಮನಸ್ಸು , ಪ್ರಾಣ ದೇಹಗಳಲ್ಲಿ ಸ್ವತಂತ್ರನಾಗಿರು, ಏಕೆಂದರೆ ಆತ್ಮ ಸ್ವತಂತ್ರವಾದದ್ದು.

ಭಗವಂತನೊಡನೆ ಹಾಗೂ ಎಲ್ಲ ಸತ್ತೆಗಳೊಡನೆ ಒಂದಾಗಿರು, ನಿನ್ನೊಳಗೆ ಜೀವಿಸಿರು ಅಹಂಕಾರದಲ್ಲಲ್ಲ , ಏಕೆಂದರೆ ಆತ್ಮ ಏಕವಾಗಿದೆ.

ನೀನೇ ಅಮರನಾಗು, ನಿನ್ನ ನಂಬಿಕೆಯನ್ನು ಸಾವಿನಲ್ಲಿರಿಸಬೇಡ, ಏಕೆಂದರೆ ಸಾವು ನಿನ್ನದಲ್ಲ , ಅದು ನಿನ್ನ ದೇಹದ್ದು. ಆತ್ಮ ಅಮರವಾಗಿದೆ.

ಅಮರನಾಗುವುದೆಂದರೆ ಸತ್ತೆಯಲ್ಲಿ , ಪ್ರಜ್ಞೆಯಲ್ಲಿ ಹಾಗೂ ಆನಂದದಲ್ಲಿ ಅನಂತತೆ ಹೊಂದಿರುವುದು, ಏಕೆಂದರೆ ಆತ್ಮ ಅನಂತವಾಗಿದೆ, ಸಾಂತವಾದದ್ದು ಅನಂತದಿಂದಾಗಿ ಜೀವಿಸುತ್ತದೆ.

ನಿನ್ನಲ್ಲಿ ಇವೆಲ್ಲವೂ ಇವೆ, ಆದುದರಿಂದ ಇವೆಲ್ಲವೂ ನೀನಾಗಬಲ್ಲೆ , ನೀನು ಇವೆಲ್ಲವುಗಳಿಂದ ಕೂಡಿರದಿದ್ದರೆ ನೀನು ಅವುಗಳಾಗಲು ಸಾಧ್ಯವಿರಲಿಲ್ಲ. ನಿನ್ನೊಳಗಿರುವುದೇ ನಿನ್ನ ಸತ್ತೆಯಲ್ಲಿ ಪ್ರಕಟವಾಗಬಲ್ಲದು. ನೀನು ಇದಲ್ಲದೆ ಬೇರೆಯೇ ಆಗಿರುವಂತೆ ತೋರುತ್ತೀ, ಆದರೆ ಯಾವ ಕಾರಣಕ್ಕಾಗಿ ನೀನು ತೋರಿಕೆಗಳ ದಾಸನಾಗಬೇಕು?

ಎದ್ದೇಳು, ತೋರಿಕೆಯ ನಿನ್ನನ್ನು ಮೀರಿ ಹೋಗು, ನೀನೇ ನೀನಾಗು, ನೀನು ಮನುಷ್ಯ, ಮನುಷ್ಯನ ಇಡೀ ಸ್ವಭಾವ ತನ್ನನ್ನು ಮೀರಿ ಮತ್ತೇನೋ ಆಗುವುದಾಗಿದೆ. ಅವನು ಪಶು ಮಾನವನಾಗಿದ್ದ , ಈಗ ಪಶುಮಾನವನಿಗಿಂತ ಶ್ರೇಷ್ಠನಾಗಿದ್ದಾನೆ. ಅವನು ಚಿಂತಕ, ಕುಶಲ ಕಲಾಕಾರ, ಸೌಂದರ್ಯಾನ್ವೇಷಕನಾಗಿದ್ದಾನೆ. ಚಿಂತಕನಿಗಿಂತಲೂ ಶ್ರೇಷ್ಠ-ನಾಗುತ್ತಾನೆ, ಜ್ಞಾನದ ದರ್ಶನ ಪಡೆಯುತ್ತಾನೆ (ದಾರ್ಶನಿಕನಾಗುತ್ತಾನೆ). ಕೆಲಸಗಾರನಿಗಿಂತಲೂ ಶ್ರೇಷ್ಠನಾಗುವವನು, ಸೃಷ್ಟಿಕರ್ತನಾಗಿ ತನ್ನ ಸೃಷ್ಟಿಯ ಪ್ರಭುವಾಗುವುನು, ಸೌಂದರ್ಯಾನ್ವೇಷಿಗಿಂತಲೂ ಶ್ರೇಷ್ಠನಾಗುವುನು, ಏಕೆಂದರೆ ಅವನು ಎಲ್ಲ ಸೌಂದರ್ಯವನ್ನು , ಆನಂದವನ್ನು ಅನುಭವಿಸುವನು. ಭೌತಿಕವಾಗಿ ಅವನು ಅಮರ ಭೌತದ್ರವ್ಯವನ್ನು , ಪ್ರಾಣಿಕವಾಗಿ ಅಮರ ಪ್ರಾಣವನ್ನು ಮತ್ತು ಅನಂತ ಶಕ್ತಿಯನ್ನು ಅರಸುತ್ತಾನೆ. ಜ್ಞಾನವನ್ನು ಮಾನಸಿಕವಾಗಿ, ಭಾಗಶಃ ಹೊಂದಿರುವ ಅವನು ಇಡೀ ಪ್ರಕಾಶವನ್ನು ಮತ್ತು ಅತ್ಯಂತಿಕ ದರ್ಶನವನ್ನು ಅರಸುತ್ತಾನೆ.



ಇವೆಲ್ಲವುಗಳನ್ನು ಪಡೆಯುವುದೆಂದರೆ ಅತಿಮಾನವನಾದ ಹಾಗೆ, ಏಕೆಂದರೆ ಅವನು ಮನಸ್ಸಿನ ಸ್ತರದಿಂದ ಅತಿಮಾನಸದಲ್ಲಿ ಮೇಲಕ್ಕೇರಬೇಕಾಗಿದೆ. ಅದನ್ನು ದೈವೀಮನಸ್ಸು , ಇಲ್ಲವೆ ದೈವೀಜ್ಞಾನ ಇಲ್ಲವೆ ಅತಿಮಾನಸವೆಂದು ಕರೆಯಬಹುದು. ಅದು ದೈವೀ ಸಂಕಲ್ಪದ, ಹಾಗೂ ದೈವೀಪ್ರಜ್ಞೆಯ ಸಾಮರ್ಥ್ಯ ಮತ್ತು ಪ್ರಕಾಶ. ಅತಿಮಾನಸದಿಂದ ಆತ್ಮನು ತನ್ನನ್ನು ಹಾಗೂ ಜಗತ್ತುಗಳನ್ನು ಸೃಷ್ಟಿಸಿದನು, ಅದರಿಂದಾಗಿ ಅವುಗಳಲ್ಲಿ ಜೀವಿಸುತ್ತಾನೆ ಹಾಗೂ ಅವುಗಳ ಮೇಲೆ ಪ್ರಭುತ್ವ ನಡೆಸುತ್ತಾನೆ, ಹೀಗೆ ಆತನು ಸ್ವಯಂಪ್ರಭು ಹಾಗೂ ಸರ್ವರಿಗೂ ಒಡೆಯನಾಗಿದ್ದಾನೆ.

ಅತಿಮಾನಸವೇ ಅತಿಮಾನವ, ಆದ್ದರಿಂದ ಮನಸ್ಸಿನಿಂದ ಮೇಲಕ್ಕೇರುವುದೇ ನಿಬಂಧನೆಯಾಗಿದೆ.

ಅತಿಮಾನವನಾಗುವುದೆಂದರೆ ದೈವೀ ಜೀವನವನ್ನು ಜೀವಿಸುವುದು, ದೇವನಾಗುವುದು, ಏಕೆಂದರೆ ದೇವರುಗಳು ಭಗವಂತನ ಸಾಮರ್ಥ್ಯಗಳಾಗಿದ್ದಾರೆ. ಮಾನವತೆಯಲ್ಲಿ ಭಗವಂತನ ಸಾಮರ್ಥ್ಯವಾಗಿರಿ.

ದೈವೀ ಸತ್ತೆಯಲ್ಲಿ ಜೀವಿಸುವುದು ಮತ್ತು ಆತ್ಮನ ಪ್ರಜ್ಞೆ ಮತ್ತು ಆನಂದ, ಸಂಕಲ್ಪ ಮತ್ತು ಜ್ಞಾನ ಇವು ನಿನ್ನನ್ನು ವಶಪಡಿಸಿಕೊಂಡು ನಿನ್ನೊಡನೆ, ನಿನ್ನ ಮುಖಾಂತರ ಲೀಲೆ ನಡೆಸಲು ಬಿಟ್ಟುಕೊಡುವುದು, ಇದೇ ಅದರ ಅರ್ಥವಾಗಿದೆ.

ಇದು ಪರ್ವತಪ್ರಾಯವಾದ ಉನ್ನತಿಯತ್ತ ಸಾಗಿದ ನಿನ್ನ ಪರಿವರ್ತನೆಯಾಗಿದೆ. ನೀನೇ ಭಗವಂತನೆಂದು ಕಂಡುಕೊಂಡು ಅವನನ್ನು ನಿನ್ನಲ್ಲಿ ಹಾಗೂ ಎಲ್ಲ ವಸ್ತುಗಳಲ್ಲಿ ಪ್ರಕಟಿಸಬೇಕಾಗಿದೆ. ಅವನ ಸತ್ತೆಯಲ್ಲಿ ಜೀವಿಸು, ಅವನ ಆನಂದದಲ್ಲಿ ಆನಂದ ಪಡೆ, ಅಗ್ನಿ , ಸೂರ್ಯ, ಸಾಗರಗಳಂತಾಗಿ ಆ ದೈವೀ ಆನಂದ, ಶ್ರೇಷ್ಠತೆ ಹಾಗೂ ಸೌಂದರ್ಯ-ಎಲ್ಲವೂ ನೀನಾಗು.

ನೀನಿದನ್ನು ಭಾಗಶಃ ಕೈಕೊಂಡಾಗಲೂ ಕೂಡ ಅತಿಮಾನವತೆಯತ್ತ ಮೊದಲ ಹೆಜ್ಜೆಗಳನ್ನಿರಿಸುವುದನ್ನು ಸಾಧಿಸಿದಂತೆ.

– ಶ್ರೀ ಅರವಿಂದರು

## ಸಾಧಕರಿಗೆ ಜನ್ಮದಿನದ ಸಂದೇಶಗಳು

(ಶ್ರೀ ಮಾತೆಯವರು ಸಾಧಕರಿಗೆ ಕೊಟ್ಟ ಹಲವಾರು ಜನ್ಮದಿನದ ಸಂದೇಶಗಳಿಂದ ಕೆಲವನ್ನು ಆಯ್ದು ಇಲ್ಲಿ ಕೊಡಲಾಗಿದೆ.)

ನನ್ನ ಪ್ರೀತಿಯ ಮಗುವೆ, ನನ್ನ ಪ್ರೀತಿ ಹಾಗೂ ಆಶೀರ್ವಾದಗಳು ಸದಾ ನಿನ್ನೊಡನಿವೆ. ಮತ್ತು ವರ್ಷದುದ್ದಕ್ಕೂ ಅವು ಇರುತ್ತವೆ. ದೈವೀ ಗುರಿಯತ್ತ ಮತ್ತೊಂದು ಪ್ರಗತಿ ಸಾಧಿಸಲು ಅವು ಸಹಾಯಕವಾಗಲಿ.

★

ನಿನ್ನ ಈ ಜನ್ಮದಿನ ಭಗವಂತನಿಗೆ ನಿನ್ನನ್ನು ಇನ್ನೂ ಸ್ವಲ್ಪ ಹೆಚ್ಚಿನ ರೀತಿಯಲ್ಲಿ, ಇನ್ನೂ ಸ್ವಲ್ಪ ಹೆಚ್ಚು ಒಳ್ಳೆಯ ರೀತಿಯಲ್ಲಿ ಕೊಟ್ಟುಕೊಳ್ಳುವುದಕ್ಕೆ ಒಂದು ಅವಕಾಶವಾಗಲಿ ; ನಿನ್ನ ಅಭೀಪ್ಸೆ ಹೆಚ್ಚು ಗಾಢವಾಗಲಿ.

ನಿನ್ನನ್ನು ಹೊಸ ದೈವೀಪ್ರಕಾಶಕ್ಕೆ ತೆರೆದಿಟ್ಟುಕೋ. ಮತ್ತು ಮಾರ್ಗದಲ್ಲಿ ಸಂತೋಷದಿಂದ ಹೆಜ್ಜೆ ಇರಿಸುತ್ತ ಸಾಗಿ ಹೋಗು.

ಈ ದಿನ ಹಾಗೆ ಆಗಲಿ ಎಂದು ನಿರ್ಧರಿಸು, ಆಗ ಈ ದಿನ ವ್ಯರ್ಥವಾಗಿ ಕಳೆದು ಹೋಗುವುದಿಲ್ಲ.

★

ಒಂದು ಕಾಳಿನಷ್ಟು ಆಚರಣೆ ಗುಡ್ಡದಷ್ಟು ಸಿದ್ಧಾಂತಗಳಿಗಿಂತ ಮೇಲಾದದ್ದು.

‘‘ಪ್ರಭು, ನನ್ನ ಜನ್ಮದಿನಾಚರಣೆಯ ಈ ದಿನದಂದು ನನ್ನಲ್ಲಾಗುವ ಬದಲಾವಣೆಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ ನಾನು ಸಮಗ್ರವಾಗಿ ಪರಿವರ್ತನೆಗೊಳ್ಳುವಂತೆ ಮಾಡುವ ಸಾಮರ್ಥ್ಯವಾಗುವಂತೆ ಅನುಗ್ರಹಿಸು.

★

ಜನ್ಮದಿನದ ಶುಭಾಶಯಗಳು !

ಹೊಸ ಪ್ರಜ್ಞೆಯಲ್ಲಿ ಜನ್ಮತಾಳುವುದು ಹೊಸ ಜನ್ಮವೂ ಕೂಡ ಆಗಿರುತ್ತದೆ, ಅದರಲ್ಲಿ ನೀನು ಎಲ್ಲ ವೈಯಕ್ತಿಕ ಪ್ರತಿಕ್ರಿಯೆಗಳ ಮೇಲಿರುವಿ, ಏಕೆಂದರೆ ನಿನ್ನ ಹೃದಯದಲ್ಲಿ ಸದಾ ದೈವೀ ಸಾನ್ನಿಧ್ಯದ ಅರಿವು ತಂದುಕೊಳ್ಳುವಿ. ಅದು ನಿನಗೆ ಎಲ್ಲ ಅಡೆತಡೆಗಳ ಮೇಲೆ, ಎಲ್ಲ



ಸಣ್ಣತನದ ಮೇಲೆ, ಎಲ್ಲ ತೊಂದರೆಗಳ ಮೇಲೆ ಜಯ ಸಾಧಿಸುವ ಶಕ್ತಿಯನ್ನು ತಂದುಕೊಡಲಿ.

ನನ್ನ ಪ್ರೀತಿ ಹಾಗೂ ಆಶೀರ್ವಾದಗಳೊಂದಿಗೆ

- ಶ್ರೀಮಾತೆ

★

ನಿನಗೆ ಪ್ರಾರಂಭವಾಗುವ ಈ ಹೊಸ ವರ್ಷದೊಂದಿಗೆ ನೀನು ನಿನ್ನ ಪ್ರಜ್ಞೆಯಿಂದ ಹಾಗೂ ಕ್ರಿಯೆಯಿಂದ ವಿರೂಪಗೊಳಿಸುವ, ಕುಗ್ಗಿಸುವ, ಮಬ್ಬುಗೊಳಿಸುವ ಮತ್ತು ಕೊನೆಗೆ ನಿನ್ನ ಪ್ರಗತಿಯನ್ನು ನಿಲ್ಲಿಸಿಬಿಡುವ ಮತ್ತು ನಿನ್ನ ಆರೋಗ್ಯವನ್ನು ದುರ್ಬಲಗೊಳಿಸುವ ಎಲ್ಲವನ್ನೂ ಹೊಡೆದೋಡಿಸುವ ನವೀಕರಿಸಿದ ನಿರ್ಧಾರದೊಂದಿಗೆ ಹೊಸ ಜೀವನವನ್ನು ಪ್ರಾರಂಭಿಸಬೇಕು.

★

(Sri Aurobindo Society Annual, **1974**, p. **4**)

ಹಗಲು ರಾತ್ರಿ ಸಾನ್ನಿಧ್ಯ ಸತತ ಅಲ್ಲಿದೆ<br>
ನಿಶ್ಚಲನೀರವತೆಯಲ್ಲಿ ಅಂತರಂಗದತ್ತ ಹೊರಳಿದರೆ ಸಾಕು, ನಾವದನ್ನು ಪತ್ತೆ ಮಾಡಬಲ್ಲೆವು.<br>
ಈ ಅನುಭವ ಈ ವರ್ಷದಲ್ಲಿ ನಿನ್ನದಾಗಲಿ<br>
ನನ್ನ ಮುದ್ದು ಮಗುವಿಗೆ ಪ್ರೀತಿ ಹಾಗೂ ಆಶೀರ್ವಾದಗಳು.

★

(p. **8**) ಈ ವರ್ಷ ಎಲ್ಲ ಪರಿಸ್ಥಿತಿಗಳಲ್ಲಿ ನಿನಗೆ ಮುಗುಳ್ನಗೆ ತರಿಸುವಂತಾಗಲಿ. ಏಕೆಂದರೆ ಸೂರ್ಯ ಮೋಡಗಳನ್ನು ಚದುರಿಸುವ ಹಾಗೆ ಮುಗುಳ್ನಗು ತೊಂದರೆಗಳ ಮೇಲೆ ಕಾರ್ಯಮಾಡುತ್ತದೆ.

ಪ್ರೀತಿ ಹಾಗೂ ಆಶೀರ್ವಾದಗಳೊಂದಿಗೆ

★

( p. 9 ) ನನ್ನ ಮುದ್ದಿನ ಮಗುವೆ, ಈ ವರ್ಷಕ್ಕಾಗಿ ಇಲ್ಲೊಂದು ಕಾರ್ಯಕ್ರಮವಿದೆ: ನಿನ್ನ ಎಲ್ಲ ಸತ್ತೆ ಅತ್ಯುಚ್ಚ ಪ್ರಜ್ಞೆಯ ಸುತ್ತ ಏಕವಾಗುವಂತೆ ಮಾಡು ಮತ್ತು ನಿನ್ನ ಮನಸ್ಸು ಅತ್ತಿತ್ತ ಹರಿದಾಡುತ್ತ ಕಾರ್ಯಮಾಡುವುದಕ್ಕೆ ಅನುವು ಮಾಡಿಕೊಡಬೇಡ. ಸಂಶಯ ಒಂದು ಕ್ರೀಡೆಯಲ್ಲ , ನೀನು ಅದರಲ್ಲಿ ನೀತಿಗೆಟ್ಟವನಾಗಿ ಲೋಲುಪನಾಗಬಾರದು. ಅದು ವಿಷದಂತಿದ್ದು ಆತ್ಮವನ್ನು ಹನಿ, ಹನಿಯಾಗಿ ಕೊರೆಯುತ್ತದೆ.

ಪ್ರೀತಿ ಹಾಗೂ ಆಶೀರ್ವಾದಗಳೊಂದಿಗೆ,

– ಶ್ರೀಮಾತೆ

★

( p. 7 ) ಅಂತರಂಗದೊಳಗಿರುವ ಅಭೀಪ್ಸೆಯ ಮೇಲೆ ಸದಾ ಒತ್ತುಕೊಡು, ಅದು ಹೃದಯದಲ್ಲಿ ಆಳ ಮತ್ತು ಏಕಪ್ರಕಾರತೆಗಳನ್ನು ದೊರಕಿಸಲಿ, ಹೃದಯದ ಪ್ರೇಮ ಹಾಗೂ ಅಭೀಪ್ಸೆಗಳು ಬೆಳೆಯುತ್ತಿದ್ದಂತೆ ಮನಸ್ಸಿನ ಹಾಗೂ ಪ್ರಾಣಿಕದ ಬಾಹ್ಯ ಅಡೆತಡೆಗಳು ತಮ್ಮಷ್ಟಕ್ಕೆ ತಾವೇ ಹಿಂದೆ ಸರಿದು ಹೋಗುವವು.

★

( p. 13 ) ಜ್ಞಾನದ ಸ್ಪಷ್ಟತೆ ಮತ್ತು ಆಂತರಿಕ ದರ್ಶನ, ಅಹಂಕಾರದ ನಿಗ್ರಹ, ಪ್ರೇಮ, ನಿಸ್ವಾರ್ಥದ ಹಾಗೂ ಸಮರ್ಪಿಸಿಕೊಂಡ ಕಾರ್ಯಗಳಲ್ಲಿ ಸೂಕ್ಷ್ಮ ಜಾಗರೂಕತೆ ಇವು ಯೋಗದ ನಾಲ್ಕು ಚಕ್ರಗಳಿದ್ದ ಹಾಗೆ. ಇವುಗಳನ್ನು ಹೊಂದಿರುವ ಮನುಷ್ಯ ಸುರಕ್ಷಿತವಾಗಿ ಮಾರ್ಗದ ಮೇಲೆ ಪ್ರಗತಿ ಸಾಧಿಸುತ್ತ ಹೋಗುತ್ತಾನೆ.

– ಶ್ರೀ ಅರವಿಂದರು

★

## ಮನುಷ್ಯ ತನ್ನ ಜೀವನದಲ್ಲಿ ಎಂದಿಗೂ ಮರೆಯಬಾರದ ವಿಷಯ ಯಾವುದು?

ನಿರೋದಭರಣ 1969ರಲ್ಲಿ ತಮ್ಮ ಜನ್ಮದಿನದ ಮುನ್ನಾದಿನ ಶ್ರೀಮಾತೆಯವರಿಗೆ ಒಂದು ಪತ್ರ ಬರೆದರು : ಅದರಲ್ಲಿದ್ದ ವಿಷಯ ಹೀಗಿತ್ತು : ''ಶ್ರೀಮಾತೆಯವರೆ, ನಾಳೆ ನನ್ನ ಜನ್ಮದಿನ ಎಂಬುದು ಬಹುಶಃ ತಮಗೆ ನೆನಪಿನಲ್ಲಿರಲಿಕ್ಕಿಲ್ಲ. ನನ್ನ ಜನ್ಮದಿನ ಕುರಿತು ಸುಧಾ ಕಂಡ ಕನಸಿನಲ್ಲಿ 'ನಿನಗೇನು ಬೇಕು' ಎಂದು ಕೇಳಿದಿರೆಂದು ಹೇಳಿದಳು. ಸರಿ,



'ಎಂದೆಂದಿಗೂ ಮರೆಯಲು ಆಗದಂತಹದನ್ನು ನನಗೆ ನೀಡಿರಿ' ಎಂದು ಪ್ರಾರ್ಥಿಸುತ್ತೇನೆ.''

''ನಿನ್ನ ಜನ್ಮದಿನ ನಾಳೆ ಬರುತ್ತದೆ ಎಂಬುದು ನನಗೆ ತಿಳಿದಿದೆ. ನನ್ನ ಯಾದಿಯಲ್ಲಿ ನಿನ್ನ ಹೆಸರನ್ನು ಬರೆದಿರುವೆ. ನಾಳೆ ಮುಂಜಾನೆ ಒಂಬತ್ತು ಗಂಟೆಗೆ ನನ್ನನ್ನು ಕಾಣಲು ಬಾ'' ಎಂದು ಬರೆದು ತಿಳಿಸಿದರು.

ಮರುದಿನ ಮುಂಜಾನೆ ನಿರೋದಭರಣ ಶ್ರೀಮಾತೆಯವರನ್ನು ಕಾಣಲು ಹೋದಾಗ ಅವರು ಮಡಿಚಿದ ಸುಂದರವಾದ ಕಾರ್ಡನ್ನು ಕೊಟ್ಟರು. ಕಾರ್ಡುಗಳನ್ನು ಸಿದ್ಧಪಡಿಸುವುದರಲ್ಲಿ ಪ್ರವೀಣರಾದ ಚಂಪಕಲಾಲ ಅದನ್ನು ತಯಾರಿಸಿದ್ದರು. ಅದರಲ್ಲಿ ಶ್ರೀಮಾತೆಯವರು ತಮ್ಮ ಸುಂದರ ಕೈಬರಹದಲ್ಲಿ ಬರೆದಿದ್ದ ಫ್ರೆಂಚ್ ಭಾಷೆಯಲ್ಲಿದ್ದ ಸಂದೇಶ ಹೀಗಿತ್ತು : ''ನಿರೋದ, ನಿನ್ನ ಜನ್ಮದಿನ ಆನಂದದಾಯಕವಾಗಲಿ, ಭಗವಂತನಲ್ಲಿ ಪೂರ್ಣ ವಿಶ್ವಾಸವುಂಟಾಗಲಿ.''

★

## ಅಧ್ಯಾಯ-15

## ಅವತಾರ ತಾಳುವಿಕೆಯ ಸಾಧ್ಯತೆ ಹಾಗೂ ಉದ್ದೇಶ

ಕರ್ಮ ಹಾಗೂ ಜ್ಞಾನ ಏಕವಾಗುವ, ಕರ್ಮಗಳನ್ನು ಜ್ಞಾನದೊಂದಿಗೆ ಯಜ್ಞ ರೂಪದಲ್ಲಿ ಮಾಡುವ, ಜ್ಞಾನದಲ್ಲಿ ಕರ್ಮದ ನೆರವೇರಿಕೆ ಕಂಡುಕೊಳ್ಳುವ ಯೋಗ ಕುರಿತು ಮಾತನಾಡುತ್ತ ಈ ಯೋಗಕ್ಕೆ ಜ್ಞಾನ ಆಧಾರವಾಗಿದೆ, ಅದು ಕರ್ಮಗಳನ್ನು ಬದಲಿಸುತ್ತದೆ ಹಾಗೂ ಪ್ರಕಾಶ ನೀಡುತ್ತದೆ, ಕರ್ಮ ಮತ್ತು ಜ್ಞಾನ ಇವುಗಳನ್ನು ಪುರುಷೋತ್ತಮನಿಗೆ ಅರ್ಪಿಸಲಾಗುತ್ತದೆ ಎಂದು ಹೇಳಲಾಗಿದೆ. ನಮ್ಮೊಳಗೆ ನಾರಾಯಣನೆಂದು ಪ್ರಕಟವಾಗುವ, ನಮ್ಮ ಸತ್ತೆಯ ಹಾಗೂ ಕ್ರಿಯೆಯ ಪ್ರಭುವಾಗಿರುವ, ನಮ್ಮ ಹೃದಯಗಳಲ್ಲಿ ಎಲ್ಲ ಕಾಲಕ್ಕೂ ಆಸೀನನಾಗಿರುವ ಆ ಪುರುಷೋತ್ತಮನು ಸರ್ವೋಚ್ಚ ದೈವವಾಗಿದ್ದು ಮಾನವ ರೂಪದಲ್ಲಿ ಅವತಾರವೆಂದು ಪ್ರಕಟನಾಗುತ್ತಾನೆ. ಈ ದೈವೀ ಜನ್ಮ ನಮ್ಮ ಮಾನವತೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಶ್ರೀಕೃಷ್ಣ ಅದು ಪ್ರಾಚೀನಕಾಲದ ಮೂಲಯೋಗವೆಂದು ಪ್ರಾಸಂಗಿಕವಾಗಿ ಹೇಳುತ್ತ ಆ ಯೋಗವನ್ನು ಸೂರ್ಯದೇವನಾದ ವಿವಸ್ವಾನನಿಗೆ ಕೊಟ್ಟೆನೆಂದು, ವಿವಸ್ವಾನ ಅದನ್ನು ಮಾನವರ ಪಿತನಾದ ಮನುವಿಗೆ ಕೊಟ್ಟನೆಂದು, ಮನು ಅದನ್ನು ಸೂರ್ಯವಂಶದ ಮೂಲಪುರುಷನಾದ ಇಕ್ಷ್ವಾಕುವಿಗೆ

ಕೊಟ್ಟನೆಂದು ಹೀಗೆ ಅದು ಒಬ್ಬ ರಾಜಋಷಿಯಿಂದ ಇನ್ನೊಬ್ಬ ರಾಜಋಷಿಗೆ ಸಾಗುತ್ತ ಕಾಲಗತಿಯಲ್ಲಿ ಕಳೆದು ಹೋಯಿತೆಂದು ವಿವರಿಸುತ್ತಾನೆ. ಆ ಯೋಗವನ್ನು ಈಗ ಪುನರುಜ್ಜೀವನಗೊಳಿಸಿ ಶ್ರೀಕೃಷ್ಣ ಅದನ್ನು ಅರ್ಜುನನಿಗೆ ಕೊಡುತ್ತಾನೆ. ಏಕೆಂದರೆ ಅರ್ಜುನ ಶ್ರೀಕೃಷ್ಣನಿಗೆ ಪ್ರಿಯನಾದವನು, ಭಕ್ತ, ಸ್ನೇಹಿತ ಹಾಗೂ ಅವತಾರ ಕಾರ್ಯದಲ್ಲಿ ಸಹಯೋಗಿಯಾಗಿದ್ದಾನೆ. ಅಲ್ಲದೆ ಶ್ರೀಕೃಷ್ಣ ಹೇಳಿದಂತೆ ಆ ಯೋಗ ಪರಮರಹಸ್ಯದ್ದಾಗಿದೆ, ಹಾಗಾಗಿ ಆ ಯೋಗವು ಉಳಿದೆಲ್ಲ ಯೋಗಗಳಿಗಿಂತ ಪರಮಶ್ರೇಷ್ಠವಾಗಿದೆ. ಉಳಿದೆಲ್ಲ ಯೋಗಗಳು ಅವೈಯಕ್ತಿಕ ಬ್ರಹ್ಮನೆಡೆಗೆ ಇಲ್ಲವೆ ವೈಯಕ್ತಿಕ ದೇವನೆಡೆಗೆ, ನಿಷ್ಕ್ರಿಯ ಜ್ಞಾನದಲ್ಲಿ ಮುಕ್ತಿಯೆಡೆಗೆ ಇಲ್ಲವೆ ಮಗ್ನವಾಗಿಸುವ ಆನಂದದಲ್ಲಿ ದೊರಕುವ ಮುಕ್ತಿಯೆಡೆಗೆ ಕೊಂಡೊಯ್ಯುತ್ತವೆ. ಆದರೆ ಈ ಯೋಗವು ಅತ್ಯುಚ್ಚ ಹಾಗೂ ಸಮಗ್ರವಾದ ರಹಸ್ಯವನ್ನು ನಮ್ಮೆಡೆಗೆ ತರುತ್ತದೆ. ಅದು ನಮಗೆ ದೈವೀಶಾಂತಿಯನ್ನು , ದೈವೀಕರ್ಮವನ್ನು , ದೈವೀಜ್ಞಾನವನ್ನು , ಪರಿಪೂರ್ಣ ಸ್ವಾತಂತ್ರ್ಯದಲ್ಲಿ ಏಕಗೊಂಡ ಕ್ರಿಯೆ ಹಾಗೂ ದಿವ್ಯಾನಂದಗಳನ್ನು ತರುತ್ತದೆ ; ಅತ್ಯುಚ್ಚ ದೈವೀಸತ್ತೆ ತನ್ನಲ್ಲಿ ಎಲ್ಲ ವಿಭಿನ್ನ ಸಾಮರ್ಥ್ಯಗಳನ್ನು ಹಾಗೂ ತತ್ವಗಳನ್ನು ಹಾಗೆಯೇ ವಿರೋಧಿಯಾದವುಗಳನ್ನೂ ಕೂಡ ತನ್ನ ಪ್ರಕಟವಾದ ಸತ್ತೆಯಲ್ಲಿ ರಾಜಿ ಮಾಡುವಂತೆ ಈ ಯೋಗದಲ್ಲಿ ಎಲ್ಲ ಯೌಗಿಕ ಮಾರ್ಗಗಳು ಒಂದುಗೂಡುತ್ತವೆ. ಆದ್ದರಿಂದ ಕೆಲವರು ಗೀತೆಯ ಯೋಗ ಕೇವಲ ಕರ್ಮಯೋಗವೆಂದು, ಮೂರು ಮಾರ್ಗಗಳಲ್ಲಿ ಒಂದೆಂದು ಹಾಗೂ ಅವುಗಳಲ್ಲಿ ಕನಿಷ್ಠವಾದದ್ದೆಂದು ಒತ್ತಿ ಹೇಳುವ ರೀತಿಯದಲ್ಲ , ಆದರೆ ಅದು ಸಮನ್ವಯಗೊಳಿಸುವ, ಸಮಗ್ರ ಯೋಗವಾಗಿದ್ದು ನಮ್ಮ ಸತ್ತೆಯ ಎಲ್ಲ ಸಾಮರ್ಥ್ಯಗಳನ್ನು ಭಗವಂತನತ್ತ ನಿರ್ದೇಶಿಸುತ್ತದೆ.

ಶ್ರೀಕೃಷ್ಣ ಸಾರಿ ಹೇಳಿದ ಯೋಗದ ವಿವರಗಳನ್ನು ಅರ್ಜುನ ಬಹಳ ಭೌತಿಕ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾನೆ-ಅದಕ್ಕೆ ಇನ್ನೊಂದು ರೀತಿಯ ಪ್ರಾಮುಖ್ಯತೆ ಇದೆ. ಆ ಪ್ರಾಮುಖ್ಯತೆಗನುಸಾರವಾಗಿ ಅರ್ಥ ಮಾಡಿಕೊಳ್ಳಬಹುದು-ಮೊದಲು ಜನಿಸಿದ ಸತ್ತೆಗಳಲ್ಲಿ ಒಬ್ಬನಾದ ಸೂರ್ಯವಂಶದ ಮೂಲಪುರುಷ ಸೂರ್ಯದೇವನು ಜಗತ್ತಿನಲ್ಲಿ ಇತ್ತೀಚೆಗೆ ಜನ್ಮತಾಳಿದ ಮಾನವ ಶ್ರೀಕೃಷ್ಣನಿಂದ ಯೋಗವನ್ನು ಹೇಗೆ ಸ್ವೀಕರಿಸಿದ ಎಂಬುದು ಅರ್ಜುನನ ಪ್ರಶ್ನೆ. ಶ್ರೀಕೃಷ್ಣ ಇದಕ್ಕೆ ಕೂಡಲೆ ಉತ್ತರ ಕೊಡಬಹುದಾಗಿತ್ತೆಂದು ನಾವು ನಿರೀಕ್ಷಿಸುವ ಹಾಗೆ ಅವನು ಮಾಡುವುದಿಲ್ಲ ; ತಾನು ಎಲ್ಲ ಜ್ಞಾನಕ್ಕೆ ಮೂಲನಾದವನೆಂದು,



ಆ ದೇವನಿಗೆ ದೈವೀ ಶಬ್ದವನ್ನು ಕೊಟ್ಟವನೆಂದು, ತನ್ನ ಜ್ಞಾನದ ಸ್ವರೂಪವೇ ಆ ದೇವನೆಂದು, ಅವನು ಬಾಹ್ಯ ಹಾಗೂ ಆಂತರಿಕ ಪ್ರಕಾಶ ಕೊಡುವವನೆಂದು 'ಭರ್ಗಃ ಸವಿತಽರ್ ದೇವಸ್ಯ ಯೋ ನೋ ಧಿಯಃ ಪ್ರಚೋದಯಾತ್' ಎಂದು ಹೇಳುವುದಿಲ್ಲ , ಬದಲಾಗಿ ಮರೆಯಲ್ಲಿರಿಸಿದ ತನ್ನ ದೈವತ್ವವನ್ನು ಸಾರಿ ಹೇಳಲು ಅರ್ಜುನನು ಕೊಟ್ಟ ಈ ಅವಕಾಶವನ್ನು ಸ್ವೀಕರಿಸಲು ಸಮ್ಮತಿಸುತ್ತಾನೆ. ತನ್ನ ಕರ್ಮಗಳಿಂದ ಬಂಧನಕ್ಕೊಳಗಾಗದ ದೈವೀ ಕೆಲಸಗಾರನೆಂದು ಶ್ರೀಕೃಷ್ಣ ತನ್ನದೇ ಉದಾಹರಣೆಯನ್ನು ಕೊಡುವುದರ ಮೂಲಕ ಹೀಗೆ ಸಾರಿ ಹೇಳುವುದಕ್ಕಾಗಿ ತಯಾರಿ ಮಾಡಿಕೊಂಡಿರುತ್ತಾನೆ, ಆದರೆ ಆಗ ಅದನ್ನು ಮುಚ್ಚುಮರೆಯಿಲ್ಲದೆ ಹೇಳಿರುವುದಿಲ್ಲ. ಈಗ ತಾನು ಅವತಾರ ತಾಳಿದ ದೇವನೆಂದು ಘೋಷಿಸುತ್ತಾನೆ.

ದೈವೀಗುರುವನ್ನು ಕುರಿತು ಹೇಳುವಾಗ ಗೀತೆ ನಮಗೆ ತೋರಿಸಿಕೊಟ್ಟಿರುವ ಪ್ರಕಾಶದಲ್ಲಿ ವೇದಾಂತದ ದೃಷ್ಟಿಯಲ್ಲಿ ತೋರಿಬರುವ ಅವತಾರದ ಸಿದ್ಧಾಂತ ಕುರಿತು ಸಂಕ್ಷೇಪವಾಗಿ ಹೇಳುವ ಅವಕಾಶ ನಮಗಿತ್ತು. ಈ ಅವತಾರ ತಾಳುವಿಕೆಯತ್ತ ಮತ್ತು ದೈವೀಜನ್ಮದ ಪ್ರಾಮುಖ್ಯತೆಯತ್ತ ನಾವು ಹೆಚ್ಚು ಗಮನವಿಟ್ಟು ನೋಡಬೇಕು ; ಅವತಾರ ದೈವೀಜನ್ಮದ ಬಾಹ್ಯ ಅಭಿವ್ಯಕ್ತಿ, ಏಕೆಂದರೆ ಗೀತೆಯ ಸಮಗ್ರ ಬೋಧನೆಯಲ್ಲಿ ಅದು ಮಹತ್ವದ ಕೊಂಡಿಯಾಗಿರುತ್ತದೆ. ದೈವೀ ಗುರುವೇ ಸ್ವತಃ ಅವತಾರ ತಾಳಿದುದರ ಸ್ವಭಾವ ಹಾಗೂ ಉದ್ದೇಶಗಳನ್ನು ಕುರಿತು ಕ್ಷಿಪ್ರವಾಗಿ ಹೇಳಿದ ಶಬ್ದಗಳನ್ನು ಮೊದಲು ಅರ್ಥಮಾಡಿಕೊಳ್ಳೋಣ ಮತ್ತು ಅವುಗಳಿಗೆ ಸಂಬಂಧಿಸಿದ ಇತರ ಪರಿಚ್ಛೇದಗಳನ್ನು ಇಲ್ಲವೆ ಉಲ್ಲೇಖಗಳನ್ನು ನೆನಪಿಗೆ ತಂದುಕೊಳ್ಳೋಣ. ''ವೈರಿಗೆ ಚಾವುಟಿಯಂತಿರುವ ಓ ಅರ್ಜುನ, ಭೂತಕಾಲದಲ್ಲಿ ನನ್ನ ಹಾಗೂ ನಿನ್ನ ಹಲವಾರು ಜನ್ಮಗಳಾಗಿ ಹೋಗಿವೆ, ಅವೆಲ್ಲವುಗಳ ಬಗ್ಗೆ ನನಗೆ ತಿಳಿದಿದೆ, ನಿನಗೆ ಅವುಗಳ ಬಗ್ಗೆ ಅರಿವಿಲ್ಲ. ನನ್ನ ಸ್ವ-ಅಸ್ತಿತ್ವದಲ್ಲಿ ನಾನು ಜನ್ಮವಿಲ್ಲದವನೂ, ನಾಶವಿಲ್ಲದವನೂ, ಎಲ್ಲ ಅಸ್ತಿತ್ವಗಳ ಪ್ರಭುವೂ ಆಗಿದ್ದರೂ ನನ್ನದೇ ದೈವೀ ಸ್ವಭಾವದ ಮೇಲೆ ನಿಂತು ನನ್ನದೇ ಮಾಯೆಯಿಂದ (ಭೌತಿಕದಲ್ಲಿ ) ಜನ್ಮತಾಳುತ್ತೇನೆ. ಧರ್ಮ ಕುಗ್ಗಿಹೋದ, ಅಧರ್ಮದ ಹೆಚ್ಚಳವಾದ ಸಮಯದಲ್ಲಿ ನಾನು ಜನ್ಮತಾಳಿ ಬರುತ್ತೇನೆ. ಒಳ್ಳೆಯವರ ಉದ್ಧಾರಕ್ಕಾಗಿ, ದುಷ್ಕರ್ಮಿಗಳ ನಾಶಕ್ಕಾಗಿ, ಧರ್ಮವನ್ನು ಎತ್ತಿ ಹಿಡಿಯುವುದಕ್ಕಾಗಿ, ಯುಗ-ಯುಗಗಳಲ್ಲಿ ನಾನು ಜನ್ಮವೆತ್ತುತ್ತ ಬಂದಿದ್ದೇನೆ. ಓ ಅರ್ಜುನ, ನನ್ನ ದಿವ್ಯ ಜನ್ಮವನ್ನು ಹಾಗೂ ದಿವ್ಯ ಕಾರ್ಯಗಳನ್ನು ಸರಿಯಾದ

ತತ್ವದಲ್ಲಿ ಅರ್ಥಮಾಡಿಕೊಳ್ಳುವ ಜನರು ಮರುಜನ್ಮ ಪಡೆಯುವುದಿಲ್ಲ , ಅವರು ನನ್ನೆಡೆಗೆ ಬರುತ್ತಾರೆ, ಬೇಕು-ಬೇಡಗಳನ್ನು , ಭಯ ಹಾಗೂ ಕ್ರೋಧವನ್ನು ತೊರೆದವರು, ನನ್ನ ಆಶ್ರಯ ಬಯಸಿ ಬಂದವರು, ಜ್ಞಾನದ ತಪಸ್ಸಿನಿಂದ ಪರಿಶುದ್ಧರಾದವರು ನನ್ನ ಸತ್ತೆಯ ಸ್ವಭಾವದಲ್ಲಿ (ಮದ್ಭಾವಮ್ : ಪುರುಷೋತ್ತಮನ ದೈವೀ ಸ್ವಭಾವದಲ್ಲಿ ) ಸೇರಿಬಿಡುತ್ತಾರೆ. ಪಾರ್ಥ, ಯಾರ್‍ಯಾರು ಯಾವ ಯಾವ ರೀತಿಯಲ್ಲಿ ನನ್ನನ್ನು ಭಜಿಸುತ್ತಾರೋ ಅವರನ್ನು ನನ್ನ ಪ್ರೇಮದಿಂದ ಅವರವರ ರೀತಿಯಲ್ಲಿ ಸ್ವೀಕರಿಸುತ್ತೇನೆ, ಜನರು ಎಲ್ಲ ರೀತಿಯಲ್ಲಿ ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ.''

ಗೀತೆ ಮುಂದುವರಿದು ಹೇಳುವಂತೆ ಬಹಳಷ್ಟು ಜನರು ತಮ್ಮ ಕರ್ಮಗಳಿಗೆ ಫಲ ದೊರೆಯಲೆಂದು ಏಕೈಕ ದೇವನ ರೂಪಗಳೂ, ವ್ಯಕ್ತಿತ್ವಗಳೂ ಆದ ದೇವತೆಗಳನ್ನು ಕುರಿತು ಯಜ್ಞ ಮಾಡುತ್ತಾರೆ. ಏಕೆಂದರೆ ಅಂತಹ (ಜ್ಞಾನರಹಿತ) ಕರ್ಮಗಳಿಂದ ಸಿದ್ಧಿ ಬೇಗನೆ ದೊರೆಯುತ್ತದೆ ಮತ್ತು ಅಂತಹದು ಮಾನವ ಜಗತ್ತಿನಲ್ಲಿ ಸುಲಭವಾಗಿರುತ್ತದೆ. ಮತ್ತು ಅದು ಆ ಜಗತ್ತಿಗೇ ಸೇರಿರುತ್ತದೆ. ಮನುಷ್ಯ ಆತ್ಮ-ಸಫಲತೆಯನ್ನು ಕಂಡುಕೊಳ್ಳುವುದಕ್ಕಾಗಿ ಸರ್ವೋಚ್ಚ ದೇವ (ಪುರುಷೋತ್ತಮ)ನನ್ನು ಕುರಿತು ಜ್ಞಾನಯುಕ್ತವಾಗಿ ಮಾಡುವ ಆ ಇನ್ನೊಂದು ಬಗೆಯ ಯಜ್ಞ ಕಷ್ಟಕರವಾಗಿರುತ್ತದೆ, ಅದರ ಪರಿಣಾಮಗಳು ಅಸ್ತಿತ್ವದ ಉಚ್ಚಸ್ತರಗಳಿಗೆ ಸೇರಿರುತ್ತವೆ ಮತ್ತು ಅವುಗಳನ್ನು ಗ್ರಹಿಸುವುದು ಸುಲಭವಾಗಿರುವುದಿಲ್ಲ. ಆದ್ದರಿಂದ ಮನುಷ್ಯರು ತಮ್ಮ ಸ್ವಭಾವದ ಹಾಗೂ ಕರ್ಮಗಳ ನಾಲ್ಕು ಬಗೆಯ ನಿಯಮವನ್ನು ಅನುಸರಿಸುತ್ತಾರೆ ಮತ್ತು ಲೌಕಿಕ ಕರ್ಮಗಳ ಸ್ತರದಲ್ಲಿ ಅವರು ಭಗವಂತನನ್ನು ಅವನ ವಿವಿಧ ಗುಣಗಳ ಮೂಲಕ ಅರಸುತ್ತಾರೆ. ಶ್ರೀಕೃಷ್ಣ ಹೇಳುತ್ತಾನೆ : ''ನಾನು ನಾಲ್ಕು ಬಗೆಯ ಕರ್ಮಗಳನ್ನು ಮಾಡುವವನಾಗಿದ್ದರೂ ಹಾಗೂ ಅವುಗಳ ನಾಲ್ಕು ಬಗೆಯ ನಿಯಮವನ್ನು ಸೃಷ್ಟಿಸಿದ್ದೆನಾದರೂ ನನ್ನನ್ನು ಅಕರ್ತಾ, ಅವಿನಾಶಿ ಹಾಗೂ ಬದಲಾಗದವನು ಎಂದು ತಿಳಿಯಬೇಕು. ನನ್ನ ಮೇಲೆ ಕರ್ಮಗಳು ಪ್ರಭಾವ ಬೀರುವುದಿಲ್ಲ , ಕರ್ಮಗಳ ಫಲಗಳನ್ನು ಕುರಿತು ನಾನು ಆಸೆಪಡುವುದಿಲ್ಲ.'' ಏಕೆಂದರೆ ಭಗವಂತ ಈ ಅಹಂಮನ್ಯತೆಯ ವ್ಯಕ್ತಿತ್ವದಿಂದ ಹಾಗೂ ಪ್ರಕೃತಿಯ ರೀತಿಗಳ ಘರ್ಷಣೆಯಿಂದ ಆಚೆಗಿದ್ದಾನೆ ಮತ್ತು ಅವೈಯಕ್ತಿಕ ವ್ಯಕ್ತಿ ಪುರುಷೋತ್ತಮನೆಂದೂ ಕೂಡ ಕರ್ಮಗಳಲ್ಲಿ ಸರ್ವೋಚ್ಚ ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ಆದ್ದರಿಂದ ದಿವ್ಯ ಕರ್ಮಗಳನ್ನು ಮಾಡುವವನು ಕರ್ಮಗಳ ನಾಲ್ಕು ರೀತಿಗಳ ನಿಯಮವನ್ನು ಅನುಸರಿಸುತ್ತಿದ್ದಾಗಲೂ ಕೂಡ ಆಚೆಗಿರುವ



ಅವೈಯಕ್ತಿಕವಾದವನನ್ನು ಹಾಗೂ ಸರ್ವೋಚ್ಚನಾದ ದೇವನನ್ನು ನೋಡಬೇಕು ಹಾಗೂ ಅವನಲ್ಲಿ ಜೀವಿಸಬೇಕು. ''ಹೀಗೆ ನನ್ನನ್ನು ಅರಿತುಕೊಂಡವನು ಕರ್ಮಗಳ ಬಂಧನಕ್ಕೊಳಗಾಗುವುದಿಲ್ಲ. ಪ್ರಾಚೀನ ಕಾಲದ ಜನರು ಹೀಗೆ ತಿಳಿದುಕೊಂಡು ಮುಕ್ತಿಯನ್ನು ಅರಸಿದರು. ನೀನೂ ಕೂಡ ಪ್ರಾಚೀನ ಕಾಲದ ಜನರು ಮಾಡಿದ ಅತಿ ಪ್ರಾಚೀನ ಕರ್ಮವನ್ನು ಮಾಡು.''

ಈ ಪರಿಚ್ಛೇದಗಳ ಎರಡನೆಯ ಭಾಗದಲ್ಲಿರುವುದರ ತಿರುಳು ದಿವ್ಯ ಕರ್ಮಗಳ ಸ್ವರೂಪವನ್ನು ವಿವರಿಸುತ್ತದೆ. ಇದರ ತತ್ವವನ್ನು ಕುರಿತು ಕಳೆದ ಅಧ್ಯಾಯದಲ್ಲಿ ವಿವರಣೆ ನೀಡಲಾಗಿದೆ. ಮೊದಲನೆಯ ಭಾಗ ದಿವ್ಯ ಜನ್ಮ , ಅವತಾರ ಕುರಿತು ವಿವರಣೆ ನೀಡುತ್ತದೆ. ಆದರೆ ನಾವು ಕಾಳಜಿಪೂರ್ವಕ ಲಕ್ಷ್ಯ ಕೊಡಬೇಕಾದ ವಿಷಯವೆಂದರೆ ಜಗತ್ತಿನಲ್ಲಿ ಧರ್ಮದ ಉದ್ಧಾರವೊಂದೇ ಅವತಾರಿಪುರುಷನ ಉದ್ದೇಶವಾಗಿರುವುದಿಲ್ಲ ಎಂಬುದು. ಅವತಾರ ತಾಳುವಿಕೆ ಮಾನವತೆಯಲ್ಲಿ ಭಗವಂತ ಪ್ರಕಟವಾಗುವುದರ ಶ್ರೇಷ್ಠ ರಹಸ್ಯವಾಗಿರುತ್ತದೆ. ಏಕೆಂದರೆ ಧರ್ಮದ ಉದ್ಧಾರವೊಂದೇ ಎಲ್ಲ ರೀತಿಯಲ್ಲಿ ಸಾಕಾಗಬಹುದಾದ ಉದ್ದೇಶವಾಗಿರುವುದಿಲ್ಲ. ಕ್ರಿಸ್ತ, ಶ್ರೀಕೃಷ್ಣ, ಬುದ್ಧರಂತಹ ವ್ಯಕ್ತಿಗಳು ಪ್ರಕಟವಾಗುವುದಕ್ಕೆ ಅದು ಸರ್ವೋಚ್ಚವಾಗಿ ಸಾಧಿಸಬಹುದಾದ ಗುರಿಯಾಗಿರುವುದಿಲ್ಲ, ಆದರೆ ಅದು ಉಚ್ಚತರ ಧ್ಯೇಯದ ಸಾಮಾನ್ಯ ಸ್ಥಿತಿ ಮತ್ತು ಪರಮೋಚ್ಚವಾದ ದೈವೀ ಪ್ರಯೋಜನವುಳ್ಳದ್ದು , ಏಕೆಂದರೆ ದೈವೀ ಜನ್ಮಕ್ಕೆ ಎರಡು ಮುಖಗಳಿವೆ : ಮೊದಲನೆಯದು ಅವರೋಹಣ, ಮಾನವತೆಯಲ್ಲಿ ಭಗವಂತನ ಜನ್ಮ ಎಂದರೆ ಮಾನವ ರೂಪ ಹಾಗೂ ಸ್ವಭಾವಗಳೊಂದಿಗೆ ಭಗವಂತ ತನ್ನನ್ನು ಸನಾತನ ಅವತಾರಿ ಪುರುಷನೆಂದು ಪ್ರಕಟಿಸುವುದು; ಎರಡನೆಯದು ಆರೋಹಣ, ಮಾನವ ಭಗವಂತನಲ್ಲಿ ಜನ್ಮತಾಳುವುದು ಎಂದರೆ ಮನುಷ್ಯ ದೈವೀ ಸ್ವಭಾವದಲ್ಲಿ ಹಾಗೂ ಪ್ರಜ್ಞೆಯಲ್ಲಿ ಮೇಲಕ್ಕೇರಿ ಹೋಗುವುದು 'ಮದ್ಭಾವಮ್ ಆಗತಾಃ' ಮಾನವ ಸತ್ತೆ ಆತ್ಮದಲ್ಲಿ ಎರಡನೆಯ ಜನ್ಮ ತಾಳುವುದು. ಈ ಹೊಸಜನ್ಮಕ್ಕೆ ಸೇವೆ ಸಲ್ಲಿಸುವುದೇ ಅವತಾರದ ಹಾಗೂ ಧರ್ಮೋದ್ಧಾರದ ಉದ್ದೇಶವಾಗಿರುತ್ತದೆ. ಅವತಾರ ಕುರಿತು ಗೀತೆಯ ಸಿದ್ಧಾಂತದಲ್ಲಿರುವ ಎರಡು ಬಗೆಯ ವಿಷಯವನ್ನು ಓದುವವನು ಮೇಲ್ನೋಟದಲ್ಲಿ ಮಾತ್ರ ನೋಡಿ, ತೃಪ್ತಿಗೊಂಡು ಅದರ ತಿರುಳನ್ನು ಅರಿತುಕೊಳ್ಳದೆ ಇರುವ ಪ್ರವೃತ್ತಿ ಹೊಂದಿರಬಹುದು, ಹೀಗೆ ಬಹಳಷ್ಟು ಜನರು ಆ ಗಾಢವಾದ ಬೋಧನೆಯ ಮೇಲು-ಮೇಲಿನ ಅರ್ಥವನ್ನು ಗ್ರಹಿಸುವುದುಂಟು. ಸಾಂಪ್ರದಾಯಿಕ

ಭಾಷ್ಯಕಾರರೂ ಕೂಡ ತಮ್ಮ ಪಂಥಗಳ ಕಟ್ಟುನಿಟ್ಟಿನಲ್ಲಿ ಜಡಗಟ್ಟಿದವರಾಗಿ ಈ ಮಹತ್ವದ ಅಂಶವನ್ನು ಗ್ರಹಿಸುವುದರಲ್ಲಿ ತಪ್ಪಬಹುದು, ಆದಾಗ್ಯೂ ಸಿದ್ಧಾಂತದ ಇಡೀ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ಅದು ನಿಶ್ಚಿತವಾಗಿ ಅವಶ್ಯವಾದದ್ದು. ಹಾಗಿರದೆ ಹೋದರೆ ಅವತಾರದ ವಿಚಾರ ಒಂದು ಧರ್ಮತತ್ವ ಇಲ್ಲವೆ ಒಂದು ಪ್ರಚಲಿತ ಮೂಢನಂಬಿಕೆ ಆಗಬಹುದು ಇಲ್ಲವೆ ಐತಿಹಾಸಿಕ ಅಥವಾ ಪೌರಾಣಿಕ ಅತಿಮಾನವನ ಕಾಲ್ಪನಿಕ ಇಲ್ಲವೆ ರಹಸ್ಯಪೂರ್ಣ ದೈವೀಕರಣವಾಗಬಹುದು, ಆದರೆ ಅದು ಆಳವಾದ ತಾತ್ವಿಕ ಹಾಗೂ ಧಾರ್ಮಿಕ ಸತ್ಯದ ಮತ್ತು ಎಲ್ಲದರ ರಹಸ್ಯ (ರಹಸ್ಯಮ್ ಉತ್ತಮಮ್)ದ ಒಂದು ಭಾಗ ಇಲ್ಲವೆ ಆ ಸತ್ಯವನ್ನು ಸಮೀಪಿಸುವ ಒಂದು ಹೆಜ್ಜೆ ಎಂದು ಗೀತೆಯಲ್ಲಿ ಹೇಳಿದ ಸಮಗ್ರ ಬೋಧನೆ ಆಗಿರುವುದಿಲ್ಲ.

ದೈವತ್ವದಲ್ಲಿ ಮನುಷ್ಯ ಹೀಗೆ ಮೇಲಕ್ಕೇರಿ ಹೋಗುವುದು ಇರದೆ ಹೋಗಿದ್ದರೆ, ಕೇವಲ ಧರ್ಮಕ್ಕಾಗಿ ಅವತಾರ ತಳೆಯುವುದು ನಿಷ್ಪ್ರಯೋಜಕವಾದ ಗೋಚರ ವಿಷಯ-ವಾಗುತ್ತಿತ್ತು ಏಕೆಂದರೆ ಸರ್ವಸಮರ್ಥನಾದ ಭಗವಂತ ತನ್ನ ಸಾಮಾನ್ಯ ಸಾಧನಗಳ ಮೂಲಕ, ಶ್ರೇಷ್ಠ ಜನರು ಹಾಗೂ ಶ್ರೇಷ್ಠ ಆಂದೋಲನಗಳ ಮೂಲಕ, ಋಷಿಗಳ ಹಾಗೂ ರಾಜರ ಹಾಗೂ ಧಾರ್ಮಿಕ ಗುರುಗಳ ಜೀವನ ಹಾಗೂ ಕಾರ್ಯಗಳ ಮೂಲಕ, ಪ್ರತ್ಯಕ್ಷವಾಗಿ ಅವತಾರ ತಾಳದೆ ಕೇವಲ ಧರ್ಮ, ಕೇವಲ ನ್ಯಾಯ ಹಾಗೂ ಸದ್ಗುಣಗಳ ಮಾದರಿ ಇವೆಲ್ಲವುಗಳನ್ನು ಎತ್ತಿ ಹಿಡಿಯಬಹುದು. ಮಾನವ ಸ್ವಭಾವದಲ್ಲಿ ದೈವೀಸ್ವಭಾವ ಪ್ರಕಟವಾಗಲೆಂದು ಅವತಾರ ತಾಳುವಿಕೆ ಇರುತ್ತದೆ. ಅದು ಕ್ರಿಸ್ತನ ಗುಣ, ಕೃಷ್ಣನ ಗುಣ, ಬುದ್ಧನ ಗುಣ ಇಂತಹವುಗಳ ಪ್ರಕಟಣೆಯ ರೂಪದಲ್ಲಿರುತ್ತದೆ. ಅದರಿಂದಾಗಿ ಮಾನವ ಸ್ವಭಾವ ತನ್ನ ತತ್ವ , ಯೋಚನೆ, ಭಾವನೆ, ಕ್ರಿಯೆ ಹಾಗೂ ಸತ್ತೆಗಳನ್ನು ಕ್ರಿಸ್ತನ, ಕೃಷ್ಣನ, ಬುದ್ಧನ ಗುಣಗಳಿಗನುಸಾರವಾಗಿ ಎರಕಗೊಳಿಸುವುದರ ಮೂಲಕ ದೈವಿಕವಾಗಿ ಪರಿವರ್ತನೆ ಹೊಂದಬಹುದು. ಅವತಾರಿ ಪುರುಷ ಸ್ಥಾಪಿಸಿದ ಧರ್ಮವನ್ನು ಮುಖ್ಯವಾಗಿ ಆ ಉದ್ದೇಶಕ್ಕಾಗಿಯೇ ಕೊಡಲಾಗಿರುತ್ತದೆ. ಕ್ರಿಸ್ತ, ಕೃಷ್ಣ ಹಾಗೂ ಬುದ್ಧ ಇವರು ಆ ಧರ್ಮದ ಕೇಂದ್ರ ಸ್ಥಾನದಲ್ಲಿ ಮುಖ್ಯದ್ವಾರವಿರುವಂತೆ ನಿಂತಿರುತ್ತಾರೆ ಮತ್ತು ತಮ್ಮ ಮೂಲಕ ಮಾನವರು ಅನುಸರಿಸಬೇಕಾದ ಮಾರ್ಗವನ್ನು ಮಾಡಿಕೊಡುತ್ತಾರೆ. ಆ ಕಾರಣದಿಂದಾಗಿಯೆ ಪ್ರತಿಯೊಬ್ಬ ಅವತಾರಿಪುರುಷ ಜನರ ಮುಂದೆ ತನ್ನದೇ ಉದಾಹರಣೆಯನ್ನು ಎತ್ತಿ ತೋರಿಸುತ್ತಾನೆ, (ಸಿದ್ಧಿಗೆ) ತಾನೇ ಮಾರ್ಗ ಹಾಗೂ ತೆರೆದಿರಿಸಿದ



ದ್ವಾರ ಎಂದು, ಅಲ್ಲದೆ ಭಗವಂತನೊಡನೆ ತನ್ನ ಮಾನವತೆ ಏಕವಾಗಿರುವುದನ್ನು ಸಾರುತ್ತಾನೆ. ಹಾಗೆಯೇ ಮಾನವನ ಮಗ ಮತ್ತು ಆ ಮಗ ಮೇಲ್ಗಡೆಗೆ ಇರುವ ಯಾವ ದೈವೀ ಪಿತನಿಂದ ಅವತರಿಸಿ ಬಂದಿರುವನೋ ಅವನು ಒಂದೇ ಆಗಿರುವರೆಂದು, ಮಾನವ ಶರೀರದಲ್ಲಿರುವ ಶ್ರೀಕೃಷ್ಣ (ಮಾನುಷೀಮ್ ತನುಮಾಶ್ರಿತಮ್) ಮತ್ತು ಪರಮೋಚ್ಚ ಪ್ರಭು, ಎಲ್ಲ ಜೀವಿಗಳ ದೈವೀ ಸ್ನೇಹಿತ ಇವರೀರ್ವರೂ ಏಕೈಕನಾದ ಪುರುಷೋತ್ತಮನ ಎರಡು ದರ್ಶನಗಳೆಂದು, ಅಲ್ಲಿ ತನ್ನದೇ ಸತ್ತೆಯಲ್ಲಿ ಪ್ರಕಟನಾದವನು, ಇಲ್ಲಿ ಮಾನವತೆಯ ಪ್ರಕಾರದಲ್ಲಿ ಪ್ರಕಟನಾದವನು ಎಂದು ಸಾರುತ್ತಾನೆ.

ಅವತಾರ ತಾಳುವಿಕೆಯ ಈ ಎರಡನೆಯ ಹಾಗೂ ನಿಜವಾದ ಉದ್ದೇಶವನ್ನು ಗೀತೆ ತನ್ನ ತಿರುಳನ್ನಾಗಿಸಿಕೊಂಡಿದೆ ಎಂಬುದು ಆ ಪರಿಚ್ಛೇದವನ್ನು ಸರಿಯಾಗಿ ಅರ್ಥ-ಮಾಡಿಕೊಂಡಾಗ ಸ್ಪಷ್ಟವಾಗಿ ತಿಳಿದುಬರುವುದು. ಆದರೆ ಅದನ್ನಷ್ಟೇ ತೆಗೆದುಕೊಳ್ಳದೆ -ಇಂತಹದನ್ನು ಮಾಡುವುದು ಗೀತೆಯೊಡನೆ ವ್ಯವಹರಿಸುವ ತಪ್ಪಾದ ಮಾರ್ಗ-ಅದಕ್ಕೆ ಇನ್ನಿತರ ನಿಕಟವಾದ ಪರಿಚ್ಛೇದಗಳ ಸಂಪರ್ಕವಿಟ್ಟುಕೊಂಡು ಹಾಗೂ ಗೀತೆಯ ಇಡೀ ಬೋಧನೆಯನ್ನು ಗಮನದಲ್ಲಿಟ್ಟುಕೊಂಡು ಗ್ರಹಿಸಿದಾಗ ಅರ್ಥ ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಎಲ್ಲರಲ್ಲಿರುವ, ಪ್ರತಿಯೊಂದು ಜೀವಿಯ ಹೃದಯದಲ್ಲಿ ಆಸೀನನಾಗಿರುವ ಏಕೈಕ ದಿವ್ಯಾತ್ಮನನ್ನು ಕುರಿತಾದ ಸಿದ್ಧಾಂತವನ್ನು , ಸೃಷ್ಟಿಕರ್ತ ಹಾಗೂ ಸೃಷ್ಟಿ ಇವರ ನಡುವಿನ ಸಂಬಂಧಗಳನ್ನು , ಗೀತೆಯ ಬೋಧನೆಯು ಬಲವಾಗಿ ಒತ್ತುಕೊಟ್ಟು ಹೇಳಿದ ವಿಭೂತಿಗಳ ವಿಚಾರವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು-ಇದರೊಡನೆ ಸ್ವಾರ್ಥರಹಿತ ಕರ್ಮಗಳನ್ನು ಮಾಡೆಂದು ಹೇಳುವ ಭಾಷೆಯನ್ನು , ಅದು ಶ್ರೀಕೃಷ್ಣನಿಗೇ ಸ್ವತಃ ಹಾಗೂ ಜಗತ್ತಿನ ಪ್ರಭುವಿಗೆ ಅನ್ವಯವಾಗುವುದನ್ನು ಗಮನಿಸಬೇಕು. ಮತ್ತು ಒಂಬತ್ತನೆಯ ಅಧ್ಯಾಯದಲ್ಲಿ ಬರುವ ಪರಿಚ್ಛೇದ, ಅಂದರೆ : ‘‘ಮಾನವ ದೇಹದಲ್ಲಿ ವಾಸ ಮಾಡುವ ನನ್ನನ್ನು ಭ್ರಮೆಗೀಡಾದ ಜನರು ತಿರಸ್ಕರಿಸುತ್ತಾರೆ, ಏಕೆಂದರೆ ಎಲ್ಲ ಅಸ್ತಿತ್ವಗಳ ಪ್ರಭುವಾದ ನನ್ನ ಸತ್ತೆಯ ಪರಮೋಚ್ಚ ಸ್ವಭಾವವನ್ನು ಅವರು ಅರಿತಿರುವುದಿಲ್ಲ’’ ಎಂಬುದಕ್ಕೆ ತಕ್ಕುದಾದ ಮಹತ್ವ ನೀಡಬೇಕು. ಭಗವಂತನ ದಿವ್ಯ ಜನ್ಮ ಹಾಗೂ ದಿವ್ಯ ಕರ್ಮಗಳನ್ನು ಸಾರಿ ಹೇಳುವ ವಿಚಾರಗಳ ಜ್ಞಾನದಿಂದ ಮನುಷ್ಯರು ಭಗವಂತನತ್ತ ಬರುತ್ತಾರೆ ಮತ್ತು ಭಗವಂತ ಮಾಡುವ ರೀತಿಯಲ್ಲಿಯೇ ಅವನನ್ನು ತಮ್ಮಲ್ಲಿ ತುಂಬಿಕೊಳ್ಳುವುದರ ಮೂಲಕ, ಅವನನ್ನೇ ಆಶ್ರಯಿಸುವುದರ ಮೂಲಕ ಅವನ ದಿವ್ಯ ಸ್ವಭಾವ ಹಾಗೂ ಅವನ ಸತ್ತೆಯ ಔನ್ನತ್ಯಗಳತ್ತ

ತಲುಪುತ್ತಾರೆ 'ಮದ್ಭಾವಮ್'. ಏಕೆಂದರೆ ಆಗ ನಾವು ದೈವೀಜನ್ಮವನ್ನು ಹಾಗೂ ಅದರ ಉದ್ದೇಶವನ್ನು ತಿಳಿದುಕೊಳ್ಳುತ್ತೇವೆ, ಅದು ಅಪರೂಪದ ಅದ್ಭುತ ಗೋಚರ ವಿಷಯುವಾಗಿರುವುದಿಲ್ಲ, ಆದರೆ ಜಗತ್ತಿನ ಪ್ರಕಟಣೆ ಕುರಿತು ಇರುವ ಇಡೀ ಯೋಜನೆಯಲ್ಲಿ ಅದರ ಯೋಗ್ಯಸ್ಥಾನದಲ್ಲಿರುತ್ತದೆ. ಅದಿಲ್ಲದೆ ನಾವು ಅದರ ದೈವೀ ರಹಸ್ಯವನ್ನು ತಿಳಿದುಕೊಳ್ಳಲಾರೆವು. ಆದರೆ, ಒಟ್ಟಿನಲ್ಲಿ , ನಾವು ಅದರ ಶೋಧದಲ್ಲಿ ತೊಡಗುವೆವು ಇಲ್ಲವೆ ಅದನ್ನು ಅಜ್ಞಾನದಿಂದ ಒಪ್ಪಿಕೊಳ್ಳುವೆವು ಮತ್ತು ಅದು ಮೂಢನಂಬಿಕೆಯೂ ಆಗಿರಬಹುದು, ಇಲ್ಲವೆ ಅದನ್ನು ಕುರಿತು ಆಧುನಿಕ ಮನಸ್ಸಿನ ಕ್ಷುದ್ರ ಹಾಗೂ ಮೇಲ್ಮೈ ವಿಚಾರಗಳಲ್ಲಿ ಬಿದ್ದುಬಿಡಬಹುದು, ಆ ಮೂಲಕ ಅದರ ಎಲ್ಲ ಆಂತರಿಕ ಹಾಗೂ ಬಾಹ್ಯ ಸಹಾಯಕ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತೇವೆ.

ಆಧುನಿಕ ಮನಸ್ಸಿಗೆ ಅವತಾರ ತಾಳುವುದನ್ನು ಒಪ್ಪಿಕೊಳ್ಳುವುದು ಬಹಳ ಕಠಿಣವಾದ ವಿಷಯಗಳಲ್ಲೊಂದು ಇಲ್ಲವೆ ಪೌರ್ವಾತ್ಯ ದೇಶಗಳಿಂದ ಹರಿದು ಬರುವ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವುದು ತರ್ಕದ ಆಧಾರ ಪಡೆದ ಮಾನವ ಪ್ರಜ್ಞೆಗೆ ಕಠಿಣವಾದದ್ದು. ಅತಿ ಹೆಚ್ಚೆಂದರೆ ಅವತಾರಿಪುರುಷನನ್ನು ಉಚ್ಚಮಟ್ಟದ ಮಾನವ ಸಾಮರ್ಥ್ಯದ, ಚಾರಿತ್ರ್ಯದ, ಅಸಾಧಾರಣ ಪ್ರತಿಭೆಯ, ಜಗತ್ತಿಗಾಗಿ ಇಲ್ಲವೆ ಜಗತ್ತಿನಲ್ಲಿ ಶ್ರೇಷ್ಠ ಕಾರ್ಯ ಮಾಡಿದ ವ್ಯಕ್ತಿ ಎಂದು ತಿಳಿದುಕೊಳ್ಳುವುದು ಉಚಿತವೆಂದು ಅದು ಭಾವಿಸಬಹುದು. ಮತ್ತು ಅತಿಕೆಟ್ಟದಾಗಿ ಯೋಚಿಸುವುದಾದರೆ ಅವತಾರ ತಾಳುವಿಕೆ ಒಂದು ಮೂಢನಂಬಿಕೆ ಎಂದು ಪರಿಗಣಿಸುವುದಾಗಿದೆ-ಅನಾಗರಿಕರಿಗೆ ಅದೊಂದು ಮೂರ್ಖತನದ ವಿಷಯ, ಗ್ರೀಕರಿಗೆ ಅನಿಶ್ಚಿತತೆಯನ್ನು ಉಂಟುಮಾಡುವ ಕಾರಣ. ಅದು ಅವಶ್ಯವಾದದ್ದೆಂದು ತಿಳಿದುಕೊಳ್ಳದೆ ಪ್ರಾಪಂಚಿಕ ಮನುಷ್ಯ ಅದರತ್ತ ನೋಡಲೂ ಹೋಗುವುದಿಲ್ಲ , ಏಕೆಂದರೆ ಅವನಿಗೆ ಭಗವಂತನಲ್ಲಿ ನಂಬಿಕೆ ಇರುವುದಿಲ್ಲ. ವಿಚಾರವಾದಿ ಇಲ್ಲವೆ ದೈವವಾದಿಗೆ ಅದೊಂದು ಮೂರ್ಖತನ, ಅಪಹಾಸ್ಯದ ವಿಷಯ. ಮಾನವ ಸ್ವಭಾವ ಹಾಗೂ ದೈವೀ ಸ್ವಭಾವ ಇವುಗಳ ನಡುವೆ ಸೇತುವೆ ನಿರ್ಮಿಸಲಾಗದ ಕಂದರವನ್ನು ಕಂಡುಕೊಳ್ಳುವ, ಯಾವುದನ್ನೂ ಉಪೇಕ್ಷಿಸದ ದ್ವೈತವಾದಿಗೆ ಅದು ಧರ್ಮನಿಂದೆ ಎಂದು ಕಂಡುಬರುತ್ತದೆ. ವಿಚಾರವಾದಿಯ ತಕರಾರೆಂದರೆ ಭಗವಂತ ಅಸ್ತಿತ್ವದಲ್ಲಿ ಇರುವುದೇ ಆದರೆ ಅವನು ಜಗತ್ತಿನಾಚೆ, ಅಥವಾ ಬ್ರಹ್ಮಾಂಡದಾಚೆ ಇದ್ದಾನೆ, ಜಗತ್ತಿನ ವ್ಯವಹಾರಗಳಲ್ಲಿ ಅವನು ಕೈಹಾಕುವುದಿಲ್ಲ , ನಿಯಮದ ಯಾಂತ್ರಿಕತೆಯ ಪ್ರಕಾರ ಆ ವ್ಯವಹಾರಗಳು ನಡೆಯಲು



ಬಿಟ್ಟುಕೊಡುತ್ತಾನೆ.- ವಾಸ್ತವದಲ್ಲಿ ಅವನು ಒಂದು ರೀತಿಯಲ್ಲಿ ದೂರದಲ್ಲೆಲ್ಲೋ ಇರುವ ಸಂವಿಧಾನಬದ್ಧ ಸಾಮ್ರಾಟ, ಅಥವಾ ಆಧ್ಯಾತ್ಮಿಕ ರಾಜ, ಅತಿ ಹೆಚ್ಚೆಂದರೆ ಪ್ರಕೃತಿಯ ಹಿಂದುಗಡೆ ಇರುವ ಉದಾಸೀನ, ನಿಷ್ಕ್ರಿಯ ದಿವ್ಯಾತ್ಮ , ಸಾಂಖ್ಯರು ಸಾಮಾನ್ಯ ರೂಢಿಗೆ ತಂದ ಇಲ್ಲವೆ ಅಮೂರ್ತ ಸಾಕ್ಷೀಪುರುಷನಂತಿರುವವನು; ಅವನು ಪರಿಶುದ್ಧ ದಿವ್ಯಾತ್ಮನಾದುದರಿಂದ ದೇಹವನ್ನು ಧರಿಸಲಾರ, ಅನಂತನಾಗಿರುವುದರಿಂದ ಮಾನವರಂತೆ ಸಾಂತವಾಗಲಾರ, ಎಂದಿನಿಂದಲೂ ಅಸ್ತಿತ್ವದಲ್ಲಿರುವ, ಜನ್ಮತಾಳದ ಸೃಷ್ಟಿಕರ್ತ-ನಾದುದರಿಂದ ಜಗತ್ತಿನಲ್ಲಿ ಜನ್ಮತಾಳುವ ಜೀವಿಯಾಗಲಾರ, ಅವನ ಸರ್ವಸಾಮರ್ಥ್ಯ-ದಿಂದಲೂ ಕೂಡ ಈ ವಿಷಯಗಳು ಸಾಧ್ಯವಾಗಲಾರವು; ಯಾವುದನ್ನೂ ಉಪೇಕ್ಷಿಸದ ದ್ವೈತವಾದಿ ಈ ಆಕ್ಷೇಪಣೆಗಳಿಗೆ ಕೊಡುವ ಉತ್ತರವೆಂದರೆ ಭಗವಂತ ತನ್ನ ವ್ಯಕ್ತಿರೂಪದಲ್ಲಿದ್ದಾನೆ, ಅವನ ಪಾತ್ರ ಹಾಗೂ ಸ್ವಭಾವಗಳು ಮಾನವರಲ್ಲಿ ಇರುವುದಕ್ಕಿಂತ ಭಿನ್ನವಾಗಿವೆ, ಪರಿಪೂರ್ಣನಾದ ಅವನು ಮಾನವ ಅಪರಿಪೂರ್ಣತೆಯನ್ನು ಧರಿಸಲಾರ, ಜನ್ಮತಾಳದ ವ್ಯಕ್ತಿಗತ ಭಗವಂತ ಮಾನವರ ವ್ಯಕ್ತಿರೂಪದಲ್ಲಿ ಜನ್ಮತಾಳಲಾರ ; ಜಗತ್ತಿನ ದೈವೀ ಪ್ರಭು ಪ್ರಕೃತಿಯ ಬಂಧನಕ್ಕೊಳಗಾಗಲಾರ, ಪ್ರಕೃತಿಯ ಬಂಧನಕ್ಕೊಳಗಾದ ಮಾನವ ಕ್ರಿಯೆಯ ಹಾಗೂ ನಾಶಕ್ಕೊಳಗಾಗುವ ಮಾನವ ದೇಹದ ಸೀಮಿತತೆಗೆ ಒಳಗಾಗಲಾರ. ತರ್ಕಕ್ಕೆ ಮೊದಲ ನೋಟದಲ್ಲಿ ದಿಗಿಲು ಹುಟ್ಟಿಸುವ ಈ ಆಕ್ಷೇಪಣೆಗಳು ಗೀತೆಯ ದಿವ್ಯ ಗುರುವಿನ ಮನಸ್ಸಿನಲ್ಲಿ ಉಪಸ್ಥಿತವಿದ್ದವೆಂದು ತೋರಿಬರುತ್ತದೆ. : ''ಭಗವಂತ ತನ್ನ ಸ್ವ-ಅಸ್ತಿತ್ವದಲ್ಲಿ , ಎಲ್ಲ ಜೀವಿಗಳ ಪ್ರಭುವಾಗಿ ಜನ್ಮತಾಳದವನು ಹಾಗೂ ಅವಿನಾಶಿ ಆಗಿದ್ದರೂ ತನ್ನ ದಿವ್ಯ ಪ್ರಕೃತಿಯ ಕ್ರಿಯೆ ಹಾಗೂ ಸ್ವ-ಮಾಯೆಯ ಶಕ್ತಿ ಇವುಗಳ ಪರಮೋಚ್ಚ ನೆರವು ಪಡೆದು ಜನ್ಮತಾಳುತ್ತಾನೆ. ಭ್ರಮೆಯಲ್ಲಿರುವ ಜನರು ಮಾನವ ದೇಹದಲ್ಲಿ ವಾಸಿಸುತ್ತಾನೆಂಬ ಕಾರಣದಿಂದ ಯಾರನ್ನು ತಿರಸ್ಕರಿಸುತ್ತಾರೋ ಅವನು ಸತ್ಯವಾಗಿ ತನ್ನ ಪರಮೋಚ್ಚ ಸತ್ತೆಯಲ್ಲಿ ಎಲ್ಲರ ಪ್ರಭುವಾಗಿರುತ್ತಾನೆ, ಅವನು ದೈವೀಪ್ರಜ್ಞೆಯ ಕ್ರಿಯೆಯಲ್ಲಿರುತ್ತಾನೆ. ನಾಲ್ಕು ಬಗೆಯ ದೈವೀ ನಿಯಮಗಳನ್ನು ಸೃಷ್ಟಿಸಿರುವವನು, ಜಗತ್ತಿನ ಕಾರ್ಯಗಳನ್ನು ಮಾಡುವವನು, ಅದೇ ಕಾಲಕ್ಕೆ ದೈವೀ ಪ್ರಜ್ಞೆಯ ನಿಶ್ಚಲನೀರವತೆಯಲ್ಲಿರುವವನು, ತನ್ನದೇ ಆದ ಪ್ರಕೃತಿಯ ಕಾರ್ಯಗಳನ್ನು ಪಕ್ಷಪಾತವಿಲ್ಲದೆ ಸಾಕ್ಷೀಭಾವದಿಂದ ನೋಡುವವನು.- ಏಕೆಂದರೆ ಪುರುಷೋತ್ತಮನಾದ ಅವನು ಯಾವಾಗಲೂ ನಿಶ್ಚಲನೀರವತೆ ಮತ್ತು ಕ್ರಿಯೆ ಇವೆರಡರಾಚೆ ಇರುತ್ತಾನೆ. ಗೀತೆ ಇಲ್ಲಿ

ಕಾಣಿಸುವ ಎಲ್ಲ ವೈರುಧ್ಯಗಳನ್ನು ಸಂಧಿಸಿ ಅವುಗಳಲ್ಲಿ ರಾಜಿ ಮಾಡಲು ಶಕ್ತವಾಗಿದೆ ; ಏಕೆಂದರೆ ಅದು ಅಸ್ತಿತ್ವ , ಭಗವಂತ ಹಾಗೂ ಜಗತ್ತು ಕುರಿತು ವೇದಾಂತದ ದೃಷ್ಟಿಕೋನದಿಂದ ಪ್ರಾರಂಭಿಸುತ್ತದೆ.

ತೋರಿಕೆಯಲ್ಲಿ ಕಂಡುಬರುವ ಈ ಎಲ್ಲ ಆಕ್ಷೇಪಣೆಗಳು ಆರಂಭದಲ್ಲಿಯೇ ನಗಣ್ಯವಾಗಿವೆ. ವೇದಾಂತದ ಯೋಜನೆಯಲ್ಲಿ ಅವತಾರದ ವಿಚಾರ ನಿಜವಾಗಿ ಅತ್ಯವಶ್ಯವಾಗಿಲ್ಲ , ಆದರೆ ಅದು ಸಂಪೂರ್ಣವಾಗಿ ತರ್ಕಬದ್ಧ ಹಾಗೂ ವೈಚಾರಿಕವಾದ ಕಲ್ಪನೆಯಾಗಿರುತ್ತದೆ, ಏಕೆಂದರೆ ಇಲ್ಲಿರುವುದೆಲ್ಲ ಭಗವಂತ, ದಿವ್ಯಾತ್ಮ , ಸ್ವ-ಅಸ್ತಿತ್ವ ಹಾಗೂ ಬ್ರಹ್ಮನ್ ಆಗಿದೆ, ಬೇರೇನೂ ಇಲ್ಲ , ಇತರ, ಭಿನ್ನವಾದ ಯಾವುದೂ ಇಲ್ಲ. ಪ್ರಕೃತಿ ಇದೆ, ಅದು ದೈವೀಪ್ರಜ್ಞೆಯ ಒಂದು ಸಾಮರ್ಥ್ಯವಲ್ಲದೆ ಬೇರೇನೂ ಆಗಿರಲಾರದು. ಎಲ್ಲ ಸತ್ತೆಗಳಿವೆ, ಅವು ಭಗವಂತನ ಆಂತರಿಕ ಹಾಗೂ ಬಾಹ್ಯ, ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ, ದೇಹಾಧಾರಿತ ರೂಪಗಳಾಗಿವೆ, ಅವುಗಳಲ್ಲಿ ಭಗವಂತ ಅಸ್ತಿತ್ವದಲ್ಲಿದ್ದಾನೆ, ಇಲ್ಲವೆ ಅವು ಅವನ ಪ್ರಜ್ಞೆಯ ಸಾಮರ್ಥ್ಯದ ಪರಿಣಾಮ ಸ್ವರೂಪದವಾಗಿರುತ್ತವೆ. ಅನಂತನಾದ ಭಗವಂತ ಸಾಂತ ರೂಪ ಪಡೆಯಲು ಅಸಮರ್ಥನಾಗುವ ಪ್ರಶ್ನೆಯೇ ಇಲ್ಲ ; ಏಕೆಂದರೆ ಇಡೀ ವಿಶ್ವ ಅವನಲ್ಲದೆ ಬೇರೇನೂ ಅಲ್ಲ. ನಾವು ವಾಸಿಸುವ ವಿಸ್ತಾರವಾದ ಜಗತ್ತನ್ನು , ನಾವು ಹೇಗೇ ನೋಡಲಿ, ನಾವು ಬೇರೇನನ್ನೂ ನೋಡಲಾರೆವು. ದಿವ್ಯಾತ್ಮವು ರೂಪ ತಾಳುವುದಕ್ಕೆ ಅಸಮರ್ಥವಾಗುವುದಾಗಲಿ, ಭೌತದ್ರವ್ಯದ ಇಲ್ಲವೆ ಮನಸ್ಸಿನ ಸ್ವರೂಪವನ್ನು ಹಾಗೂ ದೇಹವನ್ನು ಧರಿಸುವುದನ್ನು ತಿರಸ್ಕರಿಸುವುದಾಗಲಿ ಅಸಾಧ್ಯವಾಗಿದ್ದು ಇಲ್ಲಿ ಕಂಡುಬರುವುದೆಲ್ಲ ಅದೇ ಆಗಿದೆ, ಇಡೀ ಜಗತ್ತು ಕೇವಲ ಆ ಸಂಪರ್ಕದಿಂದ ಹಾಗೂ ರೂಪತಾಳುವಿಕೆಯಿಂದ ಅಸ್ತಿತ್ವದಲ್ಲಿದೆ. ಜಗತ್ತು ಜೀವವಿಲ್ಲದ, ಆತ್ಮವಿಲ್ಲದ ಯಾಂತ್ರಿಕ ನಿಯಮವಾಗಿರುವುದಕ್ಕಿಂತ ಇಲ್ಲವೆ ಯಾವ ಆತ್ಮವೂ ಅದರ ಶಕ್ತಿಗಳ ಚಲನೆಯಲ್ಲಿ ಇಲ್ಲವೆ ಅದರ ಮನಸ್ಸುಗಳ ಹಾಗೂ ದೇಹಗಳ ಕ್ರಿಯೆಯಲ್ಲಿ ಯಾವ ಮಧ್ಯಸ್ಥಿಕೆ ವಹಿಸದಿರುವುದಕ್ಕಿಂತ ತೀರ ಬೇರೆಯಾಗಿದ್ದು-ಕೇವಲ ಯಾವುದೋ ಮೂಲ ಉದಾಸೀನವಾದ ದಿವ್ಯಾತ್ಮ ನಿಷ್ಕ್ರಿಯವಾಗಿ ಬಾಹ್ಯದಲ್ಲಿ ಇಲ್ಲವೆ ಜಗತ್ತಿನ ಮೇಲ್ಗಡೆ ಅಸ್ತಿತ್ವದಲ್ಲಿರುವುದರ ಹೊರತಾಗಿ-ಇಡೀ ಜಗತ್ತು ಹಾಗೂ ಅದರ ಪ್ರತಿಯೊಂದು ಕಣ, ತದ್ವಿರುದ್ಧವಾಗಿ, ಕ್ರಿಯೆಯಲ್ಲಿ ತೊಡಗಿಕೊಂಡ ದೈವೀಶಕ್ತಿಯಾಗಿದೆ ಮತ್ತು ದೈವೀಶಕ್ತಿ ಅದರ ಎಲ್ಲ ಚಲನೆಯನ್ನು ನಿರ್ಧರಿಸುತ್ತದೆ ಹಾಗೂ ಆಳಿಕೆ ನಡೆಸುತ್ತದೆ, ಅದರ ಪ್ರತಿಯೊಂದು



ರೂಪದಲ್ಲಿ ವಾಸಿಸುತ್ತದೆ, ಇಲ್ಲಿ ಪ್ರತಿಯೊಂದು ಆತ್ಮವನ್ನು, ಮನಸ್ಸನ್ನು ತನ್ನ ವಶವರ್ತಿ ಮಾಡಿಕೊಂಡಿರುತ್ತದೆ. ಎಲ್ಲವೂ ಭಗವಂತನಲ್ಲಿದೆ ಮತ್ತು ಅವನಲ್ಲಿಯೇ ಚಲಿಸುತ್ತದೆ, ತನ್ನ ಸತ್ತೆಯನ್ನು ಹೊಂದಿದೆ. ಎಲ್ಲದರಲ್ಲಿಯೂ ಭಗವಂತನಿದ್ದಾನೆ. ಕಾರ್ಯಮಾಡುತ್ತಾನೆ, ತನ್ನ ಸತ್ತೆಯನ್ನು ಪ್ರಕಟಿಸುತ್ತಾನೆ ; ಪ್ರತಿಯೊಂದು ಜೀವಿ ಮುಸುಕಿನಲ್ಲಿದ್ದ ನಾರಾಯಣ.

ಜನ್ಮ ತಾಳಲು ಅಸಮರ್ಥವಾದ ಜನ್ಮತಾಳದ ಸತ್ತೆ ಇರುವುದು ಅಸಂಭವ, ಎಲ್ಲ ಸತ್ತೆಗಳು, ತಮ್ಮ ವಿಭಿನ್ನ ವ್ಯಕ್ತಿತ್ವದಲ್ಲೂ ಇಲ್ಲವೆ ಅದರ ಮನಸ್ಸುಗಳ ಹಾಗೂ ದೇಹಗಳ ಕ್ರಿಯೆಯಲ್ಲಿ ಕೂಡ ಜನ್ಮತಾಳದ ಆತ್ಮಗಳಾಗಿವೆ ; ಆದಿ, ಅಂತ್ಯಗಳಿಲ್ಲದೆ ಶಾಶ್ವತವಾಗಿವೆ ಮತ್ತು ತಮ್ಮ ಸಾರಭೂತ ಅಸ್ತಿತ್ವದಲ್ಲಿ ಹಾಗೂ ವಿಶ್ವವ್ಯಾಪಕತೆಯಲ್ಲಿ ಎಲ್ಲರೂ ಜನ್ಮತಾಳದ ದಿವ್ಯಾತ್ಮರಾಗಿದ್ದಾರೆ ; ದಿವ್ಯಾತ್ಮನಿಗೆ ಜನ್ಮ ಮತ್ತು ಮೃತ್ಯು ರೂಪತಾಳುವಿಕೆಯ ಹಾಗೂ ರೂಪಬದಲಾಯಿಸುವಿಕೆಯ ಗೋಚರ ವಿಷಯಗಳು. ಎಲ್ಲವನ್ನು ಬೆಳಗುವ ಸೂರ್ಯನಲ್ಲಿ ಬೆಳಕಿನ ಇಲ್ಲವೆ ನೋಟದ ದೋಷವಿಲ್ಲದೆ ಇರುವ ರೀತಿಯಲ್ಲಿ ಆ ರೂಪ ತಾಳುವುದರಲ್ಲಿ ಅಪರಿಪೂರ್ಣತೆ ಇರುವುದಿಲ್ಲ , ಆದರೆ ಪ್ರತ್ಯೇಕ ಅಂಗದ ಇಲ್ಲವೆ ದೃಷ್ಟಿಯ ಸಾಮರ್ಥ್ಯದಲ್ಲಿ ದೋಷವಿರುತ್ತದೆ. ಭಗವಂತ ಎಲ್ಲಿಯೋ ಬಹಳ ದೂರದಲ್ಲಿದ್ದು ಜಗತ್ತಿನ ಮೇಲೆ ಆಳಿಕೆ ನಡೆಸುವುದಿಲ್ಲ , ಆ ಆಳಿಕೆ ನಿಕಟವಾದ ಅವನ ಸರ್ವವ್ಯಾಪಕತೆಯಿಂದ ನಡೆಯುತ್ತದೆ ಶಕ್ತಿಯ ಪ್ರತಿಯೊಂದು ಸಾಂತ ಕ್ರಿಯೆ ಅನಂತ ದೈವೀಶಕ್ತಿಯ ಕ್ರಿಯೆಯಾಗಿರುತ್ತದೆ, ಅದು ಸೀಮಿತ, ಪ್ರತ್ಯೇಕವಾಗಿ ಅಸ್ತಿತ್ವದಲ್ಲಿರುವ ಚೈತನ್ಯದ, ಬೇರೆಡೆಯಿಂದ ದೊರಕಿಸದ, ತನ್ನದೇ ಬಲದಿಂದ ಆಗಿರುವುದಿಲ್ಲ. ಸಂಕಲ್ಪದ ಹಾಗೂ ಜ್ಞಾನದ ಪ್ರತಿಯೊಂದು ಸಾಂತ ಕಾರ್ಯಗತಿಯಲ್ಲಿ , ಅದಕ್ಕೆ ಆಧಾರ ಒದಗಿಸುವ ಅನಂತ ಸರ್ವ-ಸಂಕಲ್ಪದ ಹಾಗೂ ಸರ್ವಜ್ಞಾನದ ಕ್ರಿಯೆಯನ್ನು ನಾವು ಶೋಧಿಸಬಹುದು. ಭಗವಂತನ ಆಳಿಕೆ ಉಪಸ್ಥಿತವಿರದ, ವಿದೇಶೀ ಹಾಗೂ ಬಾಹ್ಯದಿಂದ ನಡೆಸುವ ಆಳಿಕೆಯಲ್ಲ , ಅವನು ಎಲ್ಲದರ ಮೇಲೆ ಆಳಿಕೆ ನಡೆಸುತ್ತಾನೆ, ಏಕೆಂದರೆ ಅವನು ಎಲ್ಲವನ್ನೂ ಮೀರಿ ಹೋಗಿದ್ದಾನೆ ಮತ್ತು ಏಕೆಂದರೆ ಅವನು ಎಲ್ಲ ಚಲನವಲನಗಳಲ್ಲಿ ವಾಸಿಸುತ್ತಾನೆ, ಅವುಗಳ ಆತ್ಮವಾಗಿರುತ್ತಾನೆ. ಆದ್ದರಿಂದ ಅವತಾರದ ಸಾಧ್ಯತೆಗೆ ನಾವು ತರ್ಕದಿಂದ ಮಾಡುವ ಆಕ್ಷೇಪಣೆಗಳು ತಮ್ಮ ತತ್ವದಲ್ಲಿ ನಿಲ್ಲಲಾರವು. ಏಕೆಂದರೆ ಆ ತತ್ವವು ಬುದ್ಧಿಮತ್ತೆಯ ತರ್ಕದಿಂದ ಮಾಡಿದ ವ್ಯರ್ಥ ವಿಭಜನೆ-ಯಾಗಿರುತ್ತದೆ. ಜಗತ್ತಿನ ಇಡೀ ಗೋಚರ ವಿಷಯಗಳು ಹಾಗೂ ನೈಜತೆಗಳು ಪ್ರತಿಯೊಂದು ಕ್ಷಣ ಆ ಬುದ್ಧಿಮತ್ತೆಯ ತರ್ಕವನ್ನು ವಿರೋಧಿಸುತ್ತವೆ ಹಾಗೂ ಅಲ್ಲಗಳೆಯುತ್ತವೆ.

ಆದರೆ ಸಾಧ್ಯತೆಯ ಹೊರತಾಗಿ ವಾಸ್ತವವಾಗಿ ಆಗುವ ದೈವೀ ಕಾರ್ಯಗತಿಯ ಪ್ರಶ್ನೆ ಇರುತ್ತದೆ-ವಾಸ್ತವದಲ್ಲಿ ಪರದೆಯ ಆಚೆಗಿರುವ ದೈವೀಪ್ರಜ್ಞೆ ಗೋಚರವಾದುದರಲ್ಲಿ , ಸಾಂತವಾದುದರಲ್ಲಿ , ಮಾನಸಿಕವಾದುದರಲ್ಲಿ , ಭೌತಿಕವಾದುದರಲ್ಲಿ ಸೀಮಿತ ಹಾಗೂ ಅಪರಿಪೂರ್ಣವಾದುದರಲ್ಲಿ ನೇರವಾಗಿ ಕಾರ್ಯಮಾಡಲು ಮುಂದೆ ಬರುತ್ತಿರುವಂತೆ ತೋರಿಬರುತ್ತದೆಯೇ ಎಂಬುದು ಆ ಪ್ರಶ್ನೆ . ಸಾಂತವೆಂಬುದು, ನಿಜವಾಗಿ, ಒಂದು ವ್ಯಾಖ್ಯೆಯಲ್ಲದೆ ಬೇರೇನಲ್ಲ. ಅದು ಅನಂತ ತನ್ನ ಪ್ರಜ್ಞೆಯ ಏರು-ಪೇರುಗಳಿಗೆ ಮಾಡಿಕೊಳ್ಳುವ ಸ್ವ-ನಿರೂಪಣೆಗಳ ಮುಖಬೆಲೆಯಾಗಿರುತ್ತದೆ. ಪ್ರತಿಯೊಂದು ಸಾಂತ ಗೋಚರ ವಿಷಯದ ನಿಜವಾದ ಬೆಲೆ, ಅದರ ಗೋಚರ ಸ್ವರೂಪದ ಕ್ರಿಯೆಯಲ್ಲಿ ಹಾಗೂ ಅದರ ಲೌಕಿಕ ಸ್ವ-ನಿರೂಪಣೆಯಲ್ಲಿ , ಏನೇ ಆಗಿರಬಹುದು, ಆದರೆ ತನ್ನದೇ ಅಸ್ತಿತ್ವದಲ್ಲಿ ಅದು ಅನಂತವಾಗಿರುತ್ತದೆ. ಮನುಷ್ಯನನ್ನು ನಾವು ಲಕ್ಷ್ಯಗೊಟ್ಟು ಹತ್ತಿರದಿಂದ ನೋಡಿದಾಗ ಅವನು ಕಟ್ಟುನಿಟ್ಟಾಗಿ, ಪ್ರತ್ಯೇಕ, ಸ್ವ-ಅಸ್ತಿತ್ವದಲ್ಲಿರುವ ವ್ಯಕ್ತಿ ಮಾತ್ರ ಆಗಿರುವುದಿಲ್ಲ, ಆದರೆ ಮಾನವತೆ ತನ್ನದೇ ಮನಸ್ಸು ಹಾಗೂ ದೇಹವೊಂದರಲ್ಲಿ ಆ ವ್ಯಕ್ತಿಯಾಗಿ ರೂಪುಗೊಂಡಿರುತ್ತದೆ. ಮಾನವತೆಯೂ ಕೂಡ ಕಟ್ಟುನಿಟ್ಟಾಗಿ ಪ್ರತ್ಯೇಕವಾದ ಸ್ವ-ಅಸ್ತಿತ್ವವಿರುವ ಜೀವಜಾತಿಯಲ್ಲ, ಅದು ಸರ್ವ-ಅಸ್ತಿತ್ವವಾಗಿದೆ, ವಿಶ್ವಂಭರ ದೇವಮಾನವತೆಯ ಮಾದರಿಯಲ್ಲಿ ತನಗೆ ಆಕಾರ ಕೊಟ್ಟುಕೊಳ್ಳುವಿಕೆಯಾಗಿದೆ, ಅಲ್ಲಿ ಅದು ಕೆಲವೊಂದು ಸಾಧ್ಯತೆಗಳನ್ನು ಕಾರ್ಯಗತಗೊಳಿಸುತ್ತದೆ, ಅಭಿವೃದ್ಧಿಪಡಿಸುತ್ತದೆ, ನಾವು ಈಗ ಹೇಳುವ ಹಾಗೆ ಅದರ ಕೆಲವು ಸಾಮರ್ಥ್ಯಗಳನ್ನು ಉತ್ಕ್ರಾಂತಿಗೆ ಒಳಪಡಿಸುತ್ತದೆ. ಯಾವುದು ಉತ್ಕ್ರಾಂತಿಗೆ ಒಳಗಾಗುತ್ತದೋ ಅದೇ ದಿವ್ಯಾತ್ಮ.

ಏಕೆಂದರೆ ನಾವು ದಿವ್ಯಾತ್ಮನೆಂದು ಕರೆಯುವುದು ಸ್ವ-ಅಸ್ತಿತ್ವದಲ್ಲಿರುವ ಸತ್ತೆ, ಪ್ರಜ್ಞೆಯ ಅನಂತ ಸಾಮರ್ಥ್ಯವುಳ್ಳದ್ದು , ತನ್ನ ಸತ್ತೆಯಲ್ಲಿ ನಿರಾತಂಕವಾದ ದಿವ್ಯಾನಂದವುಳ್ಳದ್ದು , ಅದು ಅದಾಗಿದೆ ಇಲ್ಲವೆ ಬೇರೇನೂ ಅಲ್ಲ , ಇಲ್ಲವೆ ಕನಿಷ್ಠಪಕ್ಷ ಮನುಷ್ಯ ಮತ್ತು ಜಗತ್ತು ಇವುಗಳೊಡನೆ ಮಾಡಬೇಕಾದುದು ಏನೂ ಇಲ್ಲದಂತಹದು ಇಲ್ಲವೆ ಆ ಕಾರಣದಿಂದ ಮನುಷ್ಯ ಮತ್ತು ಜಗತ್ತು ಅದರೊಡನೆ ಮಾಡಬೇಕಾದುದು ಏನೂ ಇಲ್ಲದಿರುವಂತಹದು. ಭೌತದ್ರವ್ಯ, ದೇಹ ಇದೆಲ್ಲ ಪ್ರಜ್ಞಾಪೂರ್ಣ ಸತ್ತೆಯ ಶಕ್ತಿಯ ಕೇವಲ ಮೊತ್ತವಿರುವ ಒಂದು ಚಲನೆ ; ವ್ಯತ್ಯಯ ಸಾಧ್ಯವಿರುವ ಪ್ರಜ್ಞೆಯ ಸಂಬಂಧಗಳಿಗಾಗಿ ಇಂದ್ರಿಯದ ಮೂಲಕ ಕಾರ್ಯ ಕೈಕೊಳ್ಳುವುದಕ್ಕಾಗಿ ಅದನ್ನು ಪ್ರಾರಂಭ ಬಿಂದುವೆಂದು ಉಪಯೋಗಿಸ-



ಲಾಗುತ್ತದೆ, ಭೌತದ್ರವ್ಯ, ನಿಜವಾಗಿ, ಎಲ್ಲಿಯೂ ಪ್ರಜ್ಞಾಶೂನ್ಯವಾಗಿರುವುದಿಲ್ಲ, ಏಕೆಂದರೆ ಅಣುವಿನಲ್ಲಿ , ಜೀವಕೋಶದಲ್ಲಿ ಕೂಡ, ಈಗ ಆಧುನಿಕ ವಿಜ್ಞಾನ ಸಾಕಷ್ಟು ಸ್ಪಷ್ಟವಾಗಿ ತಿಳಿಯಪಡಿಸಿರುವಂತೆ, ಸಂಕಲ್ಪದ ಸಾಮರ್ಥ್ಯ ಹಾಗೂ ಬುದ್ಧಿಮತ್ತೆ ಕಾರ್ಯನಿರತವಾಗಿರುತ್ತವೆ. ಆದರೆ ಆ ಸಾಮರ್ಥ್ಯ ಅವುಗಳೊಳಗಿರುವ ದಿವ್ಯಾತ್ಮನ ಸಂಕಲ್ಪ ಹಾಗೂ ಬುದ್ಧಿಮತ್ತೆಗಳದಾಗಿರುತ್ತದೆ. ಅದು ಯಾಂತ್ರಿಕ ಕೋಶ ಅಥವಾ ಅಣು ತಾನೇ ದೊರಕಿಸಿದ, ಪ್ರತ್ಯೇಕವಾದ, ಸಂಕಲ್ಪ ಇಲ್ಲವೆ ಕಲ್ಪನೆ ಆಗಿರುವುದಿಲ್ಲ. ತೊಡಗಿಕೊಂಡ ಈ ವಿಶ್ವಂಭರ ಸಂಕಲ್ಪ ಮತ್ತು ಬುದ್ಧಿಮತ್ತೆ, ಒಂದು ರೂಪದಿಂದ ಇನ್ನೊಂದು ರೂಪದಲ್ಲಿ ತನ್ನ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುತ್ತದೆ ಮತ್ತು ಕನಿಷ್ಠಪಕ್ಷ ಪೃಥ್ವಿಯ ಮೇಲೆ ಮನುಷ್ಯನಲ್ಲಿಯೇ ಅದು ಪೂರ್ಣ ಭಗವಂತನ ಹತ್ತಿರ ಅತಿ ಸಮೀಪದಲ್ಲಿರಲು ಎಳೆತಕ್ಕೊಳಗಾಗುತ್ತದೆ. ಮತ್ತು ಅಲ್ಲಿ ಮೊದಲು ರೂಪ ತಾಳಿದುದರ ಬಾಹ್ಯ ಬುದ್ಧಿಮತ್ತೆಯಲ್ಲಿ ತನ್ನ ದೈವಿಕತೆಯ ಬಗ್ಗೆ ಮಬ್ಬಾಗಿ ಪ್ರಜ್ಞೆಯುಳ್ಳದ್ದಾಗುತ್ತದೆ. ಆದರೆ ಇನ್ನೂ ಅಲ್ಲಿಯೂ ಕೂಡ ಸೀಮಿತತೆ ಇದೆ, ಪ್ರಕಟಣೆಯ ಅಪರಿಪೂರ್ಣತೆ ಇದೆ, ನಿಮ್ನತರ ರೂಪಗಳು ಭಗವಂತನೊಡನಿರುವ ತಾದಾತ್ಮ್ಯದ ಬಗ್ಗೆ ಸ್ವ-ಜ್ಞಾನ ಪಡೆಯುವುದಕ್ಕೆ, ಅದು ಅಡ್ಡಿಯನ್ನುಂಟು ಮಾಡುತ್ತದೆ. ಏಕೆಂದರೆ ಪ್ರತಿಯೊಂದು ಸೀಮಿತ ಸತ್ತೆಯಲ್ಲಿ ಗೋಚರ ಕ್ರಿಯೆಯ ಸೀಮಿತತೆಯ ಜೊತೆಗೆ ಗೋಚರ ಪ್ರಜ್ಞೆಯ ಸೀಮಿತತೆಯೂ ಕೂಡ ಇರುತ್ತದೆ, ಇದು ಸತ್ತೆಯ ಸ್ವಭಾವದ ಅರ್ಥವನ್ನು ನಿರೂಪಿಸುತ್ತದೆ ಮತ್ತು ಒಂದು ಜೀವಿಯಿಂದ ಇನ್ನೊಂದು ಜೀವಿಯಲ್ಲಿ ಕಂಡುಬರುವ ವ್ಯತ್ಯಾಸವನ್ನು ಉಂಟುಮಾಡುತ್ತದೆ. ನಿಜವಾಗಿ ಭಗವಂತ ಹಿಂದೆ ಇದ್ದು ಕಾರ್ಯಮಾಡುತ್ತಾನೆ ಮತ್ತು ಬಾಹ್ಯದಲ್ಲಿರುವ ಈ ಅಪರಿಪೂರ್ಣ ಪ್ರಜ್ಞೆ ಹಾಗೂ ಸಂಕಲ್ಪಗಳ ಮೂಲಕ ತನ್ನ ವಿಶಿಷ್ಟ ಪ್ರಕಟಣೆಯ ಮೇಲೆ ಆಳಿಕೆ ನಡೆಸುತ್ತಾನೆ. ಆದರೆ ತಾನು ಸ್ವತಃ ರಹಸ್ಯವಾಗಿ ಗುಹೆಯಲ್ಲಿರುತ್ತಾನೆ 'ಗುಹ್ಯಮ್'. ಇದನ್ನು ವೇದಗಳು ಹೇಳಿವೆ ಇಲ್ಲವೆ ಗೀತೆ ''ಎಲ್ಲ ಅಸ್ತಿತ್ವಗಳನ್ನು ಮಾಯೆಯ ಯಂತ್ರದ ಮೇಲೆ ತಿರುಗಿಸುತ್ತ ಆ ಅಸ್ತಿತ್ವಗಳ ಹೃದಯದಲ್ಲಿ ದೈವೀ ಪ್ರಭು ವಾಸಿಸುತ್ತಾನೆ'' ಎಂದು ಹೇಳಿದೆ. ಅಹಮನ್ಯತೆಯ ಸ್ವಭಾವದ ಪ್ರಜ್ಞೆಯ ಮೂಲಕ ಕಾರ್ಯಮಾಡುವ, ಹೃದಯದಲ್ಲಿ ಗುಪ್ತವಾಗಿ ಇರುವ ದೈವೀಪ್ರಭುವಿನ ಜೀವಿಗಳೊಡನಿರುವ ಕಾರ್ಯಗತಿಯು ಅವನ ವಿಶ್ವಂಭರ ವಿಧಾನವಾಗಿರುತ್ತದೆ. ಹಾಗಾಗಿ ಅವನು ಯಾವುದೋ ಒಂದು ರೂಪದಲ್ಲಿ ಮುಂಭಾಗದಲ್ಲಿ ಗೋಚರವಾಗುವ ಪ್ರಜ್ಞೆಯೊಂದಿಗೆ, ಹೆಚ್ಚು ನೇರವಾದ ಹಾಗೂ

ಪ್ರಜ್ಞಾಪೂರ್ಣವಾದ ಕ್ರಿಯೆಗಾಗಿ ಮುಂದೆ ಬರುವನೆಂದು ಏಕೆ ಭಾವಿಸಬೇಕು? ಹಾಗೇನಾದರೂ ಆಗಬೇಕಾದರೆ, ಸ್ಪಷ್ಟವಾಗಿ, ತನ್ನ ಹಾಗೂ ಮಾನವತೆಯ ನಡುವಿರುವ ಪರದೆಯನ್ನು ಹರಿದು ಹಾಕಲು ಅವನು ಬರಬೇಕು ; ಮನುಷ್ಯ ತನ್ನ ಸೀಮಿತ ಸ್ವಭಾವದಿಂದಾಗಿ ಆ ಪರದೆಯನ್ನು ಎತ್ತಿ ಬಿಸಾಕಲಾರ.

ಪ್ರಕೃತಿಯ ಯಾಂತ್ರಿಕತೆಗೆ ಅಧೀನವಾಗಿರುವ ಜೀವಿಯ ಸಾಮಾನ್ಯ, ಅಪರಿಪೂರ್ಣ ಕ್ರಿಯೆ ಮತ್ತು ಮಾಯೆಯ ಸ್ವ-ನಿರೂಪಣೆಗಳಿಂದಾಗುವ ಅದರ ಸೀಮಿತತೆ ಕುರಿತು ಗೀತೆ ಹೇಳುತ್ತದೆ. (ಪ್ರಕೃತಿಯ ಯಾಂತ್ರಿಕತೆ ಹಾಗೂ ಮಾಯೆ) ಇವೆರಡು ಪದಗಳು ದೈವೀಪ್ರಜ್ಞೆಯ ಪರಿಣಾಮಕಾರಿ ಶಕ್ತಿಯನ್ನು ಕುರಿತು ಒಂದಕ್ಕೊಂದು ಪೂರಕವಾಗಿವೆ-ಭ್ರಮೆಯ ಅಂಶ ಇಲ್ಲವೆ ತೋರಿಕೆ ನಿಮ್ನತರ ಪ್ರಕೃತಿಯ ಅಜ್ಞಾನದಿಂದ ಪ್ರವೇಶಿಸುತ್ತದೆ, ನಿಮ್ನತರ ಪ್ರಕೃತಿಯೆಂದರೆ ತ್ರಿಗುಣಗಳಿಂದ ಕೂಡಿದ ಮಾಯೆ-ಅದು ತನ್ನ ಸತ್ತೆಯ ನಾನಾ ಬಗೆಯ ಸ್ವ-ನಿರೂಪಣೆಯ ಸಾಮರ್ಥ್ಯವುಳ್ಳ ದೈವೀ ಪ್ರಜ್ಞೆ, ಆದರೆ ಪ್ರಕೃತಿ ಆ ಪ್ರಜ್ಞೆಯ ಪರಿಣಾಮಕಾರಿ ಶಕ್ತಿಯಾಗಿರುತ್ತದೆ. ಈ ಶಕ್ತಿ ಇಂತಹ ಪ್ರತಿಯೊಂದು ಸ್ವ-ನಿರೂಪಣೆಯನ್ನು, ಅದರದೇ ನಿಯಮ, ಮೂಲ ವಿಚಾರ 'ಸ್ವಭಾವ' ಮತ್ತು 'ಸ್ವಧರ್ಮ' ಮತ್ತು ಅದರದೇ ಸರಿಯಾದ ಗುಣ ಮತ್ತು ಕಾರ್ಯಗತಿಯ ವಿಶಿಷ್ಟ ಶಕ್ತಿ 'ಗುಣಕರ್ಮ' ಇವುಗಳಿಗನುಸಾರವಾಗಿ ಕಾರ್ಯಾಚರಣೆ ನಡೆಸುತ್ತದೆ. ವಾಲಿಕೊಂಡು-ನನ್ನದೇ ಪ್ರಕೃತಿಯ ಮೇಲೆ ಒತ್ತಾಯ ತಂದು ನಾನು ಈ ಎಲ್ಲ ಅಸ್ತಿತ್ವಗಳನ್ನು ಸೃಷ್ಟಿಸುತ್ತೇನೆ (ನಾನಾ ಸತ್ತೆಗಳಲ್ಲಿ ಸ್ವೇಚ್ಛೆಯಾಗಿ ಹರಿಬಿಡುತ್ತೇನೆ), ಅವೆಲ್ಲವೂ ಅಸಹಾಯಕವಾಗಿ ಪ್ರಕೃತಿಯ ನಿಯಂತ್ರಣಕ್ಕೆ ಅಧೀನವಾಗಿರುತ್ತವೆ, ಮಾನವ ದೇಹದಲ್ಲಿ ವಾಸಿಸುವ ಭಗವಂತನನ್ನು ಅರಿಯದವರು ಅಜ್ಞಾನಿಗಳಾಗಿರುತ್ತಾರೆ, ಏಕೆಂದರೆ ಅವರು ಪ್ರಕೃತಿಯ ಯಾಂತ್ರಿಕತೆಗೆ ವಿಪರೀತವಾಗಿ ಅಧೀನರಾಗಿರುತ್ತಾರೆ, ಅದರ ಮಾನಸಿಕ ಸೀಮಿತತೆಗಳಿಗೆ ಅಧೀನರಾಗಿ ಅವುಗಳಿಗೆ ಮೂಗೊಪ್ಪಿಗೆ ಕೊಟ್ಟಿರುತ್ತಾರೆ, ಆಸೆಯಿಂದ ಭ್ರಮೆಗೊಳಪಡಿಸುವ ಹಾಗೂ ಅಹಂಮನ್ಯತೆಯಿಂದ ಸಂಕಲ್ಪ ಹಾಗೂ ಬುದ್ಧಿಮತ್ತೆಗಳಿಗೆ ದಿಗ್ಭ್ರಮೆ ಉಂಟುಮಾಡುವ ರಾಕ್ಷಸೀ ಸ್ವಭಾವದಲ್ಲಿ ನೆಲೆಸಿರುತ್ತಾರೆ, 'ಮೋಹಿನೀಮ್ ಪ್ರಕೃತಿಂ ಆಶ್ರಿತಾಃ' ಏಕೆಂದರೆ ಅಂತರಂಗದೊಳಗಿರುವ ಪುರುಷೋತ್ತಮನು ಯಾವುದೇ ಮತ್ತು ಪ್ರತಿಯೊಂದು ಸತ್ತೆಗೆ ಸುಲಭವಾಗಿ ಪ್ರಕಟನಾಗಿ ತೋರಿಸಿಕೊಳ್ಳುವುದಿಲ್ಲ , ತನ್ನನ್ನು ಅಂಧಕಾರದ ದಟ್ಟ ಮೋಡದ ಹಿಂದೆ ಇಲ್ಲವೆ ಪ್ರಕಾಶದ ಉಜ್ವಲ ಮೋಡದ ಹಿಂದೆ



ಮರೆಯಲ್ಲಿರಿಸುತ್ತಾನೆ, ತನ್ನ ಯೋಗ ಮಾಯೆಯಿಂದ* ಆವೃತನಾಗಿರುತ್ತಾನೆ, ಅದರಲ್ಲಿ ಸುತ್ತಿಕೊಂಡಿರುತ್ತಾನೆ. ''ಈ ಎಲ್ಲ ಜಗತ್ತು ಪ್ರಕೃತಿಯ ತ್ರಿಗುಣಗಳಿಂದ ನಿರ್ಧಾರಿತವಾದ ಮೂರು ಸ್ಥಿತಿಗಳಿಂದ ದಿಗ್ಭ್ರಮೆಗೊಳಗಾಗಿ ನನ್ನನ್ನು ಗುರುತಿಸುವುದರಲ್ಲಿ ವಿಫಲವಾಗುತ್ತದೆ, ಏಕೆಂದರೆ ಪ್ರಕೃತಿಯ ಗುಣಗಳಿರುವ ಈ ನನ್ನ ದೈವೀ ಮಾಯೆಯನ್ನು ದಾಟಿ ಹೋಗುವುದು ಕಠಿಣವಾದದ್ದು , ನನ್ನನ್ನು ಸಮೀಪಿಸುವವರು ಆ ಮಾಯೆಯನ್ನು ದಾಟಿ ಹೋಗುತ್ತಾರೆ ; ಆದರೆ ಸತ್ತೆಯ ಆಸುರೀ ಸ್ವಭಾವದಲ್ಲಿ ನೆಲೆಸಿರುವವರ ಜ್ಞಾನ ಮಾಯೆಯ ದಾಳಿಗೊಳಗಾಗಿರುತ್ತದೆ.'' ಎಂದು ಗೀತೆ ಹೇಳುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಎಲ್ಲರಲ್ಲೂ ಅಂತರ್ನಿಹಿತವಾದ ದೈವೀಪ್ರಜ್ಞೆ ಇದೆ, ಏಕೆಂದರೆ ಎಲ್ಲರಲ್ಲೂ ಭಗವಂತ ವಾಸಿಸುತ್ತಾನೆ, ಆದರೆ ಅಲ್ಲಿ ಅವನು ತನ್ನ ಮಾಯೆಯ ಮುಸುಕನ್ನು ಹಾಕಿಕೊಂಡು ವಾಸಿಸುತ್ತಾನೆ ಮತ್ತು ಸತ್ತೆಗಳ ಸಾರಭೂತ ಸ್ವ-ಜ್ಞಾನವನ್ನು ಅಪಹರಿಸಲಾಗಿರುತ್ತದೆ. ಮಾಯೆಯ ಕ್ರಿಯೆಯಿಂದ, ಪ್ರಕೃತಿಯ ಯಾಂತ್ರಿಕತೆಯ ಕ್ರಿಯೆಯಿಂದ ಸ್ವ-ಜ್ಞಾನ ಅಹಂಕಾರದ ದೋಷವಾಗುವ ತಿರುವನ್ನು ಪಡೆದಿರುತ್ತದೆ. ಆದಾಗ್ಯೂ ಪ್ರಕೃತಿಯ ಯಾಂತ್ರಿಕತೆಯಿಂದ ಅದರ ಆಂತರಿಕ ಹಾಗೂ ರಹಸ್ಯ ಪ್ರಭುವಿನತ್ತ ಹಿಂದೆ ಸರಿದು ಮನುಷ್ಯ ಅಂತರ್ನಿವಾಸಿ ಭಗವಂತನ ಬಗೆಗೆ ಅರಿವನ್ನು ಪಡೆಯಬಲ್ಲನು.

ಸ್ವಲ್ಪಮಟ್ಟಿಗಿನ, ಆದರೆ ಭಾಷೆಯಲ್ಲಿನ ಬಹಳ ಮಹತ್ವದ ವ್ಯತ್ಯಾಸದಿಂದ ಗೀತೆ ಸಾಮಾನ್ಯ ಜೀವಿಗಳು ಜನ್ಮತಾಳುವಿಕೆಯಲ್ಲಿರುವ ಭಗವಂತನ ಕ್ರಿಯೆ ಮತ್ತು ತಾನು ಅವತಾರವೆಂದು ಜನ್ಮತಾಳುವುದರಲ್ಲಿಯ ಕ್ರಿಯೆ ಇವುಗಳನ್ನು ಒಂದೇ ರೀತಿಯಲ್ಲಿ ವರ್ಣಿಸುತ್ತದೆ ಎಂಬುದು ಗಮನಾರ್ಹ ವಿಷಯ. ''ನನ್ನದೇ ಆದ ಪ್ರಕೃತಿಯ ಮೇಲೆ ವಾಲಿಕೊಂಡು 'ಪ್ರಕೃತಿಮ್ ಸ್ವಾಮ್ ಅವಷ್ಟಭ್ಯ' ನಾನಾವಿಧವಾದ ಅಸಂಖ್ಯಾತ ಜೀವಿಗಳನ್ನು ಹೊರಹೊಮ್ಮಿಸುತ್ತೇನೆ, ಪ್ರಕೃತಿಯ ನಿಯಂತ್ರಣಕ್ಕೊಳಗಾದ ಅವು ಅಸಹಾಯಕವಾಗಿರುತ್ತವೆ'' 'ಅವಶಮ್ ಪ್ರಕೃತೇರ್ವಶಾತ್.' ನನ್ನದೇ ಆದ ಪ್ರಕೃತಿಯನ್ನು ಒತ್ತಿ ಹಿಡಿದು ನಿಂತು ನನ್ನ ಯೋಗಮಾಯೆಯಿಂದ ಜನ್ಮ ತಾಳುತ್ತೇನೆ, 'ಪ್ರಕೃತಿಮ್ ಸ್ವಾಮ್ ಅಧಿಷ್ಠಾಯ ಆತ್ಮಮಾಯಯಾ' ನನ್ನ (ಮಾನವ) ಜನ್ಮವನ್ನು ಸೃಷ್ಟಿಸುತ್ತೇನೆ 'ಆತ್ಮಾನಮ್ ಸೃಜಾಮಿ'. 'ಅವಷ್ಟಭ್ಯ' ಶಬ್ದ ಒಳಗೊಳ್ಳುವ ಕ್ರಿಯೆಯ ಅರ್ಥ ಶಕ್ತಿಪೂರ್ಣವಾದ, ಕೆಳಮುಖದ ಒತ್ತಡ ಎಂದಿದೆ ; ಆ ಒತ್ತಡದ ಮೂಲಕ ನಿಯಂತ್ರಣಕ್ಕೊಳಗಾದ ಜೀವಿ

* ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾ ಸಮಾವೃತಃ

ಬಳಲಿಕೆಗೆ, ದಮನಕ್ಕೆ, ಒಳಗಾಗಿರುತ್ತದೆ, ತನ್ನ ಚಲನೆಯಲ್ಲಿ ಇಲ್ಲವೆ ಕಾರ್ಯಗತಿಯಲ್ಲಿ ನಿರ್ಬಂಧಕ್ಕೆ ಇಲ್ಲವೆ ಸೀಮಿತತೆಗೆ ಒಳಗಾಗಿರುತ್ತದೆ ಮತ್ತು ನಿಯಂತ್ರಿಸುವ ಶಕ್ತಿಗೆ ಅಸಹಾಯಕವಾಗಿ ಅಧೀನಕ್ಕೊಳಗಾಗಿರುತ್ತದೆ : 'ಅವಶಮ್ ವಶಾತ್' ಈ ಕ್ರಿಯೆಯಲ್ಲಿ ಪ್ರಕೃತಿ ಯಾಂತ್ರಿಕವಾಗಿರುತ್ತದೆ ಮತ್ತು ಅದರ ಅಸಂಖ್ಯಾತ ಜೀವಿಗಳು ಆ ಯಾಂತ್ರಿಕತೆಯಲ್ಲಿ ಅಸಹಾಯಕವಾಗುವಂತೆ ಹಿಡಿತಕ್ಕೆ ಒಳಗಾಗಿರುತ್ತವೆ, ಅವು ತಮ್ಮ ಕ್ರಿಯೆಯ ಪ್ರಭುವಾಗಿರುವುದಿಲ್ಲ. ತದ್ವಿರುದ್ಧವಾಗಿ 'ಅಧಿಷ್ಠಾಯ' ಶಬ್ದ ಒಳಗೊಳ್ಳುವ ಕ್ರಿಯೆಯ ಅರ್ಥ ಪ್ರಕೃತಿಯಲ್ಲಿ ವಾಸಿಸುವುದಲ್ಲದೆ ಅದನ್ನು ಮೆಟ್ಟಿ ನಿಂತಿರುವುದಾಗಿದೆ, ಅಂತರ್ನಿವಾಸಿ ದೇವ ಪ್ರಕೃತಿಯನ್ನು ಪ್ರಜ್ಞಾಪೂರ್ವಕ ನಿಯಂತ್ರಿಸುವುದು ಮತ್ತು ಅದರ ಮೇಲೆ ಆಳಿಕೆ ನಡೆಸುವುದಾಗಿದೆ. 'ಅಧಿಷ್ಠಾತ್ರಿ ದೇವತಾ'. ಆ ಕ್ರಿಯೆಯಲ್ಲಿ ಪ್ರಕೃತಿ ಪುರುಷನನ್ನು ಅಜ್ಞಾನದಿಂದ ಅಸಹಾಯಕನಾಗುವಂತೆ ಮುಂದೂಡುವುದಿಲ್ಲ , ಅದಕ್ಕೂ ಹೆಚ್ಚಾಗಿ ಪ್ರಕೃತಿ ಪುರುಷನ ಪ್ರಕಾಶ ಹಾಗೂ ಸಂಕಲ್ಪಗಳಿಂದ ತುಂಬಿಕೊಂಡಿರುತ್ತದೆ. ಆದ್ದರಿಂದ ಹೊರಹೊಮ್ಮುವ-ನಾವು ಹೇಳುವಂತೆ ಸೃಷ್ಟಿಸಲಾದ-ಸಾಮಾನ್ಯ ಜನ್ಮ ಅಸಂಖ್ಯಾತ ಜೀವಿಗಳದು ಇಲ್ಲವೆ ಸಂಭೂತಿಗಳದು, 'ಭೂತಗ್ರಾಮವಮ್', ಸ್ವ-ಸೃಷ್ಟಿಯಿಂದ ಹೊರಹೊಮ್ಮಿಸಲಾದ ದೈವೀ ಜನ್ಮ ಸ್ವ-ಪ್ರಜ್ಞೆ ಹಾಗೂ ಸ್ವ-ಅಸ್ತಿತ್ವವುಳ್ಳ ಸತ್ತೆಯದು. ಯುರೋಪಿನ ತತ್ವಜ್ಞಾನದಲ್ಲಿ ದೈವೀಸತ್ತೆ ಹಾಗೂ ಸಂಭೂತಿಗಳು ಇವರ ನಡುವೆ ಇರುವ ಭಿನ್ನತೆಯೇ ವೇದಾಂತದ ಅರ್ಥದಲ್ಲಿ ಆತ್ಮ ಹಾಗೂ ಭೂತಾನಿಗಳ ನಡುವೆ ಇದೆ. ಈ ಎರಡೂ ಸಂದರ್ಭಗಳಲ್ಲಿ ಸೃಷ್ಟಿಗೆ ಅಥವಾ ಪ್ರಕಟಣೆಗೆ ಪ್ರಕೃತಿಯೇ ಸಾಧನ, ಆದರೆ ದೈವೀ ಜನ್ಮಕ್ಕೆ 'ಆತ್ಮಮಾಯೆ' ಕಾರಣ. ಅದು ಅಜ್ಞಾನದ ನಿಮ್ನ ಮಾಯೆಯಲ್ಲಿ ತೊಡಕಿ ಹಾಕಿಕೊಂಡಿರುವುದಿಲ್ಲ , ಆದರೆ ಅದು ತನ್ನ ಕಾರ್ಯಾಚರಣೆ ಹಾಗೂ ಉದ್ದೇಶಗಳ ಬಗ್ಗೆ ಸರಿಯಾದ ಅರಿವಿರುವ, ಗೋಚರ ಸ್ವ-ಪ್ರತಿನಿಧಿಸುವಿಕೆಯಲ್ಲಿ ಸ್ವ-ಅಸ್ತಿತ್ವದಲ್ಲಿರುವ ದೇವನಾಗಿರುತ್ತದೆ-ಅದನ್ನು ಗೀತೆ ಬೇರೆಡೆ 'ಯೋಗಮಾಯೆ' ಎಂದು ಕರೆದಿದೆ. ಸಾಮಾನ್ಯ ಜನ್ಮದಲ್ಲಿ ಭಗವಂತ, ಯೋಗಮಾಯೆ ಆ ಜನ್ಮವನ್ನು ಆವರಿಸಿಕೊಳ್ಳುವಂತೆ ಮತ್ತು ನಿಮ್ನ ಪ್ರಜ್ಞೆಯಿಂದ ತನ್ನನ್ನು ಮರೆಯಲ್ಲಿರಿಸುವಂತೆ ಮಾಡಲು ಉಪಯೋಗಿಸುತ್ತಾನೆ, ಅದರಿಂದಾಗಿ ನಮಗೆ ಅದು (ಯೋಗಮಾಯೆ) ಅಜ್ಞಾನದ ಸಾಧನವಾಗುತ್ತದೆ 'ಅವಿದ್ಯಾಮಾಯಾ'; ಆದರೆ ಅದೇ ಯೋಗಮಾಯೆಯ ಮೂಲಕವೇ ನಮ್ಮ ಪ್ರಜ್ಞೆ ಮರಳಿ ಭಗವಂತನತ್ತ ಹೋಗುವುದಕ್ಕೆ ಸಾಧನವಾಗುತ್ತದೆ, ಅದು 'ವಿದ್ಯಾಮಾಯಾ', ಜ್ಞಾನಕ್ಕೆ



ಸಾಧನ. ದೈವೀ ಜನ್ಮದಲ್ಲಿ ಅದು ಕಾರ್ಯ ಮಾಡುವ ರೀತಿಯೆಂದರೆ-ಸಾಮಾನ್ಯವಾಗಿ ಅವಿದ್ಯೆಯಲ್ಲಿ ಕೈಕೊಳ್ಳುವ ಕಾರ್ಯಗಳನ್ನು ಜ್ಞಾನ ನಿಯಂತ್ರಿಸುವಂತೆ ಮತ್ತು ಪ್ರಕಾಶಿತಗೊಳಿಸುವಂತೆ ಮಾಡುತ್ತದೆ. ಆದ್ದರಿಂದ ಗೀತೆಯ ಭಾಷೆ ತೋರಿಸಿ ಕೊಡುವುದೇನೆಂದರೆ ದೈವೀ ಜನ್ಮ , ನಮ್ಮ ಮಾನವತೆಯಲ್ಲಿ , ಪ್ರಜ್ಞಾಪೂರ್ಣ ದೇವನದಾಗಿರುತ್ತದೆ ಮತ್ತು ಸಾರದಲ್ಲಿ ಸಾಮಾನ್ಯ ಜನ್ಮಕ್ಕೆ ವಿರುದ್ಧವಾಗಿರುತ್ತದೆ ; ಆದಾಗ್ಯೂ ಇವೆರಡೂ ರೀತಿಯ ಜನ್ಮಗಳಿಗೆ ಸಾಧನ ಒಂದೇ ಆಗಿರುತ್ತದೆ. ದೈವೀ ಜನ್ಮ ಅವಿದ್ಯೆಯಲ್ಲಾಗುವ ಜನ್ಮವಲ್ಲ, ಆದರೆ ಅದು ಜ್ಞಾನದ ಜನ್ಮವಾಗಿರುತ್ತದೆ ; ಭೌತಿಕ ಗೋಚರ ವಿಷಯವಲ್ಲ, ಆದರೆ ಅದು ಆತ್ಮದ ಜನ್ಮವಾಗಿರುತ್ತದೆ. ಅದು ಸ್ವ-ಅಸ್ತಿತ್ವದಲ್ಲಿರುವ, ತನ್ನ ಸಂಭೂತಿಯನ್ನು ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸುವ, ಅಜ್ಞಾನದ ಮೋಡದಲ್ಲಿ ಸ್ವ-ಜ್ಞಾನವನ್ನು ಕಳೆದುಕೊಳ್ಳದಿರುವ ದಿವ್ಯಾತ್ಮ ಜನ್ಮತಳೆದು ಬರುವುದಾಗಿದೆ. ಅದು ದಿವ್ಯಾತ್ಮ ಪ್ರಕೃತಿಯ ಪ್ರಭು ಎಂದು ದಿವ್ಯ ದೇಹಧಾರಣೆ ಮಾಡುವುದಾಗಿದೆ. ಹೀಗೆ ದೇಹಧಾರಣೆ ಮಾಡಿದ ದಿವ್ಯಾತ್ಮ ಮೇಲ್ಗಡೆ ನಿಂತುಕೊಂಡು ಪ್ರಕೃತಿಯಲ್ಲಿ ಮುಕ್ತವಾಗಿ, ತನ್ನ ಸಂಕಲ್ಪದಿಂದ ಕಾರ್ಯಾಚರಣೆ ನಡೆಸುತ್ತಾನೆ, ಅದರ ಯಾಂತ್ರಿಕತೆಯ ತೊಡಕಿನಲ್ಲಿ ಸಿಕ್ಕಿ ಹಾಕಿಕೊಂಡು ಅಸಹಾಯಕವಾಗಿ ಸುತ್ತು ಹೊಡೆಯುವುದಕ್ಕೆ ಒಳಗಾಗುವುದಿಲ್ಲ , ಏಕೆಂದರೆ, ಅವನು ಜ್ಞಾನದಲ್ಲಿ ಕಾರ್ಯಮಾಡುತ್ತಾನೆ, ಹೆಚ್ಚಿನ ಜನರು ಮಾಡುವಂತೆ ಅಜ್ಞಾನದಲ್ಲಿ ಮಾಡುವುದಿಲ್ಲ. ಅದು ಪರದೆಯ ಹಿಂದೆ ಇದ್ದು ತನ್ನ ಆಳಿಕೆ ನಡೆಸುವ ರಹಸ್ಯದಿಂದ ಮನುಷ್ಯನ ಮಾದರಿಯಲ್ಲಿ ಮುಂದೆ ಬಂದು ಪೂರ್ತಿಯಾಗಿ ವಶವರ್ತಿ ಮಾಡಿಕೊಳ್ಳುವುದಾಗಿದೆ. ಆದರೆ ದಿವ್ಯಾತ್ಮನಾಗಿಯೂ ಸಾಮಾನ್ಯ ರೀತಿಯಲ್ಲಿ ಪರದೆಯ ಹಿಂದಿನಿಂದ ತಾಳಿದ ಜನ್ಮ ಈಶ್ವರನದಾಗಿದ್ದರೂ ಪರದೆಯ ಮುಂಭಾಗದಲ್ಲಿರುವ ಬಾಹ್ಯಪ್ರಜ್ಞೆ ವಶವರ್ತಿಗೊಳಗಾಗಿರುತ್ತದೆ, ತನ್ನ ವಶದಲ್ಲಿರುವುದಿಲ್ಲ , ಏಕೆಂದರೆ ಅಲ್ಲಿ ಅದು ಭಾಗಶಃ ಪ್ರಜ್ಞೆಯುಳ್ಳ, ಸ್ವ-ಜ್ಞಾನಕ್ಕೆ ಎರವಾದ ಜೀವ, ಪ್ರಕೃತಿಗೆ ಗೋಚರ ಅಧೀನತೆಗೆ ಒಳಗಾಗುವುದರ ಮೂಲಕ ತನ್ನ ಕಾರ್ಯಗಳಲ್ಲಿ ಬಂಧನಕ್ಕೊಳಗಾದದ್ದು. ಆದ್ದರಿಂದ ಅವತಾರಿ ಪುರುಷ,* ದೈವೀ ಸ್ಥಿತಿಯಲ್ಲಿರುವ ಸತ್ತೆಯೂ ದಿವ್ಯಾತ್ಮನೂ ಆದ ಶ್ರೀಕೃಷ್ಣನ ಮೂಲಕ ನೇರವಾಗಿ ಪ್ರಕಟನಾಗುತ್ತಾನೆ ; ಮಾನವ ಆತ್ಮನಾದ, ಮಾನವರಲ್ಲಿ ಶ್ರೇಷ್ಠ

---

* 'ಅವತಾರ' ಶಬ್ದದ ಅರ್ಥ ಅವರೋಹಣ. ಅದು ಮಾನವ ಜಗತ್ತನ್ನು ಇಲ್ಲವೆ ಮಟ್ಟವನ್ನು ದೈವಿಕವಾದುದರಿಂದ ವಿಭಜಿಸುವ ರೇಖೆಯ ಕೆಳಗೆ ಭಗವಂತ ಕೆಳಗಿಳಿದು ಬರುವುದಾಗಿದೆ.